UNIVERSAL LIBRARY

OU_200617

UNIVERSAL LIBRARY

# ಗಿಳಿವಿಂಡು

*'Those who make nothing new destroy'*—*Masefield*

ಗೋವಿಂದ ಪೈ

ಬಾಲ ಸಾಹಿತ್ಯಮಂಡಲ, ಲಿಮಿಟೆಡ್, ಕೊಡಿಯಾಲಬೈಲ್
ಇವರಿಂದ ಪ್ರಕಟವಾಯಿತು.

1930

ಸತ್ಯಶೋಧನಾ ಪುಸ್ತಕ ಭಂಡಾರ
TAKA PUBLISHING HOUSE
BASAVANGUDI P. O.
ಬೆಂಗಳೂರು ನಗರ

[ಬೆಲೆ. ೧೦ ಆಣೆ

CHECKED 1958

Checked 1965

1969

PRINTED AT THE CODIALBAIL PRESS,
MANGALORE

"ಕಾವ್ಯಂ ನ ಮಮಾರ ನ ಜೀರ್ಯತಿ"
(ಅಥರ್ವವೇದ X 8. ೩೨)

## ಸಮರ್ಪಣ

ನೀಳ್ದಿಂ ಮೂವತ್ತು ಕಾಲಂ ಪವಣಿಸಿದುಲಿಯೊ ಗೆಜ್ಜೆಯಂ ಕಾಲ್ಗೆ ನಿನ್ನ—
ಜೇಯೆನ್ನೀ ಕಾಣ್ಕೆದಾಳಳ್ತಿಯೆ! ಕವಿವಿನುತಿಸ್ರಗ್ಧರಾ, ತಳ್ಳವೇಡಾ!
ಛಂದೋವೇದೀ ನಟಂ ನೀಂ ಕೊಳದೊಡಮಿದೆಕೊಳ್ಳೆಂದೆನೆಂದಂದೆ ಧನ್ಯಂ
ಗೆತತ್ತಾಂ ಸಿಗ್ಗಾಗೆ, ನೀನಕ್ಕೈಮ ಕೊಳುವುಳಿವಂ, ನೀಡೆ ತಪ್ಪೇನೊ ದೇವಾ!

ಕಾಲೇ ಕಾಲೇ ನವಾಚಾರಾ
ನವಾ ವಾಣೀ ಮುಖೇ ಮುಖೇ ||

# ಮುನ್ನುಡಿ

ಕಡಲ ಕರೆಯಲ್ಲಿ ಹೊತ್ತುಗಳೆಯಲೆಂದೇ ಆಡುತ್ತಿರುವ ಯಾವೊಂದು ಮಗುವಾದರೂ ಅಲ್ಲಲ್ಲಿ ಮೇಲಕ್ಕೆ ಉರುಳಿದ ಚಿಪ್ಪು ಗಳನ್ನು ತಾನು ಹೆಕ್ಕಿದಂತೆ ಮರಳಿ ತೆರೆಗಳ ಆಳಕ್ಕೆ ಒಗೆದು ಬಿಡದೆ ಅವನ್ನು ತನ್ನ ಕಣ್ಣ ಮುಂದೆ ಒಟ್ಟುಹಾಕುವಂತೆ, ಅಲ್ಲಲ್ಲಿ ಚದರಿದ್ದ ನನ್ನೀ ಕೆಲವು ಕವಿತೆಗಳನ್ನು ಅಂದಂದಿನ ಮರೆಯಿಂದೆ ತ್ತಿಕೊಂಡು ಹೀಗೆ ಸಂಗ್ರಹವಾಗಿ ಕೂಡಹಾಕಿರುವೆನಷ್ಟೆ. ಅಥವಾ ಯಾವಾವೆಡೆಯಲ್ಲಿರುವ ತನ್ನ ಮಕ್ಕಳನ್ನು ಒಟ್ಟಿಗೇ ಒಮ್ಮೆ ನೋಡ ಬೇಕೆಂದು ಕುತೂಹಲಿಸಿ ಅವರೆಲ್ಲರನ್ನು ತನ್ನ ಬಳಿಗೆ ಬರಿಸಿಕೊಂಡು ಸುಖಿಸುವ ತಾಯ ಮಮತೆಯಿಂದ ಇವನ್ನು ಹೀಗೆ ಸಂಗ್ರಹಿಸಿರು ವೆನೆಂದರೂ ಸರಿಯೇ. ಆದರೆ ಈ ಬಗೆಯ ಮರುಕಾಣಿಕೆಯ ಅವಕಾಶವನ್ನು ಇವಕ್ಕೆ ಇತ್ತುದರಿಂದ ತಾನೆ ಇವುಗಳ ಜೀವನಾ ವಧಿಯನ್ನು ಹೆಚ್ಚಿಸುವೊಂದು ಹಂಚಿಕೆಯನ್ನೂ ಹೂಡಿದಂತಾಗದೇ ಎಂದು ರವಷ್ಟಾದರೂ ವಂಚಿಸಿಕೊಳ್ಳಲೊಲ್ಲೆ, ಏಕೆಂದರೆ ಅದೊಂ ದು ನನ್ನಳವೂ ಅಲ್ಲ, ಯಾರಳವೂ ಅಲ್ಲ, ದೈವಾಯತ್ತವಷ್ಟೇ. ತಾಯಿ ಮಕ್ಕಳನ್ನು ಹೆರಬಲ್ಲಳೇ ಹೊರತು ಅವಕ್ಕೆ ಆಯುಸ್ಸನ್ನು ಕೊಡಬಲ್ಲಳೇ ?

ಈ ಕವಿತೆಗಳು ಕಳೆದ ಮೂವತ್ತೇನೋ ವರ್ಷಗಳಲ್ಲಿ ಅಷ್ಟಮಿಗೊಂದು ಶಿವರಾತ್ರಿಗೊಂದು ಎಂಬಂತೆ ರಚಿತವಾದುವು. ಅವೆಲ್ಲ ವರ್ಷಗಳಲ್ಲಿ ನನ್ನ ಲೇಖನಿ ಏಕಪ್ರಕಾರವಾಗಿ ಜಾಗ್ರತ ವಾಗಿದ್ದಿತೆಂದು ಭಾವಿಸಲಾಗದು. ಆಗ್ಗಾಗ್ಗೆ ಕವಿತಂದ ದುಃಖ ಗಳಲ್ಲಿ ವಾಣಿಯ ಕರೆ ಕೇಳಿಸದೆ ನಡುನಡುವೆ ಎಷ್ಟೋ ವರ್ಷ ಗಳಾಗಿವೆ; ಕೇಳಬಂದ ಕರೆಯನ್ನು ಕೂಡ ಒತ್ತಾಯದ ಕೆಲಸಗಳ

ಸಡಗರದಲ್ಲಿ ಈಗ ನಾನೊಲ್ಲೆನೆಂದು ಕಿವಿಗೆ ಹಾಕಿಕೊಳ್ಳದೆ ಇನ್ನೆಷ್ಟೋ ವರ್ಷ ಹೋಗಿವೆ. ಏವಂ ಚ ಕವಿಧರ್ಮದಿಂದ ಆಕೆಯನ್ನು ಓಲಯ್ಸುವಲ್ಲಿ, ಆಕೆಯ ಸಂದೇಶಗಳನ್ನು ನಂಬುಗೆಯಿಂದ ನೆರವೇರಿಸುವಲ್ಲಿ ನಾನು ಬೇಕಾದಷ್ಟು ಅಸಡ್ಡೆ ಮಾಡಿರುತ್ತೇನೆಂಬುದನ್ನು ಪಶ್ಚಾತ್ತಾಪದಿಂದ ಒಪ್ಪಿಕೊಳ್ಳುತ್ತೇನೆ. ಆಕೆಯಾದರೊ ನನ್ನಲ್ಲಿ ಈಷತ್ತಾದರೂ ಪ್ರತಿಕಾರವನ್ನು ಬಗೆದಿಲ್ಲವಾದರೆ, ಶಾನೆ ಸಿಟ್ಟುಗೊಂಡಿಲ್ಲವಾದರೆ,

'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ'

ಎಂಬ ಮಾತು ನಮ್ಮಲ್ಲಿ ಈಡೇರಿತೆಂದೇ ನಿಜ.

ಈ ಕವಿತೆಗಳನ್ನು ಹೆಚ್ಚುಕಡಿಮೆ ಇವುಗಳ ರಚನೆಯ ಕಾಲಕ್ರಮಕ್ಕೆ ಅನುಸಾರವಾಗಿ ಇಲ್ಲಿ ಕೊಟ್ಟಿರುತ್ತದೆ ಇವುಗಳಲ್ಲಿ ಎಲ್ಲವೆಂಬಂತೆ ಅಂದಂದಿನ ಸ್ವದೇಶಾಭಿಮಾನಿ – ಕಂಠೀರವ – ಸತ್ಯಾಗ್ರಹಿ – ರಾಷ್ಟ್ರಬಂಧು – ಬೋಧಿನಿ – ಕನ್ನಡ ಕೋಗಿಲೆ – ಕನ್ನಡ ಸಹಕಾರಿ – ಸುವಾಸಿನಿ – ಕರ್ಣಾಟಕ ಕೇಸರಿ – ಉದಯಭಾರತ – ಶಕ್ತಿ – ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ – ಸರಸ್ವತಿ – ಜಯಕರ್ಣಾಟಕ – ಕಥಾಂಜಲಿ ಎಂಬೀ ಪತ್ರಿಕೆಗಳಲ್ಲಿ ಪ್ರಕಟವಾದುವು. ಇವುಗಳ ಅರ್ಹತೆಗೆ ಎಷ್ಟೋ ಮಿಕ್ಕಿದ ಉದಾರಾತಿಥ್ಯವನ್ನು ತಂತಮ್ಮ ಪತ್ರಿಕೆಗಳಲ್ಲಿ ಇವಕ್ಕೆ ಇತ್ತ ಬಗ್ಗೆ ಅವೆಲ್ಲ ಪತ್ರಿಕೆಗಳ ಸಂಪಾದಕ ಮಹಾಶಯರುಗಳಿಗೆ ಅತ್ಯಂತ ಕೃತಜ್ಞನಾಗಿರುತ್ತೇನೆ. ಇತಿ ಶಮ್.

ಮುಂಜೇಶ್ವರ
ಪ್ರಮೋದ ಸಂ। ಆಶ್ವೀಜ ಶುಕ್ಲ ೪
26 ಸಪ್ಟಂಬರ 1930

ಗೋವಿಂದ ಪೈ

# ವಿಷಯ ಸೂಚಿಕೆ

## ಗಿಳಿವಿಂಡು


೧ ಚಿಟ್ಟಿಗೆ . . . . . . . 1
೨ ಪರಮಾತ್ಮನೆಲ್ಲಿರುವನು? . . . . . 1
೩ ಬಾನಕ್ಕಿಗೆ . . . . 3
೪. 'ಹಿಂದುಸ್ತಾನ್ ಹಮಾರಾ' . . . 8
೫ ವಿದಾಯ . . . . . . . 9
೬ ಹೊಲೆಯನು ಯಾರು? . . 12
೭ ತುರ್ಕಿಯ ಪರವಾಗಿ ದೇವರೊಡನೆ ಪ್ರಾರ್ಥನೆ 14
೮ ಕವಿತೆ . . . . 17
೯ ವಿಶ್ವಾಂಜಲಿ . 20
೧೦ ಹಳೆಯ ನಾಣ್ಯ . . . 21
೧೧ ಕವಿತಾವತಾರ . . . 26
೧೨ ಭಾರತ ಭಾಗ್ಯ ವಿಧಾತಾ . . 26
೧೩. ರಾಷ್ಟ್ರೀಯ ಶಿಕ್ಷಣದ ಸಪ್ತಾಹದ ಕರೆ . . . 28
೧೪. ಪಾತರಗಿತ್ತಿಗೆ. . . . . 30
೧೫ ಕೇಳಿಸದ ಕರೆ . . . 30
೧೬ ಯೇಸು—ಕೃಷ್ಣ . . . . . 32
೧೭ ನಂಬಲೆಂತು? . . . . . 35
೧೮ ಮಹಾತ್ಮರ ಉಪವಾಸ . . . . 37
೧೯ ತೌಳವ ಮಾತೆ . . . . . 38
೨೦ ಚಾತಕ . . . . . 39
೨೧ 'ಆಯ್ದುಯ್ದುರನಿತಯ್ದುತಯ್ದಿತಾ ಕಾಲಂ' . . 40
೨೨ ಮರೆತೆ . . . . 41
೨೩ ಶ್ರೀ ವಿದ್ಯಾರಣ್ಯರ ಅಡಿದಾವರೆಯಲ್ಲಿ . . . 41
೨೪ ಕಡವಿನಲ್ಲಿ . . . . . . 44
೨೫ 'ಆತ್ಮಾನಂ ವಿದ್ಧಿ' . . . . . . . 46
೨೬. ಯುಗಾದಿಯ ನೆನಪು . . . . . . . 47
೨೭ 'ಬಾಲೆ ನಿನ್ನಯ ತಮ್ಮನೆಲ್ಲಿ?' . . . . . 49
೨೮ ಕ್ವ? . . . . . . . . 58
೨೯. ಓಳುಗುಳದ ಮನವಿ . . . . . . 59

೩೦. ಪಂಢರಪುರದಲ್ಲಿ . . . . . . 62
೩೧ ಪಾಲುಮಾರಿಕೆ . . . . 64
೩೨ ಕನ್ನಡಿಗರ ತಾಯಿ . . . . . . 68
೩೩ ಬೇಕು—ಬೇಡ . . . . 71
೩೪ ಹೆಂಗಸು . . . . 79
೩೫ ಸಫಲ . . . . 80
೩೬ ಮಹಾಕವಿ ಕುಮಾರವ್ಯಾಸನಿಗೆ . . 82
೩೭. 'ಸುಮ್ಮನೇಕೆನ್ನನೆಲೆ ವಿಧಿಯೆ ಕಾಡಿಸುವೆ ?' . . . 87
೩೮ 'ಬಲ್ಲುದೆ ಲತೆ ಫಲಂ ತನ್ನ' . . 88
೩೯ 'ಜೀವನದೀ ಮಧು ಮಾಸಂ' . . . . 90
೪೦ ಬರ್ಡಿಲ . . . . . . . 92
೪೧ ಜಯ ಜಯಾ! . . . . . 92
೪೨. ಕವಿ ಮತ್ತು ವಿಮರ್ಶಕ . . . . 94
೪೩ ಉಂಟು . . . . . . . 95
೪೪ ಎಲ್ಲಿ ? . . . . . . . 95

'ಉಮರ್ ಖಯ್ಯಾಮ್' 97

೪೫ ಕೃಷ್ಣಾರ್ಪಣ . . . . . 109

*‘Hear, see and feel, in faith's simplicity’—Browning.*

# ಗಿಳಿವಿಂಡು

ನನ್ನವೀ ನುಡಿಗಳಿರ ! ಕಾಲದಲೆಗಳಲಿ
ನಿಮ್ಮನುರಿಹಣತೆಯಂತಿದೊ ತೇಲಬಿಡುವೆ,
ಅನುಗೊಳಲಿ ಜಗದುಸಿರು ನಿಮಗೆದುರುಗೊಳಲಿ,
ಅಳ್ವಿನಂ ಬಾಳ್ವುದೆಂಬುದೆ ನಿಮ್ಮ ಗೊಡವೆ.

ತನ್ನ ಮರಿಗಳೊಳೊಮ್ಮೆ ಕಟ್ಟಿರಕೆ ಮೂಡಿ
ದನಿತುಮಂ ಪೊರಮಡಿಸಿದುಲಿವಕ್ಕಿಯುಮ್ಮ
ಸಂಜೆಯೊಳವಂ ಗೂಡುಗೊಳಿಪಂತೆ ಕೂಡಿ
ಸಿಡುವೆನಾನೀ ಹೊತ್ತಗೆಯೊಳೆನ್ನ ನಿಮ್ಮ.

ನನ್ನವೆಂದೆನೆ ನಿಮ್ಮನೆಲ್ಲಿಂದಲೆಲ್ಲಿ
ಗಯ್ದಲಂದಂದು ಹೊರಟಾ ನಡುವೆ ನಿಂತು
ನನ್ನೆದೆಯೊಳರೆಗಳಿಗೆ ಉಲಿದುಲಿಸಿದಲ್ಲಿ
ನನ್ನವಾದಿರೆ ? ನಿಮ್ಮನೆನ್ನವೆನಲೆಂತು ?

**ತೋಟವಾವುದನೊ ತಮ್ಮನುಪಥದಿ ಕಂಡು
ಕ್ಷಣಮೆರಗಲಾ ತೋಟದಹುದೆ ಗಿಳಿವಿಂಡು ?**

# ಚಿಟ್ಟೆಗೆ

(Wordsworth ಎಂಬ ಆಂಗ್ಲ ಕವಿಯ ಕವಿತೆಯನ್ನು ಅವಲಂಬಿಸಿ ಬರೆದುದು).

ನಿಂದಿರು ಕುಲುಂಕದಿರೆರಂಕೆಗಳ ನಿನ್ನ,
ಮುಂದು ಬಳಿಸಂದು ಕುಣಿ ಕಣ್ಣೆದುರೊಳಿನ್ನ,
ನಿನ್ನ ನಿರುಕಿಸಲೊರೆವೆನೊರೆವ ಕೆಳೆನುಡಿಯ
ನನ್ನೆಳೆಯ ಬಣ್ಣಿಸುವ ಚಿಣ್ಣ ಕವಿಯೊಡೆಯ !

ಹೊನ್ನಿನಂಬಿಯ ಗಾಡಿಯಿಂದ ತೇಲಾಡು,
ಇನ್ನು ಪಾರದಿರೆನ್ನ ಬಳಿಯೆ ಸೊಗಗೂಡು;
ಚಿಟ್ಟೆ ನೀ ನೆನವೊಳೆನ್ನೆಳವೆಯನಳುಂಬಂ
ತಿಟ್ಟವಿಡೆ ಕಣ್ಮಲೆವುದೆಮ್ಮಯ ಕುಟುಂಬಂ !

ಇನಿದು ಕಟ್ಟನಿದಮುವು ಹಸುಳೆಯೂ ಹೊತ್ತು
ಕನಸಂತೆ ಮುಗಿದುದೆಯಾಟದೊಲವೆತ್ತು,
ತಂಗಿಯೊಡಗೂಡಿ — ಅಕಟವಳೆಲ್ಲಿಗಿಂದು ? —
ಬೆಂಗೊಳುತ ಬೇಟೆಯಾಡಿದೆ ನಿಮ್ಮನಂದು.

ಕಿರುಬೇಡನಂತೆ ಪೊದೆಪೊದೆ ಸೋವು ನಿಮ್ಮ
ನರೆಬರನು ಹೊರವಡಿಸಿ ಹಿತ್ತಿಲೊಳಗಮ್ಮ,
ಸೆರೆವಿಡಿದು ಮುದ್ದು ತಂಗಿಗ ನೀಡಲವಳು
ಗರಿಯ ದೂಳನು ಮುಲ್ಲನೊರಸಲಳುಕುವಳು !

---

# ಪರಮಾತ್ಮನೆಲ್ಲಿರುವನು ?

ಪರಮಾತ್ಮನಾರೆಂದು ತಿಳಿಯಲೆಳಸುವೆಯಾ ?
ಇರುವನೆತ್ತಲೆನುತ್ತ ಕೇಳಲಿಚ್ಛಿಪೆಯಾ ? ॥ ೧ ॥

ತನ್ನ ಕಡುಸೊಡರ ಬೆ
ಳ್ಪನ್ನ ತಿಳಿಮುಂಜಾವ
ದನ್ನ ಮುಗುಳಿಸುವ ಬೆಳ್ಳಿಯ ಬಟ್ಟಲಿಂ
ಚೆನ್ನೆಸುವ ಕೂರ್ಗಣೆಗ
ಳಿನ್ನದೆಲ್ಲಿಹುದೆಂಬು
ದನ್ನರಿವೆವೆಂತೊ ಕಂಗೊಳದನ್ನೆಗಂ

ಕಳಕಳಿಸುತಿಹುದೆಲ್ಲ
ವಿಳೆಗಾಳಿ ನಿನ್ನುಲಿಗೆ
ಬೆಳೆವಿರುಳು ಬಯಲಾಗಲೊಂಟಿ ಮುಗಿಲಿಂ
ಬೆಳುಗದಿರನುರೆ ತನ್ನ
ಬೆಳುಗದಿರ ಸಯ್ಗರೆಯೆ
ತುಳುಕುತ ನಭಂ ಪೊನಲ್ವರಿಯುವಂತೆ

ಅರಿಯೆವಾರೆಂದು ನೀ
ನಿರುವುದೇಂ ನಿನಗೆ ಕ
ಟ್ಪೊರೆಯೆಂದುಮರಿಯೆವೀ ನಿನ್ನ ಕೆಲದಿಂ
ಕರೆವಿಂಚರದ ಧಾರೆ
ಯೊರೆಯು ಮಿರುವನಿಗಳ
ನ್ನೆರಚದಾ ಮಳೆವಿಲ್ಲನಾಂತ ಮುಗಿಲು.

ಬಗೆತದೊಳಬೆಳಕಿನಲಿ
ಬಿಗಿಯುಡಗಿ ಜಗವಣಂ
ಬಗೆಗೊಳದ ಕೋರಿಕೆಯುಳರ್ಕೆ ಜಗಕೆ
ಬಗೆವುಗುವಿನಂ ತನ್ನೊ
ಸಗೆಗಳಂ ಸ್ವಚ್ಛಂದ
ಮೊಗೆತಂದು ಹಾಡುವಾ ಕವಿಯೊ ನೀನು ?

ಅರಮನೆಯ ಗೋಪುರದಿ
ವಿರಹಭಾರದಿ ಬಳುಕು
ವಿರವನೇಕಾಂತದಾ ನೆಲೆಯ ವಿಸಟಂ

ಬರಿವಕ್ಕರನಿತೆ ಸುಮ
ಧುರ ಗಾನದಲಿ ಸಂತ
ವಿರಿಸುವ ಕುಲೀನ ಕನ್ನಿಕೆಯೊ ನೀನು ?

ತೊಳಲ್ವ ಮಂಜಿನ ತಪ್ಪ
ಲೊಳಗೆ ತನ್ನೊಡಲ ಮರೆ
ಗೊಳಿಪ ಹೂವುಲ್ಲುಗಳ ಬಾಸಣಿಯೊಳು
ಸುಳುಹು ಕಾಣಿಸದೆಲರ
ತೆಳುವ ಬಣ್ಣವ ಚಲ್ಲ
ತಳಿವ ಮಿಸುನಿಯ ಮಿಂಚುಹುಳುವೊ ನೀನು ?

ಬಿಸಿಯ ಗಾಳಿಗೆ ಬಳಲಿ
ದೆಸಳುದುರೆ, ಪರಿಮಳವ
ಕಸಿದೊಯ್ವ, ಕಳ್ಳೆಲರ ಬಿಣ್ಗರಿಗಳು
ಕುಸಿವನಕ ಕಡುಗಂಪ
ಪಸರಿಸುತ ಹಸುರೆಲೆಯ
ಹಸೆಯೊಳೊರಗಿರುವ ತಾವರೆಯೊ ನೀನು ?

ಮಿನುಗುವುಲ್ಲಲಿ ಸುಗ್ಗಿ
ಯಿನಿಸೂಸುವೆಳೆಮಳೆಯ
ದನಿಯೊ ? ಮಳೆಯಿಂದೆಚ್ಚರಿತಲರ್ಗಳೊ ?
ತನಿವೆತ್ತ, ತಿಳಿವೆತ್ತ,
ಮನಕೆ ಹರಿಸಂಬತ್ತ
ವನಿತೆಲ್ಲ ಮೀರುತಿದೆ ನಿನ್ನಿಂಚರಂ

ಗರಿಯ ವಿಕ್ಕಿರನೊ ಕಿ
ನ್ನರನೊ ಬಗೆವೆದೆಯ ಮಾ
ಧುರಿಯನರುಹೆಮಗೆಂದುಮಾಲಿಸಿಲ್ಲ
ಸುರೆಯ ಚರ್ಚರಿ ದಲ
ಕ್ಕರೆಯ ಸಂಸ್ತುತಿ ಎದಿ
ಸುರಿದಿಂತು ದಿವ್ಯ ಹರ್ಷಾವೇಶವಂ.

ಎಣೆಯಹುದೆ ನಿನ್ನ ಗಾ
ಯಣಕೆ ಮದುವೆಯ ತೂರ್ಯ
ಮೊಳೆಬಹುದೆ ಜೈತ್ರಯಾತ್ರೆಯ ಘೋಷಿತಂ ?
ಬಣಗು ಹೆಮ್ಮೆಯದೆಲ್ಲ—
ಗಣಿಸಲಾವುದೂ ಕೊರತೆ
ಯಣಗಿರುವುದದರೊಳೆಂದರಿಯದಿಹೆವೆ ?

ಏ ವಿಷಯಮಿಂತು ಸೊಗ
ದೀವ ಗಾನದ ಬುಗ್ಗೆ?
ಯಾವೆಲ್ಲ ಹೊಲವೊ ? ಯಾವಲೆಯೊ ಮಲೆಯೊ ?
ಯಾವ ಬಯಲಿನ ಬಾನ
ರೂಪುಗಳೊ ? ಬಾಂಧವರ
ನೋವ ನಲ್ಮೆಯೊ ? ನೋವಿನರಿಯಮೆಯದೊ ?

ಕ್ಲಾಂತಿಯೇಂ ನಿನ್ನ ಕಡು
ಸಂತಸದ ತಿಳಿಮೊಗಿ
ನ್ನೆಂತು ನಿನ್ನಯ ಬಳಿಗೆ ತನ್ನ ನೆಳಲಂ
ಚಿಂತೆ ಸಾರ್ಚಿತು ? ಕೂರ್ಮೆ
ಯಾಂತಿರುವೆಯಾದೊಡಂ,
ನೀಂ ತಿಳಿಯೆ ಕೂರ್ಮೆಯುಮ್ಮಳಿಕೆಯುಳಲಂ.

ತನುವಳಿವ ನಾವೆಂದೊ
ಕನಗಾಂಬ ವಿಷಯದಿಂ
ದೆನಿತೊ ನಿಸದಮಗಾಧಮೆನಿತೊ ಸಾವಂ
ನೆನದೊಳಂ ಕನಡೊಳಂ
ಮನನಿಸುವೆ ನೀನಲ್ಲ
ಡಿನಿತು ತಿಳಿಸೆಳೆಯೊ ನಿನ್ನಯ ಗಾನಕೆ ?

ಹಿಂದುಮುಂದಕೆ ನೋಡಿ
ಹೊಂದದನು ಹಲುಬಲಾ
ವೊಂದೊ ನೋವಿಂದೆಮ್ಮ ನಿಷ್ಕಪಟದಾ

ನಂದ ತುಂಬಿದೆ, ಮನಂ
ಸಂದ ಜೀವಸವ ಬಗೆ
ತಂದೊರೆವುವೆಮ್ಮ ಸ್ವಾದಿಷ್ಠ ಗೀತಂ.

ಅಳುಕು ಹಗೆ ಮದವ ಹೀ
ಗಳೆಯಲೆಮಗಾದೊಡಂ,
ತುಳುಕೆ ಕಂಬನಿಯಣಂ ಪುಟ್ಟಿರದೊಡಂ,
ತಿಳಿಯೆ ನಾವೆಂತಕಟ
ಸುಳಿಯ ಬಲ್ಲೆವೊ ನಿನ್ನ
ಹಳಸದೀ ನಲಿವಿನುಲಿವಿನ ಸನಿಹಕೆ

ಸವಿ ಸೊಗಸು ದನಿಯಖಿಲ
ಕವಿತೆಯಿಂ, ಕವಿತೆಯೊಳ
ಗವಿತಿರುವ ಬಗೆಬಗೆಯ ನಿಧಿನಿಚಯದಿಂ,
ಕವಿಗೆ ಗಡ ನಿನ್ನ ಜಾ
ಣುವೆಯೆನಿತೊ ವಾಸಿಯ
ಲ್ಲವೆ? ನೆಲವ ಧಿಕ್ಕೆಂದು ಮಿಕ್ಕಿದವನೆ!

ಅರುಹೆನಗೆ ನಿನ್ನ ಮನ
ಮರಿತ ಹರುಷದೊಳರೆಯ,
ನೆರಮೇಕತಾನಮಾಂತೊರೆಯ ತೂಣಂ
ಬಿರಿದೆನ್ನ ತುಟಿವರಿಯೆ,
ತಿರೆಯದಂ ಕೇಳೆ ಕಿವಿ
ದೆರೆವುದಂದೀಗಳಾಂ ಕೇಳುವಂತೆ.

# 'ಹಿಂದುಸ್ತಾನ್ ಹಮಾರಾ'

(ಲಾಹೋರಿನ ಡಾ ಶೇಖ್ ಮುಹಮ್ಮದ್ ಇಖ್ಬಾಲರ ಉರ್ದು ಘಜಲನ್ನು ಅವಲಂಬಿಸಿ ಬರೆದುದು)

ನಮ್ಮವಳೀ ಭಾರತ ಜನನಿ || ಧ್ರುವ ||

ಭೂಮಂಡಲದಿ ರಮಣೀಯಂ
ಈ ಭಾರತವೆಮ್ಮಯ ನಿಲಯಂ,
ನಾವೀಕೆಯ ಮರಿದುಂಬಿಗಳು,
ಈಕೆಯೆಮ್ಮ ಜೀವನನಳಿನಿ || ೧ ||

ನಾವೆತ್ತಲಲೆದರು ಮುದದಿ
ಹೃದಯಂಗಳೀಕೆಯ ಪದದಿ,
ಇರಬಲ್ಲೆವಲ್ಲಿಯೆ ನಿಸದಂ
ಹರಿವುದೆತ್ತಲೆಮ್ಮದೆ ಧಮನಿ || ೨ ||

ಗಿರಿಗುಂಪುಗಳ ಮುಡಿಯೇರಿ
ಗಿರಿಯಾವುದೊ ಗಗನವಿಹಾರಿ—
ಅದೆ ನಮ್ಮ ಚಿರ ಪ್ರತಿಹಾರಿ,
ಅದೆ ಕಾವನೆಮ್ಮಯ ಕರುಣಿ || ೩ ||

ನೂರಾರು ನದಿಬಾಲೆಯರು
ಈಕೆಯಂಕದಲಿ ನಲಿಯುವರು,
ಈ ನವನಂದನದಿನಿದುಸುರಿಂ
ಕರುಬಾಂತುದಮರರ ಧರಣಿ || ೪ ||

ಧುನಿರಾಣಿ ಗಂಗೆಯೆ ನಿನಗೆ
ನೆನಪಿಹುದೇನಾ ಶುಭ ಗಳಿಗೆ
ಇಳಿದಂದು ನಿನ್ನಯ ದಡದಿ
ಮುನ್ನಮೆಮ್ಮ ಪರಿಸೆಯ ಸರಣಿ ? || ೫ ||

ಧರುಮಂಗಳರುಹವು ನಮಗೆ
ಹಗೆಯುನ್ನಿರಿಸಲೆಮ್ಮೊಳಗೆ—
ಭಾರತೀಯರಾವೆಮಗೊಂದೆ
ತವರೀಕೆಯೆ ನಮ್ಮಯ ಜನನಿ ॥ ೬ ॥

ಮುನ್ನಾದ ಹಲ ನಾಡಿಂದು
ಇತಿಹಾಸದಿ ಕನವರಿಪಂದು,
ಕಂದದು ಕುಂದದು ಎಂದೆಂದು
ಮೀಕೆಯು ಸೌಭಾಗ್ಯದ ತರಣಿ ॥ ೭ ॥

ನಿನ್ನ ನಾಮವನೆ ಪಾಡುವೆವು,
ನಾವಿದನೊಂದನೆ ಬೇಡುವೆವು—
ನಮ್ಮನಿಂತೆ ಜನುಮಜನುಮದಿ
ನಿನ್ನುದರದಿ ತಳೆಯೌ ಜನನಿ ॥ ೮ ॥

---

## ವಿದಾಯ

(1911ನೆಯ ಎಪ್ರಿಲ್ ತಿಂಗಳ ‘Modern Review’ ಮಾಸಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ರವೀಂದ್ರನಾಥ ಠಾಕೂರರ ‘Farewell’ ಎಂಬ ಕವಿತೆಯನ್ನು ಅನುವರ್ತಿಸಿ ಬರೆದುದು)

ಪೋಗಗೊಡೆನ್ನನು ತಾಯೆ ಬಿಡು,
ಮುದ್ದಿನ ತಾಯೇ ಪೋಗಗೊಡು!
ಮಬ್ಬು ಮರೆಯ ಮುಂಜಾನೆಯಲಿ
ಬರಿತೋಳ್ಗಳ ನಿಡುಚಾಚುತಲಿ,
ಎಲ್ಲಿಹೆ ಮಗುವೇ? ಬಾರೆಂದು
ದಳದಳನೆನ್ನ ನೀ ಕರೆವಂದು,
ಅವ್ವಾ ಮುದ್ದಿನ ಮಗುವಿಲ್ಲಿ
ಇಲ್ಲವೆನುವೆ ನಿನ್ನ ಕಿವಿಯಲ್ಲಿ
ಪೋಗಗೊಡೆನ್ನನು ತಾಯೆ ಬಿಡು,
ಮುದ್ದಿನ ತಾಯೇ ಪೋಗಗೊಡು

ಅಲೆವೆಲರುಸಿರಿಂ ಹುಯ್ಯುವೆನು,
ನಿನ್ನೆದೆಯಿಂ ನಿಡುಸುಯ್ಯುವೆನು;
ಬಿಮ್ಮನೆ ತೋಳುಗಳಿಂದೆನ್ನ
ಬಿಗಿವಿಡಿಯದೊಲೋಡುವೆ ನಿನ್ನ,
ನೀರಿನ ಕಿರುದೆರೆಯಾಗುತಲಿ,
ಯಾರೆನ್ನರಿಯದೊಲೀಸುತಲಿ,
ಮೀಯುವ ನಿನ್ನನು ಬಲವಂದು
ಮುರಿಮುರಿದಪ್ಪಿಕೊಳುವೆನಂದು
ಪೋಗಗೊಡೆನ್ನನು ತಾಯೆ ಬಿಡು,
ಮುದ್ದಿನ ತಾಯೇ ಪೋಗಗೊಡು

ಸೂಸುವ ಸೇಸೆಯ ಸೋನೆಯಲಿ
ಇರುಳಲಿ ನೀನಮ್ಮ ಮನೆಯಲಿ
ಒಂಟಿ ಮಲಗಿ ನಮ್ಮ ಹಸೆಯಲ್ಲಿ
ಮೆಯ್ಮರೆತೆನ್ನನೆ ನೆನೆವಲ್ಲಿ,
ತಟತಟ ತಟಕುವ ತನಿಯೆಲೆಯಿಂ
ತೊದಲಾಡುವೆನಿಂಬನಿಯುಲಿಯಿಂ
ಮುಚ್ಚಲು ಮರೆತಿಹ ಕಿಟಕಿಗಳಿಂ
ಮಿಂಚುವೆ ಮಿಂಚಿನ ಮಿಟಕುಗಳಿಂ—
ಅಂದಿನ ನನ್ನುತ್ಸವನ್ನ
ಬಗೆಯಲಳವೆ ಅವ್ವಾ ನಿನ್ನ?

ಮೀರಿದಿರುಳ ಕಗ್ಗತ್ತಲಲಿ
ನೀನೆಚ್ಚರವಿರೆ ಮರುಗುತಲಿ,
ಮಿರುರೆಪ್ಪೆಯ ತಾರಗೆಯಾಗಿ
ಮಲಗವ್ವಾ ಎನುವೆನು ಬಾಗಿ.
ಅಳಲಿ ಬಳಲಿ ಕಡೆಯಲಿ ದಣಿದು
ಪವಡಿಸುತಲೆ ನೀನರೆಮಣಿದು,
ಚಂದ್ರನ ಸೊದೆಗದಿರಾಗುವೆನು,

ನಿನ್ನ ಹಸೆಯನಕ ಸಾಗುವೆನು,
ಇಳಿಯುತ ಚುಂಬಿಸಿ ತಂಗುವೆನು
ನಿನ್ನ ಹನಿವ ನನೆಗಂಗಳನು

ನಿನ್ನೆವೆಗದವಿನಿಸರಳಿರಲು
ಹೊಂಚುತ ಹಣಕುವೆನೊಳಬರಲು,
ಸಸಿನೆ ನುಸುಳಿ ಕನಸಲಿ ನಿನ್ನ
ಮುದ್ದಿಸುವೆನು ನಿದ್ದಿಸುವನ್ನ
ಬೆಪ್ಪನೆದ್ದು ನೀ ದಿಗಿಲೆಂದು
ಹಸೆಯೊಳೆನ್ನ ತಡವರಿಸಂದು,
ಯಾರಿನ್ನೆಗವರಿಯದಿಹಲ್ಲಿ
ತಟ್ಟನೆ ಮೈಯ್ಗರೆಯುವೆನಲ್ಲಿ
ಪೋಗಗೊಡೆನ್ನನು ತಾಯೆ ಬಿಡು,
ಮುದ್ದಿನ ತಾಯೇ ಪೋಗಗೊಡು

ಮಾನವಮಿಯ ಹಬ್ಬದ ದಿನದಿ
ಬಾಲಕರೆಮ್ಮಯ ಪೂಬನದಿ
ಆಡಲು ಬಂದು ನುಡಿವರಂದು
ಈ ಮನೆಯಲಿ ಮಗುವಿಲ್ಲೆಂದು;
ಅಂದಾದರು ಕೊಳಲಿಂಚರದಿ
ತೀಲುತ ರವಿಗದಿರಂಬರದಿ,
ಮನೆಗೆಲಸವ ಗೆಯ್ಯುವ ನಿನ್ನ
ಸೆರಗನೆ ಹಿಡಿದಾಂ ಬಿಡೆ ಬೆನ್ನ.
ಪೋಗಗೊಡೆನ್ನನು ತಾಯೆ ಬಿಡು,
ಮುದ್ದಿನ ತಾಯೇ ಪೋಗಗೊಡು.

ಹಬ್ಬದುಡುಗೆರೆಗಳನು ತಂದು
ನಮ್ಮಯ ಮನೆಗತ್ತಿಗೆ ಬಂದು,

ಅಕ್ಕಾ ಮಗುವೆಲ್ಲಿಹುದೆಂದು
ಕೇಳುವಳಾಕೆಗೆ ಪೇಳೆಂದು—
ಎಲ್ಲೆಲ್ಲಿಯು ನನ್ನ ಮಗುವಿಹುದು,
ನೋಡೆನ್ನಯ ಕಣ್ಣಾಲಿಯದು !
ಎನ್ನಯ ಮೊಲೆಯ ಕುಡಿಯುತಿಹುದು,
ಎನ್ನಂಕದಲಿದೊ ಕುಳಿತಿಹುದು !
ಪೋಗಗೊಡೆನ್ನನು ತಾಯೆ ಬಿಡು,
ಮುದ್ದಿನ ತಾಯೇ ಪೋಗಗೊಡು

---

## ಹೊಲೆಯನು ಯಾರು ?

ಹೊಲೆಯನಾರೂರ ಹೊರಗಿರುವವನೆ ಗೆಳೆಯ ?
ಜಾತಿಯಿಂದಲ್ಲ ಗುಣದಿಂದಹನು ಹೊಲೆಯ || ಪಲ್ಲ ||

ಇಬ್ಬರಾಡುವ ಗುಟ್ಟು ಕದ್ದು ಕೇಳುವ ಹೊಲೆಯ,
ಗಂಡಹೆಂಡಿರ ಬೇರೆ ಮಾಡುವವ ಹೊಲೆಯ ।
ಚಾಡಿ ಮಾತಾಡಿ ಭೇದವ ಕಲ್ಪಿಪನೆ ಹೊಲೆಯ,
ಒಣಹರಟೆಯಿಂ ಕಾಲ ಕಳೆಯುವವ ಹೊಲೆಯ || ೧ ||

ಬಾಯಿಬಾರದ ಜಂತುಗಳ ಕಾಡುವವ ಹೊಲೆಯ,
ಪಾಲ ಕುಡಿದಾಕಳನು ಸದೆವಾತ ಹೊಲೆಯ ।
ಮನೆಯ ಬತ್ತಿದ ಪಶುವಿಗುಣಿಸು ಕೊಡದವ ಹೊಲೆಯ,
ಜೀವಿಗಳ ಕೊಂದು ಜೀವಿಸುವವನೆ ಹೊಲೆಯ || ೨ ||

ಹೆಂಡ ಕುಡಿದರಸುಬೀದಿಯಲಿ ತಿರಿವವ ಹೊಲೆಯ,
ಹಣವಿಟ್ಟು ಜೂಜಾಟವಾಡುವವ ಹೊಲೆಯ ।
ತನ್ನೊಡವೆ ಮಡದಿಯಲಿ ತೃಪ್ತಿ ಪಡದವ ಹೊಲೆಯ,
ಪರರ ಧನವನಿತೆಯರ ಬಯಸುವವ ಹೊಲೆಯ || ೩ ||

ಎಳೆಮಕ್ಕಳಿಗೆ ವಿದ್ಯೆ ಕಲಿಸಿಕೊಡದವ ಹೊಲೆಯು,
ಯುವಕರಿಗೆ ದುರ್ಬುದ್ಧಿ ಕಲಿಸುವವ ಹೊಲೆಯು ।
ತಾನರಿತ ಜ್ಞಾನ ಪರರಿಗೆ ಪೇಳದವ ಹೊಲೆಯು,
ತನ್ನಿಂದ ಹಿರಿಯರನು ಮನ್ನಿಸದ ಹೊಲೆಯು ॥ ೪ ॥

ಪರರ ಬೇನೆಯಲಿ ಮನಹಿಗ್ಗುವಾತನೆ ಹೊಲೆಯು,
ಪೀಡಿತರನಿನಿಸು ಕನಿಕರಿಸದವ ಹೊಲೆಯು ।
ಪರರ ಹೊಗೆಯನು ನೋಡೆ ಕಾದಿರುವವನೆ ಹೊಲೆಯು,
ಪಸಿದವರಿಗೊಂದು ತುತ್ತೆರಚದವ ಹೊಲೆಯು ॥ ೫ ॥

ಹಣವ ಪಡೆದೊತ್ತೆಯನು ಹಿಂದೆ ಕೊಡದವ ಹೊಲೆಯು,
ಹಣವಿದ್ದು ಸಾಲವನು ತೀರಿಸದ ಹೊಲೆಯು ।
'ಆಶೆಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯು,'
ಬಗೆಬಗೆದು ಮೋಸವನು ಮಾಡುವವ ಹೊಲೆಯು ॥ ೬ ॥

ಶುದ್ಧ ತಾನೆಂದು ಪರರನು ಮುಟ್ಟದವ ಹೊಲೆಯು,
ಹೊಲೆಯರೆಂದನ್ಯರನು ಕರೆವವನೆ ಹೊಲೆಯು ।
ತಾನು ಮೇಲೆಂದುಬ್ಬಿ ಹೀನೈಸುವವ ಹೊಲೆಯು,
ಕೀಳುದಸೆಯವರನುದ್ಧರಿಸದವ ಹೊಲೆಯು ॥ ೭ ॥

ತಾ ಬೋಧಿಸುವ ಧರ್ಮವಾಚರಿಸದವ ಹೊಲೆಯು,
ತಾನು ತಾನೆಂದು ಶ್ಲಾಘಿಸುವವನು ಹೊಲೆಯು ।
ಪರರ ಹೊಲ್ಲೆಹದ ಕಾವ್ಯವ ಬಿತ್ತರಿಪ ಹೊಲೆಯು,
ಪರರ ಗುಣಗಳಿಗೆ ಕುರುಡಾಗಿಹನೆ ಹೊಲೆಯು ॥ ೮ ॥

ರಾಷ್ಟ್ರದುನ್ನತಿಯ ಸಾಧಿಸೆ ಶ್ರಮಿಸದವ ಹೊಲೆಯು,
ತನ್ನ ರಾಷ್ಟ್ರಕೆ ದ್ರೋಹ ಚಿಂತಿಪನೆ ಹೊಲೆಯು ।
ಸ್ವಾರ್ಥದಿಂ ರಾಷ್ಟ್ರಹಿತವನು ಮರೆವವನು ಹೊಲೆಯು,
ರಾಷ್ಟ್ರಭಕ್ತಿಯ ಲೇಶವಿಲ್ಲದವ ಹೊಲೆಯು ॥ ೯ ॥

ಎಲ್ಲವುಗಳಲ್ಲಿ ಹರಿಯನು ಕಾಣದವ ಹೊಲೆಯ,
ಶ್ರೀಹರಿಯೊಳೆಲ್ಲವನು ಕಾಣದವ ಹೊಲೆಯ।
ಮುಂಗೆಯ್ದ ಪಾಪಕನುತಾಪ ಪಡದವ ಹೊಲೆಯ,
ದೇವಕೀನಂದನನ ನೆನೆಯದವ ಹೊಲೆಯ ॥ ೧೦ ॥

---

## ತುರ್ಕಿಯ ಪರವಾಗಿ ದೇವರೊಡನೆ ಪ್ರಾರ್ಥನೆ

ಭೂಪಾಳಿ—ಝಂಪೆ

ನೋಡು ನೋಡೆಲೊ ದೇವ!
ಗತಿವಿಹೀನರ ಕಾವ,
ನೋಡು ನಿನ್ನಯ ರಾಜ್ಯದೊಳರಾಜಕತೆಯ!
ನೋಡು ಪಡುವಣ ದಿಕ್ಕ,
ನೋಡು ಇತಲಿಯ ಸೊಕ್ಕ,
ನೋಡು ದೀನ ತುರುಷ್ಕ ತ್ರಿಪಲಿಯರ ಕತೆಯ! ॥ ೧ ॥

ಬಡ ತ್ರಿಪಲಿಯನ್ನಿತಲಿ
ಪಿಡಿದಿರುವುದೆನ್ನುತಲಿ
ಮೊರೆಯಿಡುವ ಕ್ರಂದನಕೆ ಕಿವಿಯ ಮುಚ್ಚಿಹೆಯಾ?
ತೋಳಿನಬ್ಬರವನ್ನು
ಜಗಕೆ ತೋರುವೆನೆನ್ನು
ತಿತಲಿ ಬೊಬ್ಬಿರಿವುದನು ತಾತ ಮೆಚ್ಚುವೆಯಾ? ॥ ೨ ॥

ನೆಲವ ನುಂಗುವ ಹಸಿವೆ
ತಡೆಯದರಚುತ ಕಸಿವೆ
ನೆನುತಿತಲಿ ತುಡುಕಿಹುದು ತ್ರಿಪಲಿಯನು ದೊರೆಯೆ!
ಹೆಬ್ಬುಲಿಯು ಕಂಗೆದುರು
ಸಿಕ್ಕಿದೆಳೆವುಲ್ಲೆಗರು
ವಂದದಿಂ [illegible] ತ್ರಿಪಲಿಯನು ಪೊರೆಯೈ! ॥ ೩ ॥

ಮೊನ್ನೆವರವಿಾ ಇತಲಿ
ಪರವಶತೆಯಿಂದಲಿಲಿ
ಯಂತೆ ಕಂಬನಿಯುಗುಳ ನೆಕ್ಕಿದುದ ಮರೆಯೆ,
ಇಂದು ಗರ್ಜಿಸುತಿಹುದೆ ?
ಕಷ್ಟವಿನ್ನೊಂದಿಹುದೆ ?
ಮಾನವರೊ ? ದಾನವರೊ ? ನಾನವರನರಿಯೆ ! || ೪ ||

ಯಾವ ಇತಲಿಯು ವೀರ
[1]ಮಾಝೀನಿ ರಣಧೀರ
ಪರತಂತ್ರದಿಂದಲುದ್ಧರಿಸಿದನಿತಲಿಯಂ,
ಸಕಲರಿಗೆ ಸ್ವಾತಂತ್ರ್ಯ
ವೆಂದವನ ಗುರುಮಂತ್ರ
ವಿದನಿತಲಿ ಮರೆತಿಹುದೆ ಸೊಕ್ಕಡರಿ ತಲೆಯಂ ! || ೫ ||

ಪೂರ್ವದಿ ವಿಲಾಯಿತಿಯು
ಹೃದಯವಾವಳ ಗತಿಯು
ಭಾರದಿಂ ಜಗ್ಗಿದುದೊ ಆ ತುರುಕರವನೀ
ಅಬಲೆಯಾಗಿಹಳೀಗ.
ಇತಲಿಯುವಳನು ಬೇಗ
ಸುಲಿಯುತಿದೆ— ಕದಕದಿಸು ತುರುಕರೆದೆ ಧಮನಿ ! || ೬ ||

ಆಧುನಿಕ ರಾಜ್ಯಕಲೆ
ಯನ್ನರಿಯದವರ ಸಲೆ
ಬೆಂಬಲಿಸಿ ನೀನಿಂತು ನಡೆಸವರ ಪಡೆಯಾ !
ಅನುಕರಿಸಗತಿಕರನು,
ಕೊರೆಯದಿರಪಥಿಕರನು,
ಸುಕ್ಕಿಸದಿರರ್ಧಚಂದ್ರ ಧ್ವಜವನೊಡೆಯಾ ! || ೭ ||

1 Mazzini

ನವನಾಗರಿಕಳಲ್ಲ
ದೀ ತುರುಕಿಯಿರಸಲ್ಲ
ದೆಂದವಳ ರುಜೆಗೆ ನಾಗರವಿಷಮನೀಯೆ,
ಯುವವೃದ್ಧ ರೂಪಿಂದ
ನಟಿಸುವಿತಲಿಯು ಚಂದ—
ತ್ರಿಪಲಿಯನ್ನಪಹರಿಸಲಿದುವಲ್ತೆ ಮಾಯೆ ? ॥ ೮ ॥

ಮುಸಲಮಾನರ ಧರ್ಮ
ಪಾಳಿಸಗುವೊಳ ಮರ್ಮ
ದಿಂದಿತಲಿ ಬಂದಿಹುದೆ ಕೊಳುಗುಳಕೆ ಮುಂದು ?
[2]ಪೈಗಂಬರನು ನೀನೆ,
[3]ಮರಿಯಾತ್ಮಜನು ನೀನೆ
ಎಂಬ ಸತ್ಯವನೀ ಜಗತ್ತರಿವುದೆಂದು ? ॥ ೯ ॥

ಶತ್ರುವನು ಕೂರೆಂದು
ಯೇಸು ರೂಪದೊಳೆಂದು
ನೀನೊರೆದುದಕನರ್ಥವಾದಪುದೆ ಇಂದು ?
ಅನಘರನು ಕಡಿಯೆಂದು,
ಗೆಳೆಯರನು ಬಡಿಯೆಂದು
ನಿನ್ನ ವಾಕ್ಯಕೆ, ಹರಿಯೆ, ತಟ್ಟುವುದೆ ಕುಂದು ? ॥ ೧೦ ॥

ಧರ್ಮಕೆಡೆ ಬರಿದಾಯ್ತೆ ?
ನೀತಿ ತೇಲುವುದಾಯ್ತೆ ?
ನಿನ್ನ ತಿರೆಯೊಳಧರ್ಮಕಾದಪುದೆ ಗೆಲುಹು ?
ಧರ್ಮವುಳ್ಳೆಡೆ ನೀನು
ಎಂಬರದು ಸಟೆಯೇನು ?
ಧರ್ಮವನು ಕಾದು ಬಲಹೀನರನು ಸಲಹು ! ॥ ೧೧ ॥

2 ಮಹಮ್ಮದ್ 3 ಯೇಸು

ಈ ಸಮರವನು ಮುಗಿಸು,
ಸೊಕ್ಕಿದವರನು ತಗಿಸು,
ಸ್ನೇಹಮಳೆಗರೆದು ಶಾಂತಿಯ ಬೆಳೆಯಿಸಿನಿಯಾ !
ನಿರಪರಾಧಿಯ ರಕ್ತ
ದಿಂದ ನೆಲ ಜಲ ಸಿಕ್ತ
ವಾಗದೊಲು ಕಾಪಾಡು ದೇವಕೀತನಯಾ ! ॥ ೧೨ ॥

---

## ಕವಿತೆ

ಕವಿತೆ ಮತಿಜಲ ನಲಿನ,
ವ್ಯಸನ ವನಧಿಯ ಪುಲಿನ,
ಕವಿತೆ ಗಾನದ ಸುಗ್ಗಿ, ಸೊಬಗ ತೆನೆಸೂಡಿ,
ಕವಿತೆ ನವರಸ ರಂಗ
ವದು ತ್ರಿವೇಣಿಯ ಸಂಗ
ಮಿದೊ ನೆನಸು ಕನಸು ಮನಸಿನ ತ್ರಿತಯವೊಡಗೂಡಿ

ಧ್ಯಾನ ಗನಿಗಳ ರನ್ನ,
ಪ್ರಣಯ ಭಿಕ್ಷುವಿನನ್ನ,
ಕವಿತೆ ಜೀವನಸಮರ ಯೋಧರ ತುತೂರಿ,
ಕರುಣೆಯ ನಯನ ಬಿಂದು
ವೇಕಾಂತತೆಯ ಬಂಧು —
ಬಹುರೂಪದಿಂ ಸುಖಿಸುವುದು ಮನಮನವ ಸೇರಿ.

ಇಂದುವುರುಗುವುದೇಕೆ ?
ತಾರೆ ಮಿರುಗುವುದೇಕೆ ?
ಕುಕಿಲು ಕರಗುವುದೇಕೆ ವಿರಹ ವಿಸ್ಮೃತಿಗೆ ?
ಅವರವಂಗದೆ ಧರ್ಮ
ಇದು ವಿಧಾತನ ಮರ್ಮ —
ಕವಿಯ ಹೃದಯವೆ ನರ್ಮಕುಂಜ ಕವಿತಾಸತಿಗೆ.

ಪ್ರಾಸದಕ್ಷರ ಕೆಲವು
ತೊಡವುಗಳ ಕಿಲಕಿಲವು,
ಶೈಲಿಯಂಗದ ಚೆಲುವು, ಛಂದಸಂಚಲವು
ಅರ್ಥಲಾಲಿತ್ಯವೆನು
ವ ಸತೀತ್ವವಿರದೊಡನು
ಗೊಳಿಸುವಳೆ ಕವಿತಾರಮಣಿ ರಸಿಕನಿಗೆ ನಲವು ?

ವಿಪುಲ ಮಾನುಷ ಜೀವ
ನದ ಯಥಾರ್ಥ ಸಮಾವ
ಲೋಕನಂ ಕವಿತೆ ಎನೆ ಪಡುದೀವಿಯವರು,[1]
ಕವಿತೆ ಬಡಗಣ ತಾರೆ
ಯಂತೆ ದಾರಿಯ ತೋರೆ,
ಎನಿತು ಧನ್ಯರೊ ಸಂಸ್ಕೃತಿಯ ನಾವನೇರ್ದವರು!

ಸಂಪಗೆಗೆ ಕಂಪಿಹುದೆ ?
ಇಂಗೋಲಿಗಿಂಪುಹುದೆ ?
ಮಳೆವಿಲ್ಗೆ ಸೊಂಪಿಹುದೆ ? ಕದಿರಿಹುದೆ ರವಿಗೆ ?
ತಿಂಗಳಿಗೆ ತಂಪಿಹುದೆ ?
ಸಾಗರಕೆ ಪೆಂಪಿಹುದೆ ?
ಇಲ್ಲದಡೆ ಪೇಳು ಪೊಸ ಸೃಷ್ಟಿರಚಿಸುವ ಕವಿಗೆ

ಕಂಬದಿಂ ಕವಿವಂದು,
ದಶಶಿರನ ತಿವಿವಂದು,
ಫಲುಗುಣಗೆ ಕೊಳುಗುಳದಿ ಗೀತೆಯೊರೆವಂದು,
ಅರಳಿಯಡಿ ತಪಿಪಂದು,
ಸಿಲುಬೆಯಿಂ ಕ್ಷಮಿಪಂದು—
ರವಿಯೊ ಮೇಣ್ ಕವಿಯೊ ಕಾಣಿಸುವನಂದುಮುನಿಂದು?

1. 'Poetry is the criticism of life' *(Matthew Arnold)*

ಮನದನ್ನನಿನೆಯುಳಿಗೆ,
ಮನದನ್ನೆ ಇನೆಯನಿಗೆ,
ತಂದೆತಾಯನಗಲ್ದವರ ತಾಯಿತಂದೆ,
ತಂಗಿಯುಳಿದರ ತಂಗಿ,
ಬಂಧುಗಳನು ಮರುಂಗಿ
ಶೂನ್ಯವಾದೆದೆಯ ಪಡಿವಾವಿ ಕವಿತೆಯದೊಂದೆ!

ಜಗದುದಯ ನಡುವಗಲು
ಸಂಜೆ ರಜನಿಯು ಮಿಗಿಲು
ನೆನಸು ಕನಸುಗಳನರಿಯಲು ಮನಸನೀಯೆ,
ಗುರುವಿನಾಶ್ರಮದಂತೆ
ಕವಿತೆ ವಿದ್ಯೆಯ ಸಂತೆ—
ಭುವನ ಕವಿತೆಗೆ ಕವಿಯು ಕವಿತೆಯೊಪ್ಪುವ ಛಾಯೆ.

ಕವಿಗಿಂತ ಪಗೆಯಿಲ್ಲ
ಪರವಶತೆ ಒಗೆಗೆಲ್ಲ—
ಕವಿಯೆ ಸ್ವಾತಂತ್ರ್ಯ ಮಧು ಕುಡಿವ ಮಧುಕರನು,
ಆದಿಕವಿ ಹರಿಯಿಂದ
ಕಲಿತು ಪರಿಪರಿಯಿಂದ
ಪರಹಿತವ ಬೆದರದೆಸಗುವನವನೆ ಕವಿವರನು

ಅಬಲೆಯರ ತೋಳ್ಗಳನು
ಪರವಶರ ಬಾಳ್ಗಳನು
ಹುರಿದುಂಬಿಪುದು ನಾಡಿನಾಡಿಯಲಿ ಹರಿದು,
ಉದ್ಧರಿಸಿ ಪತಿತರನು,
ತಡೆದು ದುಶ್ಚಿಂತರನು
'ಧರ್ಮಪಥಕೊಯ್ಯುವುದು ಕವಿತೆಗಿದು ದಿಟ ಬಿರಿದು!

ದಿವಭುವನವನು ಪದೆದು
ಹಾಸುಹೊಕ್ಕಂತೆ ಪದು
ಪಿಂದಲೊಂದಿಸುತೊಂದೆ ಮಗ್ಗದಲಿ ನೇತ
ಕವಿತೆ ಶಬಲಾಂಶುಕವ
ನುಡುತ ಕವಿಗತಿಸುಖವ
ನೀಡು ದೇವಕಿಕಂದ ಕವಿಚಂದ್ರ ದಿನನಾಥ! 72

---

## ವಿಶ್ವಾಂಜಲಿ

### ರಾಗ ದೇಶ ಜಿಲ್ಲಾ—ತ್ರಿತಾಲ

ಏನದ್ಭುತ ಮಹಿಮೆಯೊ ನಿನ್ನ
ಪ್ರಭೋ ಪೊಗಳಲಳವೆ ಎನ್ನ || ಪಲ್ಲ ||

ತಡೆಯರಿಯದೆ ಹರಿಯುವ ಗಗನತಲಂ
ನಿನ್ನೊಡೆತನದ ಪತಾಕೆಯೊಲು ವಲಂ
ನೆಳಲಿಸಿ ಹೊದಿಪುದು ವಸುಮತಿಯುಗಲಂ
ನಿನ್ನ ಪ್ರಭಾವವನು || ೧ ||

ನಿಲಲಾರದ ದಿನಕರನನುದಿನದಿ
ಬೆಳಕುಗಳ ತುತೂರಿಯನತಿಘನದಿ
ಪಸರಿಸಿ ಸಾರ್ವನು ಭುವನ ಭುವನದಿ
ನಿನ್ನ ಪ್ರತಾಪವನು || ೨ ||

ತಾರಕಿತ ವಾಲೆಗಳ ತೆರೆದಿರಿಸಿ,
ಅಮೃತದ ದೀವಿಗೆಯನು ಮುಂದುರಿಸಿ,
ಪಾಡುವಳು ರಜನಿ ಕಬ್ಬಿಗರರಸಿ
ನಿನ್ನ ಲೀಲೆಯನು || ೩ ||

ಕ್ಷಿತಿಬಾಲೆಯ ತೋಳುಯಲಲಿ ತೂಗಿ,
ಜೀವನ ಜೋಗುಳದನುಪದವಾಗಿ
ಮೊರೆವುದು ಗಾಳಿಯೀ ಜಗವನು ಕೂಗಿ
ನಿನ್ನ ಕೀರ್ತಿಯನು ॥ ೪ ॥

ನಿನ್ನಯ ಕೆಯ್ಗನ್ನಡಿಯಹ ಜಲಧಿ
ಪ್ರತಿಬಿಂಬಮನಾಂತಕಲ ವಿಕಲದಿ,
ಪ್ರಕಟಪುದಲೆಯ ತರಲ ಕಲಕಲದಿ
ನಿನ್ನ ಛಾಯೆಯನು ॥ ೫ ॥

ಜಗದೇಕವಾಣಿಯಲಿ ತವ ಚರಿತಂ
ಕೆತ್ತಿರುವ ಯಶಸ್ತಂಭದೊಲಿರುತಂ
ನುಡಿವುದು ನದಿಕಂರದಿ ಗಿರಿ ನಿರತಂ
ನಿನ್ನ ನೀತಿಯನು ॥ ೬ ॥

ಬಗೆಬಗೆಯಿಂದಾರಾಧಿಸಲರಿಯೆ,
ಮಗು ತೊದಲುಲಿವೊಲು ತಾಯನು ಕರೆಯೆ,
ಉಲಿವೆನು ಮಗುಳ್ದುಲಿವೆನು ಶ್ರೀ ಹರಿಯೆ
ನಿನ್ನ ನಾಮವನು ॥ ೭ ॥

---

## ಹಳೆಯ ನಾಣ್ಯ

ಇನ್ನುಮೇತಕೆ ನಿನ್ನ ಮುಸುಕು ಮೌನವ ತೊರೆಯೆ ?
ಮುಚ್ಚಾಲೆಯಾಡಿ ದೊಲ್ಲಯಿಸುವೇಕೆನ್ನ?
ತಳಮಳಿಪುವೆನ್ನ ಮನ ನಿನ್ನ ತೆರೆಯಂ ಹರಿಯೆ—
ನಿಲುಕದಲೆ ತಡೆವೆ; ಬುಲ್ಲಯಿಸುವೇಕೆನ್ನ? 4
ಸೊಲ್ಲಿಲ್ಲದುಲಿಗಳಿಂದುಲಿವ ನಿನ್ನಯ ಸೊಲ್ಲ
ಸೆಲೆಯಿಂದ ಹಾಡುಲಿಯ ಬಲ್ಲುದೇನೆನ್ನ?—

ಸರಿಗೆ ಕುಕಿಲಿನ ಕೊರಳ ಕನಸನೆತ್ತಲು ಸಲ್ಲ!
ಕೊಳದ ಪಡಿವೆರೆಯುಂಬರದ ಚಂದ್ರನೆನ್ನ?
ಏಗಾಲವಿಂತು ವೆಂಟಣಿಸಿ ನೀ ಮುದಿಯ
[1]ಮರಿಯುಂತೆ ಕಾವೆ ಪಳನನಸಿನೀ ನಿಧಿಯ?
ನಿನಗಲ್ಲದರ್ಥದಿಂದೇವಾಳ್ತೆ ನಿನಗೆ? —
ಹೆರಗೀರ್ಥಯುದರ್ಥವದು ದೊರೆವುದೇಂ ತನಗೆ?

ನೀನೆನಿತೊ ಚರಿತಕಾರನಿಗೀವೆ ಸಂತಸವ! —
ಚೊಚ್ಚಲನ್ನೀಯೆ ಸನಿಹಿಸಿದ ತಾಯ್ಮೊಗಸಂ,
ದೂರದಿಂ ನಳಿನಿಯೊಳಸೋವಿನಳಿನಿಯ ಪಸವ
ನದರ ಸರಿದೂಗೆ ಮಿಗುಗುಮೆಯುವನ ಸೊಗಸಂ?
ನೋಂತಿರುವೆ ನೀ ಮೌನಮೂದೊಡಂ, ಮುಂದಾರೆ
ಭಾಸ್ಕರನ ಬಿಜಯದುಕ್ಕಡವ ತೆರೆವಂತೆ,
ನನಸು ಕನಸುಗಳ ದರ್ಶನವನೇಂ ತರಲಾರೆ,
ಬಿಂಗುಸುಬು ಬಂಗಾರದಿರವನೊರೆವಂತೆ?
ಹಸುರು ಮಸಿಯಿಂ ಬರೆದುದಿದರ ಬಿನ್ನಣಮೇಂ?
ನಿನ್ನ ಕವನಕೆ ಕಾಲನಿಟ್ಟ ಟಿಪ್ಪಣಮೇಂ?
ಮುನ್ನನಿಂದಿಗೆ ಸಾಲವಿತ್ತ ಬರವಣವೊ?
ನಿಚ್ಚತೆಗೆ ನಮ್ಮನೋಲಯಿಸುವವುತಣವೊ?

ಕಂಡ ಚೆಲುವಿನಿದು, ಕಾಣದ ಚೆಲುವು ಮಿಗಿಲೆನಲು,
ಕನಸು ಕಂಗಳಿಗೆ ಸಿಲುಕಿದ ಚೆಲುವು ಕಿರಿದೆ?
ಅದುಕತದಿ ನಿನ್ನ ಸಸಿನೆದೆಯೊಳೋರೆಮೆಯ ನಲು
ಮೆಯ ನೀಡ! ಕನಸುಕಾಂಬೆನು ನಿನ್ನನಿರದೆ!
ಘೋರ್ಗರೆವ ಕಡಲ ನಿಸ್ಸೀಮ ಕೋಲಾಹಲಂ
ಶಂಖದೆಣೆಮುರಿಯ ಸುಳಿಗದ್ಗದಗಳಲ್ಲಿ,

1 ಸರ್ಗ

ಉರಿದು ಪೊಡೆದಬ್ಬರಿಪ ಸಿಡಿಲ ದಾಹಾನಲಂ
ಮಿಂಚುಹುಳುವಿನ ಮಿಣುಕು ಕಿಡಿಕಿಡಿಗಳಲ್ಲಿ
ಬಿನ್ನನೆಚ್ಚರುವಂತೆ, ಸೋಜಿಗದ ಸುಳಿವಂ
ಕಾಣದಂತೆನಿತೊ ಬಚ್ಚಿಹೆ ಬದುಕಿನೊಳವಂ
ಕಡೆಗಣ್ಣ ಕೂಡಲಿಂದರಿವಂತೆ ನಲ್ಲೆ,
ನಿನ್ನೊಳವನೇತರಿಂ ನಾನರಿಯಬಲ್ಲೆ?

ಆವ ಮರಮಿದು? ಮರದ ಬುಡದೊಳಿಹ ನೀನಾರು?
ಸಕಲ ಋತುವೊಳು ಪೂವ ಪಣ್ವ ಮರಮೇನು?
ಒಂಟಿ ಕುಕಿಲಿದು ಕೂಗದೇಕೆ? ಬಿರಿನನೆ ನಾರು
ಬೀರದೇಂ? ತಟಕದೀ ಎಲೆವನಿ ಇದೇನು?
ಎಲೆ ಮರುಳೆ, ನಡುಗಟ್ಟಿ ವೀರಮುಂಡಿಯನಿಕ್ಕಿ
ಬಲಗೆಯ್ಯನೆಳೆದು ಕಿವಿಗಾನಿಸುವೆ ಸರಳಂ!
ಬರಿದೆ ಪೇಚಾಡದಿರು, ನಿನ್ನಂಬು ಹೆದೆಮಿಕ್ಕಿ
ಮಿಸುಕದೈ! ಮೇಣೆರಿಗುಮೆಂತರಿಯ ಕೊರಳಂ?
ಆದೊಡಂ ಮರುಗದಿರು, ನಿಕ್ಕುವಂ ಮುನ್ನೆ
ನಿನ್ನ ಪಗೆಯುಳಿವೋದನಾತನಂ ನೀನೆ
ತರಿದೆಯೆಂದಣಿಯುರಂ ತಣಿಯದೊಡಮಿನ್ನು
ಪೆರತಂಬನೆಸೆಯ ಬೇಕೆಂದಿಲ್ಲ ನೀನು!

ಎನ್ನೇರಿದನೊ ಕುಡಿಯಲೀಯಲೊಂದೇ ಸಲಂ
ನಿನ್ನ ಮಿರುಮುದಿರೆಯಾ ಕಿಣ್ಣದಿನಿಸಾನುಂ—
ಬೇರೊಡಲನಾಂತೊಡನೆಯಪ್ಪೆನಂಗನೆ ವಲಂ
ನಿನ್ನಚ್ಚಿನರಸನರಸತಿಯಾಗಿ ನಾನು!
ಬಳಿಕಿಂತೊರೆವನೆರೆಯ ನಾಣ್ಯವಿದರೊಮ್ಮೊಗದಿ
ನೆದ್ದು ಬರುತಿದೆ ಕಣಾ ಪುತ್ತಳಿಗೆ ನಿನ್ನ!
ಅಕ್ಕರದ ಕರಡು ಗೀಚೇಕ ಬೆನ್ನಲಿ? ಪೊಗದಿ
ಬೆಲೆಯೇರದಿಹುದೆ ಕೆತ್ತಿಸೆ ಚಿತ್ರವೆನ್ನ?

ನಮಗಂದಿನಿಂದಗಲ್ಕೆಯಲ್ಲರಗಳಿಲ್ಲ!
ಅಳಿವಾದೊಡಂ ನಡುವೆ ಬರಲಾರ್ತನಲ್ಲ!
ನಿಚ್ಚತೆಯ ಸೆಳವಿನೀ ತೇಲುದೀವಿಯಲಿ!
ಕಾಲನಂ ಮೂದಲಿಸುತಾಳ್ವ ರೀವಿಯಲಿ!

ಕೆಂಗರಿಗನುದಿರ್ಗರಿಯನೆಲರ ಸೀಗುರಿಯೆಂದು
ಮರೆತದಂ ಬರೆಯೆ ಲೆಕ್ಕಣಿ ಎಸಗುವನ್ನ,
ಕಾಲ ರೆಕ್ಕೆಯ ಕಾಲನಿಂದುದಿರ್ದ ಗರಿಯೆಂದು
ನಿನ್ನನರಿಯುದರೆಂತು ಬಳಸಿದರೊ ನಿನ್ನ?
ಇನ್ನೆವರಮೆಲ್ಲೆಲ್ಲಿ ತೊಳಲ್ದೆ? ಏನೇಂ ಗೇದೆ?
ನಿನ್ನ ನೀರಿಂದಾರ ಬೆಸಲಳಲ ತೊಳೆದ?
ಆವಾವ ಲಲನೆಯರ ಮುತ್ತೈದೆತನಕಾದೆ?
ಕವಿಯಾರದೆಳಗೂಸಿನೊಳಗುಟ್ಟ ಸೆಳೆದೆ?
ಆವಾವ ಹರಕೆಗಳ ಕಾಣಿಕೆಗೆ ಸಂದೆ?
ಬೇಹರವನೆಲ್ಲೆಲ್ಲಿ ಸಲುವಳಿಗೆ ತಂದೆ?
ನಿನ್ನೊಡವೆಯಿಂದಾರಿನೇನ ಮಾಡಿಸಿದೆ?
ಆರ ತೊರೆದೆಂತು ಮನೆಮನೆಯ ಬೇಡಿಸಿದೆ?

ನಿನ್ನ ತಾಯ್ಗನಿ ಎಲ್ಲಿ? ಅಗೆದ ಗುದ್ದಲಿ ಎಲ್ಲಿ?
ಕರಗಿಸಿದ ಕೋವೆ, ಬಡಿದದ್ದಗಣೆ ಎಲ್ಲಿ?
ಹುಯ್ದ ಪಡಿಯಚ್ಚೆಲ್ಲಿ? ತಿಕ್ಕಿದರದಲಗೆಲ್ಲಿ?
ಕೆತ್ತಿದುಗುರುಳಿಯೊಪ್ಪನಿತ್ತ ಮಣಲೆಲ್ಲಿ?
ನಿನ್ನ ಮೋರೆಯ ಮೋರೆಯುಳ್ಳರಸನಿಂದೆಲ್ಲಿ?
ಅವನ ನಾಡವನ ಸಿರಿ ಹೆಚ್ಚಳಗಳೆಲ್ಲಿ?
ನೀಂ ಬಳಸಿದಾವಾವ ದೇಶಕಾಲಗಳೆಲ್ಲಿ?
ಬೊಕ್ಕಸದಿ ನಿನ್ನನಿಕ್ಕಿದ ಹರದರೆಲ್ಲಿ?
ನಿನ್ನನೊಡ್ಡುತ ದುಡಿದ ಪಲ ಬಯಕೆ ಎಲ್ಲ?
ನಿನ್ನ ಪದೆವಂದೆರೆದ ಬಡ ತಿರುಕರೆಲ್ಲಿ?
ನಿನ್ನ ಕಂಡವರೆಲ್ಲಿ? ಬಳಸಿದವರೆಲ್ಲಿ?
ಅವರನಿಬರೆಲ್ಲಿ? ನೀನೊರುವನೇನಿಲ್ಲಿ?

ನಿನಗೆ ಸಾವಿಲ್ಲ! ಒದವಿದೆಯುಲ್ತ್ತಳಿಯಲೆಂದು—
ಮೆಯ್ವಡೆದ ಮೌನ ನೀ! ಮೌನಕಳಿವುಂಟೆ?
ಗಳಹು ತಾನ್ಮೆಯಿನಿಂದನಕಟ ನಾವ್ಮರೆವಂದು,
ನಿನ್ನ ತಿಳಿ ತಾಳ್ಮೆ ಎಂದುಂ ಮಾಸಲುಂಟೆ?
ಎನಿತಿರವನೆನಿತರಿವನಡಸಿ ನೀನಯ್ತುಂದೆ,
ನೀನುಮುವರೊಂದೆಂಬ ಮರುಳ್ತನವನೊಲ್ಲೆ!
ಅಂದಂದು ಹೆರೆಕಳಚಿ ಬಿಡುವ ಹಾವ್ಪೆರವೊಂದೆ—
ಹೆರೆವಾವೆರಳ್ತನದ ನೆರವ ನೀ ಬಲ್ಲೆ!
ತಾನ್ಮೆಯಿಂದಳಿವೆಂದು ಬಲ್ಲ ನಿನಗಳಿವೆ?
ಮೌನಕಳಲುಂಟೆ? ತಾಳಿಮೆಗುಂಟೆ ಹಳವೆ?
ಮೌನದಿಂ ಮೂಗಾಲಮುಂ ತಾಳ್ದ ನಿನ್ನ
ಮುಂದೆಮ್ಮದಲ್ತೆ ಗುಳ್ಳೆಯು ಗಳಿಗೆಯುನ್ನ?

ಕವಿಯೊರೆಯೊಳಿನ್ನರಕೆಗೊಳದ ಭಾವನೆಯುನ್ನ
ಮೇತರ ಭವಿಷ್ಯತೆಗೆ ಕಾವೆ ಮೆಯ್ದೋರೆ?
ಅಂದಂದು ಪಡೆವಡಂದಂದಿನಾ ಬೆಳಕನ್ನ,
ಇಂದಿನೆಮ್ಮಯು ಬೆಳಕೊಳೇಕೆ ಕೆಯ್ನಾರೆ?
[2]ಹೊನ್ನಗಾವರದಿಂತು ಮನಕಿವುಡರೆಮಗಿಂದು
ಕೇಳಿಸುವುದೆಂಬೆಯೇಂ ತನ್ನೊಸಗೆ ಎಂತು?
ಕೇಳ ಕಿವಿಯುಳ್ಳವಂ ಕೇಳದಿರನವನೆಂದು
ಮೆಚ್ಚರಿಸು ನಿನ್ನೊಸಗೆಯಿಂದೆಮ್ಮನಿಂತು—
'ಮೌನದಿಂ ನಿನ್ನೊಳಗುನನ್ನಿಯುಂ ನೋಡು,
ತಾನ್ಮೆಯುಂ ಬಿರಿದು ತಾಳ್ಮೆಯಿನದಂ ಕೂಡು!—
ಚಿಪ್ಪಿನಾ ಮುಚ್ಚಿಕೆಯೊಳುಪ್ಪಹುದು ಮುತ್ತು,
ಕತ್ತಲಂ ತಾಳ್ದಿರುಳು ಮೂಡುವುದು ಹೊತ್ತು!''

---

[2] ಹಣವನ್ನು ದುಡಿವ ಗದ್ದಲ

## ಕವಿತಾವತಾರ

'ಎಲವೊ ದುರುಳ ನಿಷಾದ, ಕ್ರೌಂಚೆಯೊಡನೆಯಿಂದಂ
ಕಾಮಮೋಹಿತನಿನೆಯನನ್ನೆಸೆದೆ ಎಂದು,
ನೀಂ ಪ್ರತಿಷ್ಠೆಯನೊಂದದಿರು ಧರೆಯೊಳೆಂದುಂ !'[1] —
ಕನಿಕರಂ ಕನಲಲಿಂತಾದಿಕವಿ ಎಂದಂ.

ಗದ್ಗದಿಸಿತೊಡನೆ ವಾಣಿಯ ವೀಣೆ, ಮುಂತೇ
ಲಿತು ಬಾಷ್ಪಗಾನ ! ವಲಮುದರ ಮಧುರಿಮೆಯಿಂ
ನಿಮ್ಮುಸಿರ ಸೌಸವಂ ! ರಜನಿಯಿಮೆಯಿಮೆಯಿಂ[2]
ಮಧುದಿನಾಂತದ ಶಾಂತಿ ಕನವರಿಯುವಂತೆ[3]

ನಿಮ್ಮ ನಾನಾ ನಿನಾದದ ವಿಪಂಚಿಗಳ
ನಂತ ತಂತಿಯೊಳೊಂದು ತಂತಿಗುಲಿಯೊಂದೇ !
ಆದೊಡಂ, ಕವಿಗಳಿರ, ಎಲ್ಲ ತಂತಿಗಳ
ಸಂಗಡಿಸಿ ನುಡಿಸೆ ಕರುಣಾಧ್ವನಿಯನೊಂದೇ

ಸೂಸುವುದು ಮೇಳವಂ ! ಸುಯ್ಯೊಂದು, ನರುಕಂ
ಬನಿಯೊಂದು, ಬಿಕ್ಕೊಂದು—ಕವಿತೆ ಗಡ ಮರುಕಂ !

---

## ಭಾರತ ಭಾಗ್ಯ ವಿಧಾತಾ

(ಹಾಡು)

ಭಾರತ ಭಾಗ್ಯ ವಿಧಾತಾ
ತಾ ತಾ ತಾ
ಸ್ವರಾಜ್ಯವೆಮಗೆ ದಾತಾ
ತಾ ತಾ ತಾ || ಪಲ್ಲ ||

1 'ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥' (ವಾಲ್ಮೀಕಿ ರಾಮಾಯಣ)
2 ರಾತ್ರಿಯ ಎವೆ ಎಂದರೆ ನಕ್ಷತ್ರ 3 ಕನಸಿನಿಂದ ಎಚ್ಚರವಾಗು

ಅನಾಥರ ನಾಥಾ
ಪತಿತರ ನೇತಾ
ಮದಾಂಧರ ಜೇತಾ
ಪರತಂತ್ರರ ತ್ರಾತಾ ॥ ೧ ॥

ನೋಡೈ ನಿಮಿರೆಮೆಯೊಡೆಯಾ
ನಮ್ಮ ತನುಮನ ಕ್ಷುಧೆಯಾ
ನಗೆಯಮೃತದ ಜೇಯಾ
ಕೇಳ್ನಿರಾಶೆಯ ಸೆಲೆಯಾ ॥ ೨ ॥

ಭಾರತದ ಗದ್ಗದ
ದಿಂದುದಿಸಿ ಮೊರೆವುದ
ತಾರಮಗೆ ಸ್ನೇಹದ
ತವ ಶಂಖ ನಿನಾದ ॥ ೩ ॥

ಮೊಲೆ ಮಡಿಲ ಶಿಶುಗಳ
ಮಲತಾಯ ಜೋಗುಳ
ಗಳಿನೆಮ್ಮೊಳು ಭೇದಗಳ
ವಿಧಿ ಪಾಡಿದಳಗ್ಗಳ ॥ ೪ ॥

ಕಲಿಸೆಮಗೆ ಸತ್ಯವೊಂದು
ಇಸ್ಲಾಮಂತೆಯೆ ಹಿಂದು
ತಾಯ್ಮೊಲೆಗಳಿವೆಂದು
ಮೊಲೆ ಕೊಡುವ ತಾಯೊಂದು ॥ ೫ ॥

ನಮ್ಮ ಸುತ್ತಲು ನೀಡಂ
ಹುಯ್ವವೆರಕೆಯ ಹಾಡಂ;
ತೆರೆ ಸುಯ್ಗಳ ಗೂಡಂ,
ಕೊಡು ಗಗನದ ಬೀಡಂ ॥ ೬ ॥

ಪಡು ತೂಗುತಿದ್ಯೆ ತಿಮಿರಂ
ಕಾವೆವು ನಾವಿನ್ನೆವರಂ
ಜಗದಂಬಿಗ ಹಾಯ್ಸಿವರಂ
ನಿಲುನೇಸರ ತವರಂ ॥ ೭ ॥

ಬಡತನವೆ ಧನವೆಮಗೆ
ಕೊಡಲಾಪೆವೇಂ ನಿನಗೆ ?
ಕಂಬನಿಗಳಂದುಗೆ
ಚಾಚುವೆವು ನಿನ್ನಡಿಗೆ ॥ ೮ ॥

ಸ್ವರಾಜ್ಯ ಪಿಪಾಸೆ
ಜಗಕೆ ಹಾಲಿನ ಬಾಸೆ
ಯಪ್ಪಂತೆ ಕರುಣಿಸೆ,
ಸುರಿಗು ಶಾಂತಿಯ ಸೇಸೆ ॥ ೯ ॥

---

## ರಾಷ್ಟ್ರೀಯ ಶಿಕ್ಷಣದ ಸಪ್ತಾಹದ ಕರೆ

ದಾಯಿ ಹಾಲನೆ ನಂಬಿ ಬಾಯಾರಿ ಬಸವಳಿದು
ತಾಯೆ ಎಂದರಚಲುಂ ಮಿಸುಕದಿರೆ ರಸನೆ,
ನೀನೆಮ್ಮನರಸುತಯ್ತಂದು ತೊಡೆಯಲಿ ತಳೆದು
ಮೊಲೆಯಿನಿಂತೆಮ್ಮ ಬಾಯ್ದುಂಬಿಸಲು ಸಸಿನೆ, 4
ಧನ್ಯರಾವೆವು! ದಾಯಿಯೂಡಿಸಿದ ಮಗು ಮುಂದು
ತನ್ನ ತಾನರಿತೆದ್ದು ನಿಡುನಿಲ್ಲಲಹುದೇ ?
ರವಿ ಚಿತ್ರಿಪಂತೆ ಚಿತ್ರಿಪನೆ ಪುಷ್ಪಮನಿಂದು ?
ನೀನೀವ ಜೀವ ದಾಯಿಯಿನೆಮಗೆ ಬಹುದೇ ? 8
ತಾಯೆ ನಿನ್ನಯ ಪುಣ್ಯಪೀಯೂಷಸ್ತನ್ಯಂ
ಸೂಸುತಿದೆ, ರಾಷ್ಟ್ರೀಯ ಶಿಕ್ಷಣಮನನ್ಯಂ ?
ನವಜೀವನದ ಬುಗ್ಗೆಯಿದನೊಂದನೆಮ್ಮ
ಹೃದಯದ ನಿದಾಘದಿಂ ಬತ್ತಿಸದಿರಮ್ಮ! 12

ಕತ್ತಲೆ ಕವಿದ ನಮ್ಮ ಕಂಗಳಿಗೆ ಪರೆ ನೆರೆಯೆ,
ನಮ್ಮ ನಾವ್ಮರೆತು ನಮ್ಮವರ ಮರೆವನ್ನಂ,
ಚೆದರಿ ನಮ್ಮೊಳಗೆ ಜಗಳಾಡಲೇನಚ್ಚರಿಯೆ ?
ಸಾಕಿನಿತು! ರಾಷ್ಟ್ರೀಯ ಶಿಕ್ಷಣವೆ ನಿನ್ನ
ದೀಧಿತಿಯಿನೆಮ್ಮಯ ಮನೋನಯನಮಂ ತೆರೆದು,
ಭೇದಗಳ ಬಿರುವರೆಯ ಹೆರೆಯಿಸುವುದಲ್ಲಿ!
ನಾನೆ ನಾ ನೀನೆ ನೀನಿದನೆಮ್ಮೆದೆಯಿನರೆದು
ನಾವು ನಾವೆಂಬ ಭಾಷೆಯ ಕೆತ್ತಿಸಲ್ಲಿ!
ಕ್ರೈಸ್ತ ಪಾರಸಿ ಜೈನ ಮುಸಲಮಾನ್ ಹಿಂದು
ವೆಮಗೆಲ್ಲರಿಗೆ ನಮ್ಮ ಭಾರತಮಿದೊಂದು
ತವರು ಗಡ! ರಾಷ್ಟ್ರೀಯ ಶಿಕ್ಷಣವೆ ಬಂದು
ಒಟ್ಟಿನ ತವರ್ತನವನೆಸಗಿನ್ನು ಮುಂದು!

ಎದ್ದೇಳಿರೈ ಬಂಧುಗಳಿರ! ಕೆಲವರಿಯುತಿದೆ
ರಾಷ್ಟ್ರೀಯ ಶಿಕ್ಷಣದ ಸಪ್ತಾಹವಿಂದು!
ತಂತನೂಳಿಗವ ಗೆಯ್ಯಿರಿವೆಂದು ಕರೆಯುತಿದೆ,
ಬಂಗಾರಮಪ್ಪುದು ಭವಿಷ್ಯ ವಲಮೆಂದು!
ತನ್ನ ತಾಯ್ನುಡಿಯಿಂದ ದುಡಿದ ಬಿಜ್ಜೆಯೆ ಬಿಜ್ಜೆ!
ಹೆರರ ನಾಲಗೆಯೆಂಜಲೆನ್ನೆಗಂ ಸವಿಯೊ ?
ತನ್ನ ಮುಂಗತಿ ತೋರೆ ತನ್ನ ಹಿರಿಯರ ಹೆಜ್ಜೆ!
ಹೆರರ ಬೆಳಕೊಳೆ ಕಾಂಬ ತನ್ನವರ [1]ಕವಿಯೊ ?
ಅವರವರ ನುಡಿಗಳಿಂದವರವರ ಜಾಣೆ
ಕೆಯನೆಚ್ಚರಿಸುವ ನುಡಿಗಳ ತಾಯೆ: ವಾಣಿ!
ನಿರವಶೇಷ ಜ್ಞಾನದರ್ಜನವನೆಮ್ಮ
ನುಡಿಯಿನೆಮಗಿತ್ತು ಭಾರತವ ಸಲಹಮ್ಮ!

---

[1] ದೃಷ್ಟಾರ (seer).

## ಪಾತರಗಿತ್ತಿಗೆ

ಮರಿತನದ ಮರವೆಯಿಂ ಮರಸಿ ತಂದಪೆಯಾ ?
ಚಿತ್ರಾಂಜಲಿಯು ಗ್ರೀಷ್ಮ ಸಂತಾಪಕೆನ್ನ?
ನಸೆದ ನಲವಿನ ನೆನಹಿನಂಜನದಿ ನನ್ನ
ಸೋರೆದೆಯ ಸೇದೆಯುಂ ಸವರೆ ಬಂದಪೆಯಾ ? 4

ಸಾಕು, ನಿನ್ನುಪಚಾರಗಳನೊಲ್ಲೆನದನು
ಇನಿತು ಬೇಗನೆ ಮರೆತೆಯಾ ? ನಾನುಮಾಕೆ
ಈರ್ವರಾವಿದ್ದೆವಿಲ್ಲಿಯೆ; ನಿನ್ನನಾ [1]ಕೇ
ಸರಲ ತುರುಬಿಂದ ಕಸುವನ್ನಮೆತ್ತಿದೆನು!

ನಿನ್ನೆದೆಗೆ [2]ಮಕರಿಕೆಯು ಚುಚ್ಚಿಸುವೆ ನಲ್ಕಿ
ಈ ಗರಿಯಿನೆನೆ, ನಿನ್ನ ಚುಂಬನದಿನೊಲ್ಲೆ
ನನ್ಯ ಸಿಂಗರವನೆದೆಗಿನೆಯು; ಬಿರಯಿತಿಯಾ
ಕೆಗೆ ಬೀಳ್ಕೊಡಿದನು— ತೂಗಲಿ ಗರಿಗೆ ಗರಿಯುಂ!

* * * * *

ನೀವೀರ್ವರೀಗ! ನಾನೋರ್ವನೀ ಪರಿಯೇಂ ?
ಪೇಳ! ಪೋಗರಸಕಟ ಪುಷ್ಪಗಳ ಚಿತಿಯಾ!

---

## ಕೇಳಿಸದ ಕರೆ

(ಹಾಡು)

ಗಿಳಿಬಾಗಿಲ ತೆರೆಯೆಯಾ ? ಹೂ
ದನಿಯಿನೆನ್ನ ಕರೆಯೆಯಾ ?
ಬದಲು ಬಿದುವ ತೋರೆಯಾ ? ತಾ
ರಾಕಟಾಕ್ಷ ಬೀರೆಯಾ ? 4

1 ಕೆಂಪಾದ ಹೂವು  2. ಹೆಂಗಸರು ಎದೆಯಲ್ಲಿ ಬರೆದುಕೊಳ್ಳುವ ಚಿತ್ರಗಳು.

ಹಣತೆಹುಳವ ನಂದಿಸಿ, ಬಾ
ವಲಿಯು ತಕ್ಕಡಿಯೊಂದಿಸಿ,
ಇರುಳ ಮಳಿಗೆ ಮುಗಿಯಿತು, ನೈ
ದಿಲೆಯು ಬೀಗ ಬಿಗಿಯಿತು.

ಪಡುಹಾಸಂಗಿಯೆಡೆಯುಲಂ
ಗಾತ ಬಿದ್ದ ಕವಡೆಯು
ಬಗೆವಳೆ ಉಷೆ ದಾಯುವುಂ
ನಿನಗುಲಿಸಲೆಲರ ಗೇಯುಮುಂ ?

ನಿನಗೆ ತೆತ್ತು ನೆನಸನು, ನಿ
ನ್ನಿಂದ ಕೊಳಲು ಕನಸನು,
ನಿನ್ನ ಕಣ್ಣ ಸಂತೆಗೆ ರವಿ
ಬಂದನಿದೊ ಕದಂ ತೆಗೆ!

ನಲಿನಿಯು ನನೆಮುನಿಸಿನ, ಕೋ
ಗಿಲೆಯು ಕೊರಳ ಕನಸಿನ,
ಮುಗಿಲಿನ [1]ಮಿರುವರಿಕೆಯು ಸ
ಲ್ಲುತಿದೆ ನೋಡ ಹರಕೆಯು!

[2]ಪತಂಗದಂಚೆಗರಿಯುಲಿ, ವಿ
ಹಂಗದೆಲರ ತರಿಯುಲಿ,
ಅಲರ ಪರಿಸೆಯುಲಿ ನಿನ್ನ ನಾ
ಪಾರ್ವೆನೊಸಗೆಯುನುದಿನ!

ನೆನವ ಮೊಗ್ಗೆಯುಲಿ ನಿನ್ನ
[3]ಸೂವರಿಪಾಸೆಯುನೆನ್ನ
ನೆರೆಬಿಡಿಸೆಯು ನೆಟ್ಟಗೆನ್ನ
ಕಾವ ಕಣ್ಣಿನ [4]ಹುಟ್ಟಿಗೆ ?

ಮಿತ್ರನ ಓಡುವಿಕೆ 2 ಅಂಚೆ=ಟಪ್ಪಾಲು 3 ಸೂ ಎಂದು ಮೊರೆವ 4 ಜೀವ ಹುಟ್ಟಿ

ಎದುರು ಕನ್ನಡಿಯಿಲ್ಲದೆ
ಕಣ್ಣು ಕಣ್ಣನು ಬಲ್ಲುದೆ ?
ಹೆರದೆ ಬಸಿರ ಮಗುವನು ತಾ
ಯರಿಯುಳದರ ಮೊಗವನು!

ಕಣ್ಣ ನಗೆಯು ಸೆಲೆಯೊಲು, ಬಿರಿ
ವೂಗಳ [5]ಕಾದಲೆಯೊಲು,
ಉಲಿಸಾಲದ ಬಾಸೆಯುಂ ಕೇ
ಳಿಸಿ ತುಂಬೆನ್ನಾಸೆಯುಂ!

ಬದುಕು ಗಾಳಿಪಟವೆನ್ನ ಮುಂ
[6]ಬೆಳೆಯುದೆಳೆಯುನೆಳೆವನ್ನ,
ಕಡಿಯೆ—ಕತ್ತಲ ಕಾಡಿಗೊ ? ನೀ
ನಿರುವ ನೇಸರ ನಾಡಿಗೊ ?

---

## ಯೇಸು—ಕೃಷ್ಣ

ರಾಗ ಬೇಹಾಗ—ತಾಳ ತ್ರಿವಟ

ಶ್ರೀ ಹರಿಯೇ ಬಳಲಿದೆ ಎಂತು
ನಮಗಾಗಿ ನರಲೀಲೆಯನಾಂತು ! ॥ ಪಲ್ಲ ॥

ಶುಭಜನನಕೆ ಸೆರೆಗತ್ತಲೆಯೊ ಹಿತ
ವಾದುದು [1]ಮಂದೆಯ ಗೋದಲೆಯೊ ?
[2]ಮಿಸರಕೆ ನುಸುಳಲು ತಾಯುಡಿಯೊಂಟೆಯೊ ?
ಯಮುನೆಯೀಸೆ ತಂದೆಯ ತಲೆಯೊ ? ॥ ೧ ॥

5 ಕಾದಲ್ಕೆ 6 ಎಳೆ=ನೂಲು
1 ಲೂಕ II 7 2 ಮತ್ತಾಯ II. 14

ಕೊಳಲ ಸೂಸಿ ಹಸು ಮೇಸಿದೆ, ಕೊಡತಿಯು
ಬಡಿದು [3]ಬಡಗಿಯಾ ಪಡಿದುಡಿದೆ;
[4]ನಾಡನುಳಿದು ನಡುಗಡಲೊಳಗಡಗಿದೆ,
[5]ಮುಡಿಯಿಡಲೆಡೆವಡೆಯದೆ ನಡೆದೆ. ॥ ೨ ॥

ರಾಧೆ ಬಿಗಿದ ಭುಜಬಂಧದ ಬಂದಿಯೊ ?
[6]ಮರಿಯಳ ಮುತ್ತುಗಳಂದುಗವೊ ?
ಕುರುರಾಯನ ಹೆಡಮುರಿ ಕೇಯೂರವೊ ?
[7]ಮುಳ್ಳುಮುಕುಟ ಮುಡಿಸಿದ ಮೊಗವೊ ? ॥ ೩ ॥

ಬಿಲ್ಲಿನ ಹಬ್ಬದ ಗೆಲ್ಲಿನ ಪಯಣಕೆ
[8]ಮರಿಗತ್ತೆಯೆ ಮೆರತದ ರಥವೆ ?
[9]ಯೂದನ ಮುತ್ತಿನ ಸ್ವಾಗತವೆ ? ಚೈ
ದ್ಯನ ಸೇಸೆಯು ಬಯ್ಯುವಭ್ರ ಥವೆ ? ॥ ೪ ॥

ದುರುಪದಿಯುರುವೆಯು ಕಾದಗೆ ಮಾರ್ಥಳ[10]
ಮನೆಗೆಲಸದಿ ಬಲು ಬೇಸರವೆ ?
ಭೀಷ್ಮನ ಶರದಿಂ ನೋರ್ವೆಪೆಯೊರಸದೆ
[11]ಶಿಷ್ಯರ ಕಾಲ್ತೊಳೆವವಸರವೆ ? ॥ ೫ ॥

[12]ನಲವತ್ತು ದಿನದುಪೋಷ್ಯಕೆ [13]ಹಿಡಿ
ಯವಲಕ್ಕಿಯು ಪಾರಣೆ ಸಾಕೆ ?
ವಿದುರನ ಕುಡುತೆಯು ಕುಡಿದ ತೇಗಿಗೆ [14]ಸ
ಮಾರ್ಯಳು ಮೊಗೆದಾ ಜಲವೇಕೆ ? ॥ ೬ ॥

3 ಮಾರ್ಕ VI 3 4 ಜರಾಸಂಧನ ಬಾಧೆಗಾಗಿ ಮಥುರೆಯನ್ನು ಬಿಟ್ಟು ದ್ವಾರಕೆಯಲ್ಲಿ ವಾಸ 5 ಲೂಕ IX 58 6 ಲೂಕ VII 38 7 ಮತ್ತಾಯ XXVII 29 8 ಯೋಹಾನ XII 4 9 ಮತ್ತಾಯ XXVI 49. 10 ಲೂಕ X 41 11 ಯೋಹಾನ XIII 5. 12 ಮತ್ತಾಯ IV 2. 13 ಕುಚೇಲನು ತಂದಿತ್ತ ಅವಲಕ್ಕಿ 14 ಯೋಹಾನ IV 7

[15]ಹರ್ಮೋನನಲಿ ರೂಪಾಂತರವಾಂತಗೆ
[16]ಮೂವತ್ತು ಬೆಳ್ಳಿಗಳ ಬೆಲೆಯೆ ?
ಪಾರ್ಥನೀಕ್ಷಿಸಿದ ವಿಶ್ವಶರೀರಿಗೆ
[17]ಜೋಡೆಲೆ ತುಳಸಿಯನಿತೆ ತೂಲೆಯೆ ? ॥ ೭ ॥

[18]ಪಾಪದ ಸಾಲಕ ನೀರೆರೆದುದ ನಿಜ
ನೆತ್ತರಿಂದ ನಿರವಿಪ ತೆರವೆ ?
ನಂಬಿದರೂಳಿಗಿ ಎಂದು ಸಾರೆ, [19]ಬಿಳಿ
ಕುದುರೆಯ ಕಿಳಿರಿನ ಡೆಂಗುರವೆ ? ॥ ೮ ॥

[20]ಕಳ್ಳನೆಂಬ ಹಳಿ ಮೆರಸಲೇಂ ನೀ
[21]ಕಳ್ಳರ ನಡು ತೂಗಾಡಿದೆಯಾ ?
ಬೆರಳಲಿ ಬೇಡನ ಬಾಣ ಬೇಯುತಿರೆ,
[22]ಸಿಲುವೆ ಮೊಳೆಗೆ ಕೆಯ್ನೀಡಿದೆಯಾ ? ॥ ೯ ॥

[23]ನಮ್ಮೊಳಗಣ ಸ್ವಾರಾಜ್ಯ ಸೇರಲೆಮ
ಗೂಡಿದೆ [24]ಪ್ರೇಮದ [25]ಮೆಲುನೊಗವಂ!
[26]ತನ್ನನೆ ಮರೆವೊಂದೆನ್ನುವ ಬದುಕಿನ
[27]ಸೆಲೆಹಾಡಿಗೆ ನುಡಿಸಿದೆ ಜಗವಂ! ॥ ೧೦ ॥

ಯದುನಾಥನೆ [28]ಯೂದನಾಥನಲ್ಲವೆ ?
ಕಾಲಗಳಿವು, ನಿನಗಳಿವಿಹುದೆ ?
ದಿನವೆರಡರ ಭಾಸ್ಕರನೆರಡಹನೆ ?
ನಿನ್ನಲಿ ಭೇದ ಬಗೆಯಬಹುದೆ ? ॥ ೧೧ ॥

15 ಮತ್ತಾಯ XVII 2 16 ಮತ್ತಾಯ XXVI 15 17 ಸತ್ಯಭಾಮೆ ಆಚರಿಸಿದ ದಾನವ್ರತದಲ್ಲಿ 18 ಮತ್ತಾಯ XXVI 28 19 ಅರ್ಜುನನ ರಥದ ಬಿಳಿಕುದುರೆಗಳು 20 ನವನೀತಚೋರ, ಸ್ಯಮಂತಕಹರ್ತಾ ಇತ್ಯಾದಿ 21 ಮಾರ್ಕ XV 27 22 ಮಾರ್ಕ XV 25 23 ಲೂಕ XVII 21 24 ಯೋಹಾನ XIII 34, ಮಾರ್ಕ XII 30-31, 25 ಮತ್ತಾಯ XI 28-29. 26 ಗೀತೆ XVIII. 66 27 ಭಗವದ್ಗೀತೆ. 28 ಲೂಕ XXIII 38.

[29]ಎಂದೆಂದಿಗೆ ಧರ್ಮ ಕುಂದಿ ಬಂದವು
ದಧರ್ಮ ಮುಂದರಿವಂದಂದು
ಬಂದಪೆನೊಡಲಾಂತೆಂದಿಹೆ—ಮೆಯ್ಯೆನಿ
ತಾಂತು ಬಂದಪೆಯೊ ಇನುಮುಂದು! ॥ ೧೨ ॥

---

## ನಂಬಲೆಂತು?

ರಾಗ ಧನ್ಯಾಸಿ—ಆದಿ ತಾಳ

ನಂಬಲೆಂತು ನಾ ನೋಡುವ ಮುನ್ನ
ಯದುಕುಲದಾ ಲೀಲೆಯ ನಿನ್ನ? ॥ ಪಲ್ಲ ॥
ನೋಡದೆ ನಂಬಲು ಬಲ್ಲವನಲ್ಲ,
ನೋಡಿಸಿ ನಂಬಿಸೊ ಬಲ್ಲವ ನಲ್ಲ! ॥ ಅನು ॥

[1]ನನ್ನ ಮನದ ಮೋಹಮೇಕೆ ಹೀರೆ?
[2]ಏಕೆದೆಯಾನೆಯ ಮದ ಮುರಿಯೆ?
[3]ಏಕೆ ಕನಲ ಕುದುರೆಯ ಕೊಲಲೀರೆ?
[4]ಬಿಗಿತದ ಕತ್ತೆಯ ತಿರ್ರನೆ ತರಿಯೆ? ॥ ೧ ॥

[5]ಎದೆಯ ಬೆದೆಯ ಹಿಳಿಲನೇಕೆ ಹಿಳಿಯೆ?
[6]ಕಪಟದೇಕೆ ರೆಕ್ಕೆಯ ಕೀಳೆ?
[7]ಹಗೆಯ ಹಾವಿನೇತಕೆ ಹೆಡೆ ತುಳಿಯೆ?
[8]ಸೆಳೆಯಾಸೆಯ ಸುಳಿಯನೇಕೆ ಸೀಳೆ? ॥ ೨ ॥

29 ಗೀತೆ IV 7

1 ಪೂತನಿ 2 ಕುವಲಯಾಪೀಡನೆಂಬ ಆನೆ 3 ಕೇಶಿ ಎಂಬ ಕುದುರೆ 4 ಧೇನುಕನೆಂಬ ಕತ್ತೆ 5 ಅರಿಷ್ಟನೆಂಬ ಗೂಳಿ 6 ಬಕಾಸುರ 7 ಕಾಲಿಯನೆಂಬ ನಾಗ 8 ತೃಣಾವರ್ತ

ನಿನ್ನಡಿ ಹಂಬಲ ಹಸವ ಮೋಸೆಯು ?
ಕೊಳಲಾಗದೆ ಬಿದಿರೆದೆಯೆನ್ನ?
[9]ಆಲ ಸಾಲದೇನೆನ್ನೆದೆಯಾಸೆಯು ?
[10]ಎತ್ತೆ ಏಕೆ ಪಾಪದ ಮಲೆಯನ್ನ? ॥ ೩ ॥

ಡಂಬ ಭಕ್ತಿಯೆನ್ನೆದೆಯಿಂ ಮಾಣದೆ,
[11]ಮಘವನ್ಮಖ ಮಾಣಿಸಿ ಗುಣವೇಂ ?
ನನ್ನ ನಯನದಿ ಸದಾ ನಿನನಾನದೆ,
[12]ಯಮುನೆಯ ತೇಲಿನ ನೆಳಲಲಿ ತಣಿವೇಂ ? ॥ ೪ ॥

[13]ಹೂವಿನಾಸೆಯೇ ? ಪ್ರೇಮದ ಮೊಗಸನೆ
ಸೂಸಿ ಹೂವಿಸೇಕೆದೆಯೆನ್ನ?
[14]ನನ್ನೆದೆಯೊಗೆಯುದೆ ಪಾತಕಿಯಗಸನೆ ?
[15]ಬಾಗಿಹೆ, ನೆಟ್ಟನೆ ನೆಗಹೇಕೆನ್ನ? ॥ ೫ ॥

ನನ್ನೆದೆಯಾನ್ಮೆಯ [16]ಮಲ್ಲನ ಮುರಿಯದೆ,
[17]ಹರಿಯದೆದೆಯ ಹಿಂಸೆಯ ಬಿಲ್ಲ,
ಪಾಪಪುರುಷ ಕಂಸನಿರವನಿರಿಯದೆ,
ಬಲ್ಲೆನೆ ಬಿಲ್ಲಿನ ಹಬ್ಬದ ಗೆಲ್ಲ ? ॥ ೬ ॥

ಗೊಲ್ಲ ಗೊಲ್ಲತಿಯರಲ್ಲಿಯೆ ಸಾಕೆನೆ
ಸಲ್ಲಿಸಿದೆಯೊ [18]ಮಲ್ಲಣಿಯೆಲ್ಲ ?
ಹೊಲ್ಲ ಹೊಲ್ಲದಲಿ ತಲ್ಲಣಿಪೇಕೆನ
ಗೂಲ್ಲೆ ಮೆಲ್ಲಡಿಯ ಪಲ್ಲವದೊಲ್ಲ ? ॥ ೭ ॥

ಆದೆಯ ರಾಧೆಯ ಹೃದಯಾರಾಧನ ?
ಈಯೆಯೇಕೆ ನಿನ್ನಡಿ ಸಾರೆ ?
ಕಂಬನಿಯಿಂಬಗನೆಂಬುದೆ ಸಾಧನ—
ಅಂಗಲಾಚಿ ಕರೆವೆನೇಕೆ ಬಾರೆ ? ॥ ೮ ॥

9 ಭಾಂಡೀರವೆಂಬ ಆಲದ ಮರ 10 ಗೋವರ್ಧನೋದ್ಧಾರ 11 ಇಂದ್ರಯಜ್ಞ ನಿಷೇಧ 12 ಅಕ್ರೂರನಿಗೆ ಯಮುನಾ ನದಿಯಲ್ಲಿತ್ತ ದರ್ಶನ 13 ಮಾಲಾಕಾರನಿಂದ ಹೂವನ್ನು ಕೊಂಡುದು 14 ಮಥುರೆಯಲ್ಲಿ ಅಗಸನನ್ನು ಎದುರ್ಗೊಂಡುದು 15 ಕುಬ್ಜೆ 16 ಚಾಣೂರ 17 ಧನುರ್ಭಂಗ 18 ರಾಸಕ್ರೀಡೆ

ನನ್ನೆದೆ ಯದುಕುಲದಲಿ ಕಂಬನಿಯಾ
ಕೂಲದಿ ಬಾಲಲೀಲೆಯು ನಿನ್ನ
ಮುರಳಿ ಮೊರಸದಿರೆ, ಕನಸಿನ ಗನಿಯಾ
ಕಾಲನನಗೆಯುಳಳವೆ ಅಕಟೆನ್ನ? ॥ ೯ ॥

---

## ಮಹಾತ್ಮರ ಉಪವಾಸ

[ರಕ್ತಾಕ್ಷಿ ಸಂ। ದ ಭಾದ್ರಪದ ಬ।೫ (೧೮—೯—೧೯೨೪)ಯಿಂದ ಆಶ್ವೀಜ ಶು।೧೧ (೮—೧೦—೨೪)ಯ ವರೆಗೆ ಮಹಾತ್ಮಾ ಗಾಂಧಿಯವರು ಥಿಲ್ಲಿಯಲ್ಲಿ ಮಾಡಿದ ೨೧ ದಿನಗಳ ಉಪವಾಸ]

ಮಂಜಿನೇಕಾಂತದಲಿ ಶ್ರೀಹರಿಯು ಹಂಬಲಿಸಿ,
ಹೃದಯ ಕ್ಷುಧೆಯನ್ನೂಡುತೊಡಲ ಹಸಿವಿಂದಂ,
ಮನದ ರಂಭೆಯು ಗೆದ್ದು [1]ಶುಕನಾತನನ್ನೊಲಿಸಿ,
ಭಕ್ತಿಗಂಗೆಯ ಭಾರತದ ತೃಷೆಗೆ ತಂದಂ

[2]ಉರುವೇಲೆಯುರಳಿಯಡಿಯಲಿ ಚಿರಂ ಹಸಿದರೆದು,
ಮಾರನಂ ಮುರಿದು ಸಂಬುದ್ಧನೆಮಗಗ್ಗಂ
ನಿಬ್ಬಾಣವೊಂದೆ, [3]ತಣ್ಹೆಯುರಣ್ಯವುಂ ತರಿದು,
ತೋರ್ದನರಿಯಟ್ಠಂಗಿಕದ ಧಮ್ಮಮಗ್ಗಂ [4]

ಕಟ್ಟಳಯ ಕುರುಡಿನಲಿ ಬೆಳಕಿನೊಡೆಯನ ಸೋಸು
ವೆಮ್ಮೆದೆಯ ಪರೆಯ ಹರೆದೆವ್ಮೊಳಗೆ ನಿಸದಂ
ನೆಲಸಿರುವ [5]ಸ್ವಾರಾಜ್ಯವೆಮಗೆ ತೋರಿಸೆ ಯೇಸು
[6]ಯೋರ್ದನಿನ ಬನದಿ ನಲವತ್ತು ದಿನ ಹಸಿದಂ

1 ಪರಿಕ್ಷಿದ್ರಾಯನಿಗೆ ಶ್ರೀಮದ್ಭಾಗವತವನ್ನು ಹೇಳುವ ದ್ವಾರಾ ಶುಕಯೋಗಿ ಭಕ್ತಿಮಾರ್ಗವನ್ನು ಬೋಧಿಸಿದನು 2 ಬುದ್ಧಗಯೆಯ ಸಮೀಪದಲ್ಲಿರುವ ವನ 3 ತೃಷ್ಣೆ, ವಿಷಯ ಲಾಲಸೆ 4 ‘ಅರಿಯೋ ಅಟ್ಠಂಗಿಕೋ ಧಮ್ಮ ಮಗ್ಗೋ’—The noble eightfold path. 5 ಸ್ವರ್ಗದ ರಾಜ್ಯ 6 ಯೆರೂಸಲೇಮಿನ ಬಳಿಯ ಒಂದು ಹೊಳೆ

ಅರಬರೆದೆಯುರಬಿಂದ[8] ನೊಂದು, ನವಜೀವನವ
ನುಪವಾಸದಿಂದರಸಿ [9]ಹಿರೆಯ ಕಂದರಿಯಿಂ
ದೇವರಲ್ಲದೆ ದೇವರಿಲ್ಲೆಮ್ಮ ಕಾವನವ
ನೆಂಬ ಸತ್ಯದಿ ಕಂಡನದನರಬರೆರೆಯುಂ.

ಗುರುವೆ ಇಪ್ಪತ್ತೊಂದು ದಿನದುಪೋಷ್ಯವ ನೋಂತು
ಧಿಲ್ಲಿಯಿಂ ನೀ ಚೆಲ್ಲಿದೀ ಪ್ರೇಮ ಬೀಜಂ
ಭಾರತದ ಭಾಗ್ಯಲತೆಯಾಗಿ ಮಡಲಿಡದೆಂತು ?
ಬೆಳಸದೆಂತಮರ ಸೌದರ್ಯಮಿದು ಸಾಜಂ ?

---

## ತೌಳವ ಮಾತೆ

### ರಾಗ ಭೈರವೀ—ತ್ರಿತಾಲ

(' ಪತಿತೋದ್ಧಾರಿಣಿ ಗಂಗೇ ' ಎಂಬ ಬಂಗಾಳೀ ಹಾಡಿನಂತೆ)

ಜಯ ಜಯ ತೌಳವ ತಾಯೇ || ಪಲ್ಲ ||
ಮಣಿವೆ ತಂದೆತಾಯಂದಿರ ತಾಯೇ,
ಭುವನದಿ ತ್ರಿದಿವಚ್ಛಾಯೇ || ಅನು ||

ಭಾರ್ಗವನಂದು ಬಿಸುಡೆ ಕೊಡಲಿಯ ನೀ ಕಡಲೊಡೆದೆಡೆಯಿಂ
ಮೂಡಿ,
ಭಾರತಮಾತೆ ತೊಡೆಯೊಳೊಡಗೂಡಿಸೆ, ಸಹ್ಯವೀಣೆಯಂ ತೀಡಿ—
ದೆಸೆದೆಸೆ ರವಿಶಶಿ ಕಿರಣದ ಮಳೆಕುಳಿರಿನ ಮಿಸುಸೇಸೆಯ ಸೂಸೆ—
ನವನವ ರಿತುಗಾನವನವತರಿಸುವೆ, ಗಗನವನಧಿಯೋಲೈಸೆ ! || ೧ ||

ಸಾತಿಯಪುತರ ತವರ್ಮನೆ, [1]ಸಾತರ ತೆಂಕಣ ನೆಲೆಮನೆಯು
ಲೂಪರಾ
ಕೆಳಮನೆ, ಪಾಂಡ್ಯರ ಮೇಲ್ಮನೆ, ನೆರೆಯುರಮನೆ ಕನ್ನಾಡಿನ
ಭೂಪರಾ;

8 ಅರಬು=ಶುಷ್ಕತೆ, ಅಜ್ಞಾನ 9 ಮಕ್ಕದ ಸವಿಾಪದಲ್ಲಿರುವ 'ಹಿರಾ' ಎಂಬ ಗುಡ್ಡದ ಗುಹೆಯಲ್ಲಿ ಮಹಮ್ಮದನು ಧ್ಯಾನಿಸುತ್ತಿದ್ದನು

1 ಸಾತವಾಹನರು

ಭೈರವ ಬಂಗರ ಚೌಟರಜಿಲ ಸಾವಂತರ ಮನೆಮನೆಯಿಂಬೇ,
ತುಳುವರ ತಾಯ್ಮನೆಯುಳಿದರ ಕಾಯ್ಮನೆ—ನೀನೆಮ್ಮಯ ಮನೆ
ಯಂಬೇ ॥ ೨ ॥

ದೇಗುಲಗಳೊ ಧರ್ಮದ ಬಾಗಿಲಗಳೊ? ಪುಣ್ಯಘಟಂ ತಟನೀತಟಂ!
ಬಸದಿಗಳೋ ಕನಸೇ ಕಲ್ಲಾದುವೋ? ನೆಲಬಿರಿದೆದ್ದರೆ ಗೊಮ್ಮಟಂ?
ನಿನ್ನ ಪುಲಕವೇ ಪಸುರಿದಂತೆ ಪಸರಿಸಿದೀ ಸಸ್ಯದ ಚೆಲುವೇಂ!
ಜೀವನಸಾಮವನಾಡುವ ಪಾಡುವ ಖಗಮೃಗಪತಂಗದೊಲವೇಂ! ॥ ೩ ॥

ಹಿಂದು ಜೈನ ಮುಸ್ಲೀಮ ಕ್ರೈಸ್ತರಾವೊಂದೇ ಬಾಂಧವರೆಮ್ಮಾ
ತಂದೆ ದೇವರೊಬ್ಬನೆ, ನೀನೊಬ್ಬಳೆ ನಮ್ಮೆಲ್ಲರ ತಾಯಮ್ಮಾ!
ಎಂದಿನವಳೊ ನೀನಿಂದಿನವರೆ ನಾವಾದೊಡೆಮ್ಮನಕ್ಕರೆಯಿಂ
ನಿನ್ನೆದೆ ತೊಟ್ಟಿಲೊಳಿಟ್ಟು ಸಾಕುತಿಹೆ, ಸರಸಿಯಂತೆ ತಾವರೆಯಂ ॥ ೪ ॥

ಧನ್ಯನೆನಿತೊ ನಾ ನಿನ್ನಯ ಬಸುರಿಂದುಸುರಿಸಲೀ ಹೂವನ್ನ!
ಕೆಸರೊಳುದುರಲೀಯದೆ, ನಿನ್ನಡಿಗರ್ಪಿಸಿಕೊಳು ಸೌಸವವನ್ನ!
ಬೇಡುವೆನವ್ವಾ, ಬೀಳ್ಕೊಡುವಂದೆನ್ನನೆತ್ತಿದಂಕದಿ ನಿನ್ನ,
'ಮರಳಿ ಬಾರ, ಕಂದಾ, ನನ್ನುದರದಿ' ಎಂದು ತಬ್ಬಿ ಹರಸೆನ್ನ! ॥ ೫ ॥

---

## ಚಾತಕ

'ಬೇಸಗೆಯ ಬೇಸರಂ ಬೀಸು [1]ಕಾದಿಗೆಯೇ!
ಮೊಗ್ಗರಿಸಿ ಮೊರೆ ಮುಗಿಲೆ! ಮಿನುಗು ಮೊನೆಮಿಂಚೇ!—
ಮೋಣಿಂತು ಮಳೆಯ ಮುಂಬನಿ ಮಣಿದು ಹೊಂಚೆ
ನಿನ್ನ, ನೀನದನೊಲ್ಲದೆಲ್ಲಿ ಚಾದಗೆಯೋ[2]? 4

1 ಮಳೆಗಾಲವಾರಂಭಿಸುವ ಮಾಸ (ಕಾತಿಕೆ)
2 ಮಣಿಯಂತೆ ಸಣ್ಣಗೆ ದುಂಡಾಗಿ, ಬಗ್ಗಿ

ನಿನ್ನ ತನುವೆಂತು ? ದನಿಯೆಂತು ? ಮನೆಯೆಂತು ?
ದೆಸೆದೆಸೆಯ ಸೋಸಿ ನಾ ಸೋತೆ ! ನೀಂ ಭುವಿಯಾ
ಹಾರುಹಕ್ಕಿಯೊ ? ಬರಿಯ ಕಾಣಿಕೆಯೊ ಕವಿಯಾ ?
ಬಾರ, ತನಿ ಬಾನಹನಿ ಬಸಿದೆಸೆಯ ಬಂತು !' —

'ಹೊರಗೆನ್ನಸರಸುವರೆ, ಮರುಳೆ ? ನಿನ್ನೊಳಗೆ
ಮರೆಯುನ್ನ ! ಹೊರಹಕ್ಕಿಯಲ್ಲ ನಾನರಿಯಾ ?
ನಿನ್ನೆದೆಯ ಮುಸುಕಿ ಮನನಂ ಮಸೆದು ಮೊಳಗೆ,
ಕನಸು ಝಲ್ಲನೆ ಝಳಕೆ, ಸೋರ್ವ ಸೀವರಿಯಾ
ಕುಡಿದು ಕಿಲಕಿಲ ಕೆಲೆವೆ ಕಂಠದಿಂ ಕವಿಯಾ—
ಕಿವಿಯಾರ ಕಾಂಬೆಯುಂದೆನ್ನ ಮೆಯ್ಸವಿಯಾ !'

---

## 'ಅಯ್ದಯ್ದರನಿತಯ್ದುತಯ್ದಿತಾ ಕಾಲಂ'

ಅಯ್ದಯ್ದರನಿತಯ್ದುತಯ್ದಿತಾ ಕಾಲಂ
ನಿನ್ನ ನಿನ್ನವರಂದು ನನಗಿತ್ತ ದಿನದಿಂ;
ವಿಧಿ ನಿನ್ನ ತುಡುಕಲಿಂದೆನ್ನ ಬಾಳ್ತನದಿಂ
ಕತ್ತಲಿಸಿತೊಡನೆ ಮುಂದಣ ಚಕ್ರವಾಲಂ !

ನಿನಗಾದುದಿಲ್ಲ ನಾ, ನೀನೆ ನನಗಾದೆ—
ನನ್ನ ಕೆಯ್ವಿಡಿದೆ ನೀನಳಲನನುಭವಿಸೆ !
ನಿನ್ನ ಚೆಲುವಲಿ ಪಿಪಾಸೆಯುನೆನ್ನ ತವಿಸೆ
ನಿನ್ನೆದೆಯುನನ್ಯ ಪ್ರೇಮವನರಿಯದಾದೆ !

ಇನ್ನಾದರೆನ್ನೆದೆಗೆ ಪ್ರೇಮದಾ ಭಿಕ್ಷೆ
ಯನ್ನೀಯೆ—ನೀನಲ್ಲದಾರೀವರೆನಗೆ ?
ನಿನ್ನ ಪ್ರೇಮದಲಿ ನನಗಾಜೀವ ದೀಕ್ಷೆ
ಯನ್ನೀಡ, ಬಾರೆದೆಗೆ, ಬಾ ನಿನ್ನ ಮನೆಗೆ !
ನಿನ್ನ ಮುಡಿಗಿಡುವನೀ ಕಂಬನಿಯ ಮೊಲ್ಲೆ
ಯೆನ್ನೆದೆಯ ಮಾಸಲಂ, ತಳೆಯಿದಂ ನಲ್ಲೆ !

---

## ಮರೆತೆ

ಬಾಳುವೆಯು ಗೂಡೊಳಗೆ ತತ್ತಿಯಿದನೆಂದು
ಮೃತ್ಯು ತಾನಿಕ್ಕಿ ಮೊಯ್ಗರೆಯಿತೆನಗರಿವೆ ?
ಆಸೆಯಾ ಗರಿಗೆದರಿ ಬಯಲಲಲೆವಂದು
ನಿನ್ನನಾಂ ಮರೆತೆ, ಮರೆತೆನ್ನ ತಿರಿತಿರಿವೆ !

ಬಾಸೆಯಂ ಬೇಡಿ ನಾನರಚುವಂದೆನ್ನ
ಕಯ್ಯೊಳಾರ್ಮರಸಿಟ್ಟರೀ ಗಿರಿಕೆಯನ್ನ ?
ನಾನರಿಯೆ, ಗುಲ್ಲನಿದನಾಡಿಸುತ ನಿನ್ನ
ಮರೆತೆನೊಯ್ಯನೆ ಮರೆತೆ ಮನವಿಯನ್ನೆನ್ನ !

* * * *

ತಿರುತಿರುಗಿ ಬಿರಿದುದೀ ಗಿರುಗಟೆಯ ಬಳಲು !
ಇರುಳ ಕಾರೆರಕೆ ಬೆಂಬತ್ತುತಿದೆ ಸರಿಸಂ ! —
ನೆನವರಿವುದೀಗೆರೆಯ, ನಿನ್ನ ಹೆಸರಾಂತು
ಕಂಗಳಿಂ ಕರೆವುದೆನ್ನೆದೆಯುಕ್ಕುವಳಲು !
ಕಣ್ದೆರೆಯ, ನಿನ್ನ ಕಣ್ಣೆಂದುಮಿನಿದೆರಸಂ[1]
[2]ಮರಸದೆನ್ನಲಿ ಎನ್ನು ! — ನಿರವಿಸೆನಗಿಂತು !

---

## ಶ್ರೀ ವಿದ್ಯಾರಣ್ಯರ ಅಡಿದಾವರೆಯಲ್ಲಿ

ಶ್ರೀ ಕರ್ಣಾಟಕರಾಜ್ಯ ವಾಸ್ತುಪತಿಯಂ, ನಾಸ್ತಿಕ್ಯ ರುಗ್ವೈದ್ಯನಂ,
ವೇದಾಂತಾದಿ ಗತಾಧ್ವನಂ, ನಿಗಮಧರ್ಮೋದ್ಧಾರಣಾಚಾರ್ಯನಂ,
ಮ್ಲೇಚ್ಛಾಚ್ಛನ್ನ ಪವಿತ್ರ ಭಾರತ ವಿಯನ್ಮಾಧ್ಯಂದಿನಾದಿತ್ಯನಂ,
ವಿದ್ಯಾರಣ್ಯ ವರೇಣ್ಯನಂ ಚತುರ ಚಾತುರ್ವೈದ್ಯನಂ ವಂದಿಪೆಂ ‖ ೧ ‖

1 ಇನಿದಾದ ಉನ್ಮೀಲನ 2 ಮರೆಯಾಗಿಸದು

ಯಾಜುಷ ಶಾಖೆಯ ಪ್ರಚುರ ವಿಪ್ರರ ವಂಶದಿ ಜನ್ಮಮಂತೆ, ಬೌ
ಧಾಯನ ಸೂತ್ರಮಂತೆ, ಸಿರಿ ಮಾಯಣನಾತ್ಮಜನಂತೆ,
ಮೇಣ್ ಭರ
ದ್ವಾಜನ ಗೋತ್ರಮಂತೆ, ನಿಜಸೋದರ ಸಾಯಣನಂತೆ, ಕನ್ನಡಂ
ತಾಯ್ನುಡಿಯಂತೆ, ನೀನಖಿಲ ಕಲ್ಪಿಯ ಕಾನನಮಂತೆ,
ಮಾಧವಾ ॥ ೨ ॥

ಶಕಸಮ ದಿಕ್ಕರದ್ವಿವಿಧು ಧಾತುವ ಮಾಧವ ಶುಕ್ಲಪಕ್ಷ ಸ
ಪ್ತಮಿ ರವಿವಾಸರಂ ಕದರಿ ಕನ್ನಡ ರಾಜ್ಯದ ಲಕ್ಷ್ಮಿ ತುಂಗಭ
ದ್ರಾತಟಕಾಟಿ ಬಂದಳೆ ? ಗಡಾಕೆಯನಂದಿಗೆ ಹಿಂದುರಾಟ್ ಸುರ
ತ್ರಾಣನ ಗಂಡುಕೆಯ್ವಿಡಿಸುತಾವೆಯ ಕನ್ನಡ ನಾಳ್ಪುರೋಹಿತಂ ? ॥ ೩ ॥

ಕಿರುತಮ್ಮಂ ಬೆರಸೀ ಚತುಃಶ್ರುತಿಗೆ ವೇದಾರ್ಥಪ್ರಕಾಶಂ ನೆರ
ಳ್ಮರೆಯಿಂ ನೇಸರ ನೋಡುವಂತೆ ಮರಸಲ್ ಮೇಣೇಂ
ಪ್ರಸಾದಂ ಚಿರಂ ?
ಚತುರಾಸ್ಯಂ ಚತುರಾಸ್ಯದಿಂದೊರೆದುದನ್ನಾಸ್ಯದ್ವಯಂ ಸಾಧಿಸಲ್
ವಿಧಿಯೋ ವೇದವೊ ನಿಮ್ಮೊಳಂತು ನೆರೆವಂದೇಂ ಧನ್ಯವಿಾ
ಭಾರತಂ! ॥ ೪ ॥

ನಿಲಿಸಿ ಪರಾಶರಸ್ಮೃತಿಗೆ ನೀಂ ಕಲಿಕಾಲದಿ ಕೆತ್ತ ಕತ್ತಲಂ
ತೊಲಗಿಪ ಕೆಯ್ವೆಳಂಕ ಮಿರುಟೀಕೆಯ, ಮಾಣಿಸಿದೆಮ್ಮ
ಮುಗ್ಧರಂ
ಅಭಿನವ ಕಾಲಿದಾಸನೆನೆ ಶಂಕರದಿಗ್ವಿಜಯಂ ನೆಗಳ್ಚಿ, ಮೇಣ್
ನಿರವಿಸಿ ಧಾತುಜಾತದರಿವಂ ನುಡಿಯಾಗರವಂ ಬಿದಿರ್ಚಿದೈ ! ॥ ೫ ॥

ಸರ್ವಧರ್ಮಸಮಾನದೃಷ್ಟಿಯೆ ಸರ್ವದರ್ಶನಸಂಗ್ರಹಂ
ಕಾಣಿಸಿತೆ ? ವ್ಯವಹಾರ ಕಾಲಾಚಾರವಿವು ತರಿಸಂದುವೆ ?
ಐತರೇಯಕೆ ತೈತ್ತಿರೀಯಕೆ ಬಾಸಣಿಸಿ ಜತೆ ಭಾಷ್ಯಮಂ,
ಜೈಮಿನೀಯಕೆ ಬಾದರಾಯಣಕಿತ್ತೆ ತಿಳಿಗನ್ನಡಿಗಳಂ ॥ ೬ ॥

ಕೊಂಕಣದಂಕೆಯಲ್ಲಿ ತುಡುವೊಕ್ಕ ತುರುಂಕರ ನೂಂಕಿ, ಸಪ್ತಕೋ
ಟೀಶನ ದೇಗುಲಂ ನಿಲೆ ನಿರ್ಮಿಸಿ, ಗೋವೆಯು ಗೋವನಾಗಿ,
ಮಾ
ರಾಯನ ಸಮ್ಮತಂ ಬೆರಸು ಪೋಗಿ ಜಯಂತಿಯನಾಳಿ, ಮುಂತೆ ಶೃಂ
ಗೇರಿಯ ಸೇರಿ, ನೀನಪರ ಶಂಕರನಂತೆಡೆಗೊಂಡೆ ಮಾಧವಾ || ೭ ||

ತುರುಕರ ದಿಂಡು ಗುಂಡಿಗೆಯ ಹಿಂಡಿದ ನಿನ್ನಯ ಬಾಹು
ದಂಡಮಂ
ಪೊಗಳ್ವೆನೆ ? ಹಿಂದುಮುಂದರಿವ ಹೈಂದವ ಧರ್ಮಕೆ ಶಬ್ದ
ಶಿಲ್ಪದಿಂ
ನಿಗಮದ ಗಂಗೆಗಾಗಮದ ಕಟ್ಟೆಯ ಕಟ್ಟಿದ ಬುದ್ಧಿಶಕ್ತಿಯಂ
ಪೊಗಳ್ವೆನೆ ? ಚೋದ್ಯಮೇಂ — ಬಿಗುರ ಬೀರಿದ ಬೀರಮೊ ?
ಬಲ್ಲ ಬಿಜ್ಜೆಯೊ ? || ೮ ||

ಬ್ರಹ್ಮಕ್ಷತ್ರಮೆ ಸಲ್ವುದೀ ಕಲಿಯುಗಕ್ಕೆಂದೇನದಂ ತಾಳ್ದಿದೈ ? —
ಬ್ರಹ್ಮಜ್ಞಾನದೆ ಕಾಯೆ ತಾಯೊಳೆಯ ಧರ್ಮಗ್ಲಾನಿಯಿಂ ಹಾನಿಯಿಂ,
ಕ್ಷತ್ರತ್ರಾಣದೆ ಕಾದೆ ಮ್ಲೇಚ್ಛದಳವಂ ಮಾರ್ಕೊಂಡವರ್ಕೊಂ
ಡುದಂ ! —
ಬ್ರಹ್ಮಕ್ಷತ್ರ ಕುಠಾರರಾಮನವತಾರಂ ನಿನ್ನೊಳೇಂ ಬೆತ್ತನೆ ? || ೯ ||

ಜ್ಞಾನಮೆ ಮಾನವೀ ತನುಮನಾಂತುದೆ ? ಭಕ್ತಿಯೆ ಭಿಕ್ಷು
ವಾದುದೆ ?
ವಾಣಿಯ ಜಾಣೆ ಆಣೆರಕಗೊಂಡುದೆ ? ಗೆಲ್ಲಿನ ಬಿಲ್ಲೆ
ಮೂಡಿತೆ ?
ಕನ್ನಡ ನಾಡೆ ತನ್ನ ಮನವೊಟ್ಟಿಸಿ ಸೃಷ್ಟಿಸೆ ಸೃಷ್ಟಿಗಿತ್ತುದೆ ?
ಧರ್ಮಮೆ ಕರ್ಮಮಾಗಿ ನೆರವೇರಿತೆ ನಿನ್ನಲಿ ? ಪೇಳ
ಮಾಧವಾ || ೧೦ ||

ಸತ್ಯದ ಭೂಮಿ, ಧರ್ಮದಮೃತಾಂಬುಧಿ ಶುಷ್ಕ ತುರುಷ್ಕ ಕಾನನಾ
ಭೀಲ ದವಾನಲಂ, ನಿಖಿಲ ಕನ್ನಡ ನಾಡಿನ ಸೂತಿಕಾನಿಲಂ,
ಶುದ್ಧ ಚಿದಂಬರಂ, ಬೆರೆಯೆ ಪಂಚತೆಗಂದಿಗತೀತ ಪಂಚಭೂ
ತಂ ನಿನತಾತ್ಮಮೊಂದಿ ಪರಮಾತ್ಮನನಾದುದಭಿನ್ನಮದ್ವಯಂ || ೧೧ ||

ಕಂತಿದೆ ನೀ ದಿನಾಂತದಿನನಂತೆನೆ, ನಿನ್ನಯ ಪಿಂತೆ ಕಾಂತಿಯುಂ
ಕಾಣದ ಭಾರತಂ ಬರಬರುತ್ತ ನಿಶೀಥಕೆ ಮಾಸಿ ಬಂದುದೈ ;
ರಾಮನ ಸಂಕದಿಂ ಕುಳಿರ ಶೃಂಗವರಂ ನಮಗಿಂದಿಗಿಲ್ಲಿ ನಿ
ನ್ನನ್ನವನೊರ್ವನುಳ್ಳಡೆಮಗಪ್ಪುದೆ ಈ ಬಡಪಾಡು ಮಾಧವಾ ? || ೧೨ ||

ಪರಮಾಚಾರ್ಯನೆ, ನಿನ್ನ ಪುಣ್ಯತಿಥಿಯೊಳ್ನಾನೊಂದಿದಂ
ಬೇಡುವೆಂ —
ಭವದಾವಾಸದ ಬ್ರಹ್ಮಧಾಮದಲಿ ಮುನ್ನೀಂ ಪುಟ್ಟಿದೀ ಭಾರತಂ
ಮರೆಯಲ್ಬೇಡೆಮಗಾಗಿ ಬೇಡೊಡೆಯುನನ್ನಮ್ಲಾನ ಭಾಗ್ಯೋದಯಂ
ಬರಿಸಲ್ನೀನೆರೆವಂದು ನೀಡದವನಿನ್ನಾರ್ಗಂ ಗಡಾ ನೀಡುವಂ ? || ೧೩ ||

ಶ್ರೀ ಕರ್ಣಾಟಕಮೇವರಂ, ನೆನವು ನಿನ್ನಾಚಾರ್ಯ
ಮುನ್ನಾವರಂ,
ಹಿಂದೂಧರ್ಮಮಿದೇವರಂ, ಯಶಸು ನಿನ್ನಾಚಾರ್ಯ
ಮುನ್ನಾವರಂ,
ನಮ್ಮಾ ಭಾರತಮೇವರಂ, ಹೆಸರು ನಿನ್ನಾಚಾರ್ಯ
ಮುನ್ನಾವರಂ —
ಸೂರ್ಯಾಚಂದ್ರಮರೇವರಂ, ನಿಲುವುವಿನ್ನಾಚಾರ್ಯ
ಮುನ್ನಾವರಂ! || ೧೪ ||

ವಿಪುಲ ಜ್ಞಾನಮನಾಂತು ಸಲ್ಲಿಸಿದ ಮೇಧಾಶಕ್ತಿಗಂ, ಮ್ಲೇಚ್ಛರಂ
ಸದೆವೊಯ್ದದ್ಭುತ ಶೌರ್ಯಶಕ್ತಿಗೆ, ತಥಾ ಕರ್ಣಾಟ ವಾಸ್ತೂತ್ಸವಂ
ಗೆಯಿದಾತ್ಮೋಪಮ ಕರ್ತೃಶಕ್ತಿಗೆ, ಧುರಂ ತಾಳ್ದಾ ಬೃಹನ್ನೀತಿ ಶ
ಕ್ತಿಗೆ, ನಿನ್ನಕ್ಕೆಮ ಸರ್ವಶಕ್ತಿಗೆ ಸದಾ ಭದ್ರಂ ಶುಭಂ ಮಂಗಳಂ || ೧೫ ||

---

## ಕಡವಿನಲ್ಲಿ

ಕಾಣಲಿಹುದನು ಕಂಡೆನೆಲ್ಲ,
ಕೊಳ್ಳಲಿಹುದನು ಕೊಂಡೆನೆಲ್ಲ,
ಹಿರಿವುದೆಂದೀ ಸಂತೆ ಬಲ್ಲ
ರಾರು ನೆರಸಿದನಲ್ಲದೆ ?

ಬಂದು ಪೋಪರು ಮೊತ್ತಮೊತ್ತದೆ—
ಯಾರಿಗೇಕೇನೆಂದು ಗೊತ್ತದೆ ?
ಬಾಳದೊಡವೆಗೆ ಬೆಲೆಯು ತೆತ್ತುದೆ
ನನ್ನ ಪಾಲಿನ ಕೌತುಕ.

ಇಲ್ಲಿ ಇನ್ನಿರಲಿಷ್ಟವಿಲ್ಲ—
ಕೆಲಸವಿಲ್ಲದಲಿರಲು ಸಲ್ಲ,
ಇನ್ನು ಮರಳುವೆನೆಂದು ಮೆಲ್ಲ
ನಿಳಿದೆ ಕಡವಿನ ಕೇರಿಗೆ.

ಸಂತೆಗೆನ್ನಯ ಬಳಿಕ ಬಂದು,
ಸುತ್ತಿ ನನ್ನೊಡನೆನ್ನ ಮುಂದು
ಮನಗೆ ಮಗುಳಿದ ಮಡದಿ ನೊಂದು
ಬೇಸರಳೆ ನಾನಿಲ್ಲದೆ ?

ಮೆಟ್ಟು ಮಿಸುಕದು ಕಡವಿನಲ್ಲಿ;
ನನ್ನನಿಲ್ಲಿಗೆ ನಸುಕಿನಲ್ಲಿ
ತಂದು ಮುಟ್ಟಿಸಿದಂಬಿ ಎಲ್ಲಿ ?
ಎಲ್ಲಿಗಾದೆಯು ಅಂಬಿಗ ?

ತೊಂಡು ತೊಳಸುವ ದೋಣಿಯನ್ನ
ನಂಬಿ ಬಂದೆನೆ ? ಅಕಟ, ಮುನ್ನ
ಹುಟ್ಟನರಿಯದನಳವೆ ನನ್ನ
ಹುಟ್ಟನಿಕ್ಕಲು, [1]ಪಾತಿಗ ?

ಕುಳಿತೆ ನೀಂ ಗಡ ಬೆನ್ನನೆನ್ನ—
ಮಬ್ಬು ಮರಸಿತು ಮೊಗವ ನಿನ್ನ;
ಸಂತೆಗಾಂ ಸಡಗರಿಸುವನ್ನ
ನಿನ್ನ ಹೆಸರೇನೆಂದೆನೆ ?

1 ಪಾತಿ=ದೋಣಿ, ಪಾತಿಗ=ದೋಣಿಗಾರ

ಓಡ ಓಡೆಂದರಚಿ ಕರೆದೆ,
ಆಚೆ ಮೂದಲಿಪಂತೆ ಮೊರೆದೆ,
ಇಲ್ಲ ಮರುವಾತೆಲ್ಲ ಬರಿದೆ,
ನನ್ನ ಕರೆ ಮೇಣಾಂ ವಿನಾ.
²ತೊರೆಯರೆರೆಯಾ, ಏಕೆ ನಿನ್ನ
ಹೊತ್ತಿಗಲ್ಲದೆ ಬಾರೆ ಮುನ್ನ ?
ಹೊತ್ತ ಹಿಂಗಿಸಿ ಹಾಯಿಸೆನ್ನ—
ಕಂಬನಿಯ ಕರೆ ಕೇಳದೆ ?

---

## 'ಆತ್ಮಾನಂ ವಿದ್ಧಿ '[1]

ನನ್ನನರಿಯದೆ ನಿನ್ನನರಿಯಲಳವಲ್ಲ,
ನನ್ನ ಕಾಣದ ಮುನ್ನ ಕಾಣೆ ನಾ ನಿನ್ನ
ನೆಂದು ಸಾರುವುವೈಸೆ ಧರುಮಂಗಳೆಲ್ಲ—
ಆದೊಡಾಂ ಕಾಂಬೆನೆಂತರಿವೆನೆಂತೆನ್ನ ?
²ಕಡೆಮುಗಿಲ್ವರಮೆನಿತೊ ಕಣ್ಣಾಲಿ ದೂರಂ
ನೋಡಬಲ್ಲಡೆ, ನೋಡಬಲ್ಲುದೇಂ ತನ್ನ ?
ಸುರಿಸಬಲ್ಲಡೆ ಸರಿಗೆಯಿಂ ಸ್ವರಾಸಾರಂ,
ಕೇಳಬಲ್ಲುದೆ ³ಕುಡುಪಣಂ ಕ್ವಣಿತಮುನ್ನ ?

* * * * *

ನಿಸಿಯ ಬೆಸಲಿಗೆ ಸುಸಿಲ್ಮಿಸುಕುವಂತೊಲ್ಲ
ದೇಕೆನ್ನ ಮಬ್ಬೆದೆಗೆ ಮೂಡೆ 'ಆತ್ಮಾನಂ
ವಿದ್ಧಿ ' ಎಂಬೀ ಸತ್ಯದರಿವೆಯುಮ್ಲಾನಂ ?—
**ಬ್ರಹ್ಮಚರ್ಯಂ ವಿನಾತ್ಮಜ್ಞತೆಗೆ ಸಲ್ಲ !**

* * * * *

ಭವತಿ ಭಿಕ್ಷಾಂ ದೇಹಿ ತನುಮನಕೆ ತಾಯೆ
ಬ್ರಹ್ಮದೀಕ್ಷೆಯನೆನಗೆ ಮರಣಾಂತಮಾಯೆ !

---

೨ ತೊರೆಯ=ಅಂಬಿಗ

1. 'ನಿನ್ನನೇ ನೀನು ತಿಳಿಕೊ' ('Know thyself'—Thales) 2 ಚಕ್ರವಾಳ

3 ವೀಣೆಯನ್ನು ಬಾಜಿಸುವ ಕೋಲು

# ಯುಗಾದಿಯ ನೆನಪು

ನಿನ್ನೆ ಹೆಸರಳಿದು ನೀರಾದುದಾ ಪ್ರಭವಂ
ಜೀವನಪ್ಲವವೆನ್ನ ಸಂಪ್ಲವಿಸಿ ನಿನ್ನ !
ಇಂದೆನ್ನನೀಚಿಸುವ ವೀಚಿಯೊ ವಿಭವಂ
ಸಾರ್ಥಮಕ್ಕೆಮ ವಿಯೋಗಿಸಿ ಭವದಿನೆನ್ನ !

ಆ ಯುಗಾದಿಯಲಿ ನೀನೆನ್ನ ಕಣ್ತಣಿವೆ—
ಈ ಯುಗಾದಿಯಲಿ ನೀನೆಲ್ಲಿ ? ನಾನೆಲ್ಲಿ ?
ನನ್ನೆದೆಯುಮಾಸೆಗಿನ್ನಶ್ರು ತರ್ಪಣಮೆ—
ಹಬ್ಬಮಿನ್ನೆನಗೆ ನಿನ್ನೊಡಗೂಡುವಲ್ಲಿ !

ಕೊನೆಯ ತವರ್ಮನೆಗಕಟ ! ನೀ ತೆರಳುವಂದು
ತಿಂಗಳಾರರ ಮುನ್ನಮುಟ್ಟ ಮಡಿಸೀರೆ
ಕಡೆಗಾಯ್ತೆ ? ಇನ್ನುಡೆಯನೆಂತೀವೆನೆಂದು
ನೆನವ ನೂಲಂ ಮೀಸಲಿಡುವೆನಿದೊ ನೀರೆ !

ಸರ್ವಮಂಗಲೆ ! ಸರ್ವಶೃಂಗಾರವೆತ್ತು—
ಕೆಚ್ಚೆರಂಕದಿನೆನ್ನ ಹಚ್ಚಿ ಕುಂಕುಮಮಂ,
ನೆನವ ಬಾಗಿನವನೆನಗನುವಿಂದ ತೆತ್ತು,
ಮುಡಿದು ಮುಡಿಗೆನ್ನ ಸುರಿಕಂಬನಿಯ ಸುಮಮಂ—

ಮದವಳಿಗೆ ಲಗ್ನವೇದಿಕೆಯಂತೆ, ಚಿತಿಯ
ಪೊಗುತಗ್ನಿಯಂ ಮನ್ಮನೋರಣಿಯಿನಾಂತು,
ನಮ್ಮೇಕ ಗಾರ್ಹಪತ್ಯವ್ರತವ ಸತಿಯ
ಧರ್ಮದಿಂದುದ್ಯಾಪಿಸಿದೆ ನೀ ಸಮಂತು.

ನಿನ್ನಯ ಚಿತಾಗ್ನಿಯಾಗಳಿನೆದೆಯೊಳೆನ್ನ
ಬೇಯೆ ಬಾಂಗಿನೆಯೆ ಬೈಗಿನ ಬೆಂಕಿಯಂತೆ
ಮೂಡಿಂದುಮಂತೆ ! ಕರೆಯಕ್ಕರೆಯ ಜೊನ್ನ
ದುಮ್ಮನದ ಗುಮ್ಮನೆರಕೆಯಿಳುಂಕಿಪಂತೆ.

ಕಂತಿದಿಂ ಬಳಿಕ ನೀ ನಿನ್ನೊಸಗೆಯುರಿಯೆಂ,
ನೀನಾದಡಂ ಬಲ್ಲೆಯೇನಳಲನೆನ್ನ ? —
ನನೆನಲಿನವುಂ ನಿಟ್ಟಪಂತಿರುಳ ಮರೆಯಿಂ
ನೇಸರೇನಿರುಳ ನಲಿಸಂ ನೇಸರನ್ನ ?

ಕುಂದೇನು ಮನದನ್ನೆ ನೊಂದಡಾನಿಲ್ಲಿ ? —
ಮಗು ಮುಡಿದ ತೊಟ್ಟಿಲೇನಾದಡೇನಂತೆ ?
ನೀರ ಕೆರೆ ತಾರದಂತರಗಾಲದಲ್ಲಿ,
ನೀನಲ್ಲಿ ನೆಮ್ಮದಿಯಿನಿರೆ ಸಾಕು, ಕಾಂತೆ !

ಪತಿಗೆ ಹೆಂಡತಿ ಸಾಲಗಾತಿ ತಾನಂತೆ,
ನಮ್ಮೊಳಂತಲ್ಲ, ನಾ ಸಾಲಿಗನೆ ನಿನ್ನ—
ಕಣ್ಣ ಕಾಣಿಕೆಯುಂತೆ ನನ್ನಿರವನಾಂತೆ,
ಪಾಲಾಗಿ ನೀರನಿನಿವಾಲಿಸಗಿದೆನ್ನ

ಇದ್ದೆಸೆಯಿನಿದ್ದೊರೆಗಳೆದ್ದು ಮುಂಬೆರೆಯೆ,
ಒಂದನಿನ್ನೊಂದು ಮರೆಸಂದು ಹರಿವಂತೆ,
ಬಲ್ಲೆನೆನ್ನಯ ಕಂಗಣಂಗಿ ನೀ ಸರಿಯೆ,
ಬೆರತಿನ್ನುಮಿರವನ್ನ ಹರಿವೆ ಮುನ್ನಂತೆ.

ಕಡಲೆನಿತು ಕೆರಳ್ದೊಡಂ, ಕಡೆವುದೇಂ ಕರೆಯುಂ ? —
ಆಯುರವಧಿಯನೆನ್ನ ನನ್ನಳವೆ ಮೀರೆ ?
ಕಾವೆನಾಚೆಗೆ ನಿನ್ನ ತೇರಿಸಿದ ತರಿಯುಂ,
ಗೆಣೆವಕ್ಕಿ ಹಗಲಂತೆ ತನ್ನೆಣೆಯ ಸೇರೆ.

ಎನಿತಿನ್ನುಮೆನ್ನ ಬಾಳ್ವೆಯ ಹುಳುಕು ವಾಲೆ
ಮಗಳುವುದೊ ನಾನರಿಯೆ — ಬರೆದವನೆ ಬಲ್ಲಂ !
ಇನ್ನುಮಳ್ತಿಯೆ ನನ್ನನಿಂತು ವಿಧಿಯಾಲೆ
ಹಿಳಿಯಲೇವಾಳ್ತೆ ? ಕಳಲಿಂದಹುದೆ ಬೆಲ್ಲಂ ?

ತಾಳದು ವಿಕಾಳಿಸುವ ಕಾಳಿಮೆ ! ಇದನ್ನ
ತಾಳದಕಟಾ ನಿನ್ನ ಬಾಳಿನೆನೆ, ಮನವಂ
ಸೇರುವೆಗೆ ಕೋರಿಸಿ ಚಕೋರಿಸುವೆನೆನ್ನ
ಪ್ರೇಮಪರಿಧಿಯ ಸುಧಾನಿಧಿಯೆ ನಿನ್ನೆನವಂ !

---

## 'ಬಾಲೆ ನಿನ್ನಯ ತಮ್ಮನೆಲ್ಲಿ ?'

### I

'ಬಾಲೆ ನಿನ್ನಯ ತಮ್ಮನೆಲ್ಲಿ ?'
ಎಂದವಳನಾಂ ಕೇಳುವಲ್ಲಿ,
ತಲೆಯನಾನಿಸಿ ಹೆಗಲಿನಲ್ಲಿ
'ಮನೆಯೊಳಲ್ಲವೆ ?' ಎಂದಳು.

ಆದೊಡಿಂದವನೇಕೆ, ಬಾಲೆ,
ನಿನ್ನೊಡನೆ ಪೋಗಿಲ್ಲ ಸಾಲೆ
ಗೆನಲು ನುಡಿದಳು — ಹನಿವ ಹಾಲೆ ?
ಮಲರೆಲರೆ ? ಮೆಲ್ಲುಲಿಗಳೆ ?

'ತಿಂಗಳೊಂದಕೆ ಬಂದುದೀಗ
ಸಾಲೆಗೆನ್ನೊಡನೇಕೆ ಪೋಗ
ನೆಂದರಿಯೆನವನಲ್ಲಿ ರೇಗ
ರೇನಕಟ ನಮ್ಮಯ್ಯಗಳು ?

'ಹಲಿಗೆ ಹೊತ್ತಗೆ, ಅಕ್ಕ, ಜೋಕೆ,
ಕುತ್ತ ಮಾಣ್ದೊಡನೀಯೆ ಸಾಕೆಂ
ದೆನ್ನೊಳಿಟ್ಟುದ ಮರಳಿ ಏಕೆ
ಕೊಂಡನಿಲ್ಲವನಿನ್ನೆಗಂ ?

‘ತಾಯಿ ಗಂಜಿಯನಿಕ್ಕಿ ಕರೆಯೆ,
ಅವನ ಬಟ್ಟಲನೆನ್ನ ನೆರೆಯೆ
ಮಡಗಲದಕೇಂ ಬಳಸಳರಿಯೆ—
ಬರಿಯ ಬಟ್ಟಲ ನಿಟ್ಟಿಪೆ.’

‘ಅಂತುಟೆನೆ ಎಂತಿಹನು ನಿಮ್ಮ
ಮನೆಯೊಳಾ ನಿನ್ನಣುಗ ತಮ್ಮ ?
ಇರಲು ನಿನ್ನೊಡನುಣನೆ, ಅಮ್ಮ ?
ಪೇಳ ಸಾಲೆಗೆ ಪೋಗನೆ ?’

‘ಅಯ್ಯ ನೀನೆನುವೇಕೆ ಹೀಗೆ ? —
ಕಡೆಹಗಲ ಕೂಳುಂಡ ಮೇಗೆ,
ಹಣತೆ [1]ಹೆಚ್ಚಿಸೆ ಕಣ್ಣು ತೂಗೆ
ಮುಚ್ಚುವುದೆ ನಾನಚ್ಚಿಯಾ,[2]

‘ಬರುವನವನೊಡನೆನ್ನ ಸೇರೆ;
ಒಡನೆ ಹಿತ್ತಿಲಿಗಾಗಿ, ಜೋರೆ
ಗಿಡದಿ ದೋಟಿಗೆ ದೊರೆತ ದೋರೆ
ಹಣ್ಣನವನಿಗೆ ಮೆಲಿಸುವೆ.

‘ಗೊಂಬೆಮದುವೆಯನೊಮ್ಮೆ ಮಾಡಿ,
[3]ಚೆನ್ನೆಯೆಕ್ಕಡಿಯೊಮ್ಮೆ ಹೂಡಿ,
ಆಡಿಸುವೆ ಪಲವಾಟವಾಡಿ—
ಕಣ್ಣುಮುಚ್ಚಿಕೆಯಲ್ಲದೆ.

1. ನಂದಿಸೆ 2 ಅಚ್ಚಿ=ಕಣ್ಣು (ಅಕ್ಷಿ) 3 ಚೆನ್ನೆ=ಚೆನ್ನಮಣೆ, ಎಕ್ಕಡಿ ಎಂದರೆ ಕವಡಿಗಳಿಂದ ಆಡುವ ಇನ್ನೊಂದು ಬಗೆಯ ಆಟದ ಮಣೆ

'ಅವನನಾಟಿಕೊಡಂಜಿ[4] ಮಾಡಿ,
ತಂಬಟೆಗೆ ನಾಂ ಚಪ್ಪಳಾಡಿ,
ಗೋವ ಕಥೆಯುಂ ಜತೆಗೆ ಹಾಡಿ,
ನಿನ್ನೆ ಬಿಸದಂ ಗೆಯ್ದೆವು.

'ಆ ಬಳಿಕ ಕಾಬಳ್ಳಿ ಬರಸಿ,
ಬೇಡವೆನೆ ಬಿಟ್ಟಂತೆ ಮರಸಿ,
ಕಲಿಸಿ ಮುಗಿಸಿದೆನೊತ್ತುವೆರಸಿ
ದಕ್ಕರವನಿಂದೊರೆವೆನು.

'ನಡುವೆ ಕತೆಗಳ ನುಡಿದು ನುಡಿಸಿ,
ಬಾಚಿ ಹೆರಳೆನ್ನಲರ ಮುಡಿಸಿ,
ಅಕ್ಕ ನಿನಗೆನೆ, ಬಿಮ್ಮನಡಸಿ
ಸೆಳೆವ ಮುತ್ತಿನ ಸವಿಯದೇಂ!

'ಕೋಳಿ ಕೆಲೆವುದೆ, ಎಚ್ಚರಾಗಿ
ನೋಡಲೆಲ್ಲಿಗೊ ನನ್ನ ನೀಗಿ!
ಇರುಳು ಬರುವರಮವನ ಮೂಗಿ
ಯಂತೆ ಹೊಂಚುವೆನೆತ್ತಲು.

'ಇರುಳೊಳಲ್ಲದೆ ಬಾರನೇಕೆ?
ಹಗಲಲೀ [1]ಮುಚ್ಚಾಟವೇಕೆ? —
ಹಗಲಲೆಣಿಸುವೆ [5]ಕೇಳಬೇಕೆಂ
ದಿರುಳ ಮುನ್ನಮೆ ಮರೆಯುವೆ.

4. 'ಆಟಿಕಳಂಜ' ಎಂದರೆ ಕರ್ಕಾಟಕ (ಆಟಿ) ಮಾಸದಲ್ಲಿ ತುಳುನಾಡಿನ ಹಳ್ಳಿಗಳಲ್ಲಿ ಮನೆ ಮನೆಗೆ ಕೊಂಡೊಯ್ದು ಕುಣಿಸುವ ಒಂದು ಬಗೆಯ ವೇಷ (ತುಳು 'ಕೊಡಂಜಿ' = ತಮಿಳು 'ಕೊಳಂದೆ'—?) 5 ಕಣ್ಣು ಮುಚ್ಚಾಲೆಯಾಟ.

‘ಮುನ್ನವನನೆಚ್ಚರಿಕೆಯಲ್ಲಿ
ಅಲ್ಲದೆನ್ನಯ ಮಲಗಿನಲ್ಲಿ
ಕಂಡೆನಿಲ್ಲೆ ನಲೀಚೆಯಲ್ಲಿ
ಹಿಂದು ಮುಂದಿಂತಾದುದೇಂ ?

‘ತಾಯ ಕೇಳಲು ಮನಸು ಬಾರ
ದೆತ್ತೆ ಹೆಸರಂ ಕಣ್ಣ ನೀರ
ಸುರವಳೇತಕೊ ? — ಹಗಲು ತೋರ
ನಾದಡಿರುಳಲಿ ಕಾಣಳೆ ?

‘ಹಗಲಲಿಲ್ಲೆ ನಲಿಲ್ಲವೆಂದು
ಬಗೆಯಲೇನೋರಂತೆ ಬಂದು
ಇರುಳು ತೋರನೆ ? — ಇರುಳಿನಿಂದು
ಹಗಲಲಿಲ್ಲೆ ನಲಿಲ್ಲವೆ ?’

— ಧನ್ಯೆ ಮಗು ನೀನೆನ್ನಬೇಕೆ ?
ಅನಿತಣಂ ನನಗಿಲ್ಲವೇಕೆ ? —
ಒದಗದಕಟೆನಗಿನ್ನುಮಾಕೆ
ಯೇಕೆ ಕನಸಿನ ಕಾಣಿಕೆ ?

## II

ನನ್ನ ಹಗಲಿಂದೆಂದು ಪೋದೆ,
ಅಂದಿನಿಂದೆನ್ನಿರುಳಿಗಾದೆ
ಎಂದು ನಂಬಿದೆನೇಕೆ ಮಾದೆ
ಎನಿತೊ ದಿನದಿಂದೀಚೆಗೆ ?

ಏಕೆ ಬಾರೆಯೊ ಮುನ್ನಿನಂತೆ ?
ಕಳೆದ ಕುತ್ತವೆ ಮರಳಿ ಬಂತೆ ?
ಒರೆಯು, ತಮ್ಮಾ, ಕರೆವ ಮುಂತೆ
ಬಂದು ಮೆಯ್ಯನ್ನೀವೆನೆ ?

ನಿನ್ನ ಮುನ್ನಣ ಬೇನೆಯಲ್ಲಿ
ಕೆಲದಿನೆನ್ನಂ ಕದಲಲೊಲ್ಲಿ !
ಆರಿರುವರಾರಯ್ಸಲಲ್ಲಿ ?
ಅಕಟ, ಒಬ್ಬನೆ ನರಳುವೇಂ ?

ಏವೆನಿಲ್ಲಿಂದಲ್ಲಿಗೆಲ್ಲಿ
ಗಾಳಿಪಟ ? ಮುಗಿಲಟ್ಟನೆಲ್ಲಿ ?
ಗೊತ್ತು ಗೊತ್ತಿರದೊತ್ತಲೆಲ್ಲಿ ?
ಯಾರ ಕೇಳಲಿ ದಾರಿಯು ?

ಅಕಟ, ಸೇರುವೆನೆಂತು ನಿನ್ನ
ನರಿಯೆ ! ಕೋರಿಕೆಯುದುರುವನ್ನ
ಮಾಗಿಯುಮುಟಿಯು ಮರದೊಲೆನ್ನ
ಮನಸು ತೊನೆವುದು ನಿಚ್ಚಟಂ

ಕಾಣೆನೆಂಬುದರಿಂದ ನಿನ್ನ
ನಾರಯಿಸಲಾರೆಂಬ ಬನ್ನ
ಮೆದೆಯು ಸುಡುತಿದೆ—ಬಿಸಿಲಿನನ್ನ
ಬಿಸಿಲ ಮಳಲಂ ತಡೆವರೇಂ ?

ಸಾಲೆ ಬಿಡುವೊಡನಂದಿನಿಂದ
ಸುತ್ತು ಸುತ್ತಣ ಹಾದಿಯಿಂದ
ಮನೆಗೆ ಬಂದೊಡಮೇಕೆ, ಕಂದ,
ಸಂಜೆ ಮುನ್ನೊಲು ಮುಗಿಯದು ?

ನಿನ್ನ ಹೊತ್ತಗೆ ಹಲಿಗೆಯನ್ನ
ಕೊಂಡು ಬೋರೆಯ ಬುಡದಿ ಮುನ್ನ
ಕಲಿಸಿದುದನಾಂ ಕಲಿಯುವನ್ನ
ಬಿತ್ತೆ ಹಣ್ಣಿದೆ [1]ಕೆತ್ತಿತೆ ?

ಹಲಿಗೆಯಲಿ ಚಿತ್ತರವ ನಿನ್ನ
ಬಿಡಿಸಲಾಂ ಮನ ನೆರಸುವನ್ನ,
ನೆನವೆ ಮೋಸವ ಕೊಳಿಸಲೆನ್ನ
ಕಳ್ಳನಲಿ ಕಣಿ ಕೇಳಲೆ ?

ಆ ಬಳಿಕ ಗುಡಿಗಯ್ದು —‘ ತಾಯೆ,
ನನ್ನ ತಮ್ಮನ ಕೂಟವೀಯೆ ;
ಈವೆನವನೀ ಕುತ್ತ ಮಾಯೆ
ನನ್ನ ಕೆಯ್ಬಳೆ ಕಾಣಿಕೆ ’ —

ಎಂದು ಬಲವಂದಡ್ಡಬಾಗಿ,
ದೇವಿ ಸಲಿಸುವಳೆಂದು ಸಾಗಿ
ಮನೆಗೆ ಬರಲೇಂ ಹಗುರವಾಗಿ
ಕಾಂಬುದೆದೆ ಕೆಲ ಗಳಿಗೆಗೆ ?

ಇಂತನುದಿನಂ ಸಂಜೆ ಸಂತು,
ಸರಿದು ಸರಿಯುದ ರಾತ್ರಿ ಬಂತು !
ಕಳೆವೆನಿದ ಬೆಳಗಾನವೆಂತು ?—
ಕುಟ್ಟತೆದೆಯಲಿ ಕಳವಳಂ.

ಬಾನ ಮೊರದಲಿ ಸುರಿವಿದರಳಂ[2]
ನಿನ್ನೊಡನೆ ಮುನ್ನಂತೆ ಬೆರಳಂ
ತೋರುತೆಣಿಸುವ ಕಣ್ಣ ಹುರುಳಂ
ನೆನವು ತಟ್ಟನೆ ಕೆಡಿಪುದು.

1. ಕೆತ್ತು=ಅದುರು 2 ಅರಳು=ಅರಳಕ್ಕಿ

ಸೊಡರ ಕತ್ತಲೊಳುಣ್ಣುವೆನ್ನ
ಕಿವಿಗೊಡಹಿ ನಾಯುಯ್ದ ಮುನ್ನ,
ಬಾಯ್ಗೆ ಕಯ್ಗೆಯ್ದುನ್ನವನ್ನ
ಮರಸಿ ಬಕ್ಕರೆಗಿಕ್ಕುವೆ.

ಬಳಿಕ ಸೇರುತ ತಾಯ ಮರೆಯಂ
ಮುದುರಿ ಮಲಗಿರೆ, ಮಲಗಲರಿಯೆಂ,
ಒಂದೆ ಯೋಚನೆ—ನನ್ನ ಮರಿಯಂ
ನಾವ ಬಾವುಗನೆತ್ತಿತೊ ?

ನನ್ನ ನಿದ್ದೆಯ ಕಣ್ಣಿಗಲ್ಲದೆ
ಎಚ್ಚರದೊಳಗೂಡಲೊಲ್ಲದೆ
ಹಟವ ನೀ ಹಿಡಿವೆನಲು, ಸಲ್ಲದೆ
ನಿದ್ದೆಯೀ ಸುಡುಗಣ್ಣಿಗೆ ?

ಹೊತ್ತಿಳಿಯೆ ಮನೆದೀಪದಂತೆ
ಕಣ್ಣು ಪೆರತಂ ಕಾಣಿಪಂತೆ,
ನಿನ್ನನನಿತೇಂ ತೋರದಂತೆ ?
ನಿನ್ನ ಬೇಹಿಗನೇನಿದು ?

ಮುಚ್ಚುಗೆಯ್ಯಿಂ ಬಿಮ್ಮನೆನ್ನ
ಕಣ್ಮುಗಿಯೆ ನಿನಗೆನ್ನ ಮುನ್ನ
ಸುಳಿವುದೇನ್ನೆಳಲಂತದನ್ನ
ನೆನಸಲೆದೆ ಜುಮ್ಮೆನುತಿದೆ !

ಬಗೆವೆದೆಯ ಕಿವಿ ಕೇಳುವನ್ನ,
ನೆನನೆನವೆನೋರಂತೆ ನಿನ್ನ;
ಮುರಿದಕಟ ದಿಕ್ಚಕ್ರದನ್ನ
ಸಲ್ಲದೇನೆನಗುತ್ತರಂ ?

ಮುಗಿದುದಾ ನರಿಯೂಳು ಹಿಂದೆ,
ಬೊಗಳಿ ಮುಗಿದುವು ನಾಯಿ ಮುಂದೆ;
ಮುಗಿಯದಿರುಳಿರುಳುದ್ದವೊಂದೆ
ಕಣ್ಮುಗಿಯದೀ ಯೋಚನೆ

ಮುಂದುಗಾಣದ ಮನದ ಚಿಂತೆ
ಯಿಂದ ಮೊಳಗುವ ಭೀತಿಗಿಂತೆ
ನಾಳಿನಾಸೆಯುಳಂಬೆಯಂತೆ
ಅದುರುವೆದೆಯಲಿ ಮೊಳೆವುದು

ಕರುವಳಿದ ತುರುಗೆಚ್ಚಲಂತೆ
ತೊರೆಯೆ ಕಂಗಳಿನೆದೆಯ ಚಿಂತೆ,
ಚಾಪೆ ಚಾಡಿಯ ನುಡಿಯದಂತೆ
ತಾಯ ಮುನ್ನವೆ ಮಡಚುವೆ.

ಕೋಳಿ ಕೆಲೆವುದೆ, ತಾಯ ಜತೆಯಿಂ
ಕೆಲಸದಲಿ ಬಳಸಿದಡೆ ಮತಿಯಂ,
ಮೂಗುತಿಯ ಕಳಕೊಂಡ ಸತಿಯಂ
ತೆದೆಯ ಮರುಕಂ ಮರೆವುದೆ?

ಸಾಲೆಗಯ್ದಲು ಕಾಲು ಬಾರದು,
ಮನಸು ಮನೆಯಲಿ ನಿಲ್ಲಲಾರದು,
ಕಣ್ಣು ನೆನವಂ ಬಿಟ್ಟು ಕೋರದು,
ಏನೆಸಗಲುಂ ತೋರದು.

ತಾಯಿ [3]ಎಕ್ಕಡಿ ನೆರಸುತೆನ್ನ
ನೊಂದು ಬಾಗಲಲಿರಿಸಿದನ್ನ,
ದಾಯ ತಪ್ಪುತ ಕವಡಿಯನ್ನ
ನಡಸುವೆನ್ನ ನಗಾಡರೆ?

3 'ಎಕ್ಕಡಿ' ಎಂದರೆ ಕವಡಿಗಳಿಂದ ಆಡುವ ಒಂದು ಬಗೆಯ ಆಟದಮಣೆ, ಅದರಲ್ಲಿ ನಾಲ್ಕು ಕಳಗಳಿವೆ, ಅವಕ್ಕೆ ನಾಲ್ಕು ಬಾಗಲುಗಳೆನ್ನುವರು

ಊರ ಮಕ್ಕಳು ವೊನ್ನೆ ಕೂಡಿ,
ಗೊಂಬೆ ಮದುವೆಯು ಸರಸವಾಡಿ,
ಗಲಬೆಯಿಂ ಮೆರವಣಿಗೆ ಮಾಡಿ
ಕರೆಯಲೊಬ್ಬಳೆ ಹೋಗಲೆ ?

[4]ಜೋಗಿ ನಡೆತರೆ [5]ಸೋಣದಲ್ಲಿ,
ಕುಟ್ಟುತಿರೆ ಕೆಯ್ಪುರೆಯನಲ್ಲಿ,
ಬಡಿದುದೆದೆ ಇಮ್ಮಡಿಯಿನಿಲ್ಲಿ—
ಹಿತ್ತಿಲಿಗೆ ನಾನೋಡಿದೆ.

ಇರುಳಿರುಳನಿಂತೆರೆದು ಸರಿಯೆ,
ನಾಳೆಗಳ ಕದ ಹೊಂಚಿ ತಿರಿಯೆ,
ನೋಡುವಾಸೆಯು ಕುಕ್ಕೆ ಬರಿಯೆ—
ನಾಳೆಯಿದೆ, ನೀನಿಲ್ಲವೇಂ ?

ಮದುವೆಯುಂ ಕಾದಂತೆ ಬೆನಕಂ,
ನಾಳೆ ನಾಳೆಂದಂದಿನನಕಂ
ವಂಚಿಸಲಿ ನಾನೆನ್ನ ಮನಕಂ—
ನಾಳೆಯಿದೆ, ನೀನಿಲ್ಲವೇಂ ?

ಬರುವಿ ಗಡ ನೀನೆಂದು ಕೋರಿ
ಕಾವೆದೆಯೊಳರಮರಿಕೆ ತೂರಿ
ಬೆಕ್ಕಿನೊಲು ಹಂಬಲದ ದಾರಿ
ಯಡ್ಡ ನುಗ್ಗುತಿದೇಕೆಯೊ ?

ಆಸೆಯನುದಿನಮೇತವೆನ್ನ[6]
ತೀವುತೆದೆಯುಂ ಸಂಜೆಯುನ್ನ,
ಇರುಳೊಳಾಡಿಸಿ [7]ಹರೆಯ ಮುನ್ನ
ಬರಿಯ [8]ಮರಿಗೆಯನಿಳಿಪುದು !

4 ಜೋಗಿಯೆಂದರೆ ಸಿಂಹಮಾಸದಲ್ಲಿ ತುಳುನಾಡಿನ ಹಳ್ಳಿಗಳಲ್ಲಿ ಮನೆಮನೆಗಳಿಗೆ ಕೊಂಡು ಹೋಗಿ ಆಡಿಸುವ ಒಂದು ವೇಷ 5 ಸೋಣ (ಶ್ರಾವಣ)=ಸಿಂಹಮಾಸ 6 ಏತ=ಯಾತ (picotta) 7 ಹರೆ=ಮುಂಜಾನೆ 8 ಏತದಲ್ಲಿ ನೀರನ್ನು ಎತ್ತುವ ಪಾತ್ರ

ನಾಳಿನಾಸೆಯುನಿನ್ನು ತೊರೆಯೆ,
ಕಾಂಬಿನಂ ಕೋರಿಕೆಯು ಮರೆಯೆ—
ಬೆಳಕಿಗೆಂದಿರುಳಲ್ಲಿ ತೆರೆಯೆ
ಕಿಟಕಿ ಗಾಳಿಯುನೀಸದೆ ?

---

## ಕ್ವ ?

ಮರಣತ ಪರಮೆನ್ನ ಜಿಜ್ಞಾಸೆಯೊಡೆಯಾ—
ಹುಟ್ಟ ಹೊರವಟ್ಟು ಬಾಳ್ವೆಯ ಮುಟ್ಟೆ ಕಡೆಯಾ,
ಮುಂತಡೆವರೇ ಕಡದಿ ಕತ್ತಲೆಯ ತಡಿಯಾ ?

ಆವಂಬಿಗಂ ಬರುವ ಪರಿಸೆಯಂ ಕಾಯ್ವಂ ?
ಎಂತೆಲ್ಲಿಗೆನ್ನೆಗಂ ತೊರೆಯಾಚೆ ಹಾಯ್ವಂ ?
ಅಲ್ಲಿಂದ ಮುಂದವರನಾರೆಲ್ಲಿಗೊಯ್ವಂ ?

ಕಡವಿಹವೆ ಮುಂದಿದೇನೊಂದೆ ಕಡವಿಂತೆ ?
ಇನ್ನುಮಿರೆ, ಕಡಕಡದ ನಡುನಡುವೆ ಮುಂತೆ
ಚಾಚಿಹವೆ ಬಾಳ್ವೆ ? ಇರಲೇ ಪರಿಯುವಂತೆ ?

ಪಯಣಗತಿ ಎಂತಾಚೆ ? ಯಾವ ಮೇರೆವರಂ ?
ಅಲ್ಲಿ ನೆಲೆವರೆ ? ಮರಳ್ವುವರೆ ಇಲ್ಲಿಗವರಂ ?
ನೆನೆವರೇಂ ಮರೆವರೇನಲ್ಲಿ ಇಲ್ಲಿದರಂ ?

ಮುಗಿವುದೆಂದೀ ಯಾತ್ರೆ ? ತುದಿ ಮೊದಲಿನೊಂದೆ
ಬಾಳ್ವೆ ಇದೊ ? ಹಲವರೊಳಗೊಂದೊ ? ಇಲ್ಲಿಂದೆ
ಅಂದಂದಗಲ್ವರೊಂದಾಗುವರೆ ಮುಂದೆ ?

ಎಲ್ಲಿಗೆಂದರಿಯದಲ್ಲಿಗೆ ಸರಿಯಲಲ್ಲಿ
ನಿನ್ನ ಕಾಂಬುದೆ ಬಾಳ್ವೆಯುರಸಿದುದನಿಲ್ಲಿ ?
ಇಲ್ಲಡಕಟಲ್ಲಿಗಲ್ಲಿಗೆ ಭೇದವೆಲ್ಲಿ ?

---

# ಕೊಳುಗುಳದ ಮನವಿ

[Theodor Korner ಎಂಬ ಜರ್ಮನ್ ಕವಿಯ 'Gebet wahrend der Schlacht' (Prayer during the battle) ಎಂಬ ಕವಿತೆಯಿಂದ ಪ್ರೇರಿತವಾದುದು]

ಕರೆವೆ ನಾ ನಿನ್ನನೊಡೆಯಾ !
ನಿನ್ನ ಹೆಸರಂ ಕೊಂಡು ನಿಂದೆನಿದೊ ಪಿಡಿಗುಂಡು
ನೂರ್ಮೆ ಮೂರ್ಮೊರಸೆ ಕಾರ್ಮೊಳಗನುರ್ವರೆಯಿಂ,
ಕಿಸುಬಾಯನಾಕಳಿಸಿ ದೆಸೆಗಳಂ ಬಾಗುಳಿಸಿ,
ಮಿಂಚೆರಂಚಿ ಪಳಂಚಿ ಮುಂಚೆ ದಳ್ಳುರಿಯಿಂ—
ಪ್ರೋಚ್ಚಂಡ ತಾಂಡವಮೊ ನಿನ್ನದೊಡೆಯಾ ?
ನಿನಗೆ ಮಣಿಮಣಿವೆನೊಡೆಯಾ !

ನಿನಗೆ ಮಣಿಮಣಿವೆನೊಡೆಯಾ !
ಕಾಳೆಗಳ ಭೋಂಕಾರ ಢೋಲ್ಗಳ ಧಳಂಕಾರ—
ಹೊಂಗುತಿದೆ ಮಂಗಲಾಮಂಗಲಮೊ ತೂರ್ಯಂ !
ಇದೊ ನಿಶಾಂತ ತುತೂರಿಯೂದಲಿಂತೆದೆ ತೂರಿ—
'ಪರಧುರ್ಯರಿತಿಕಾರ್ಯಮನಿವಾರ್ಯ ಶೌರ್ಯಂ !'
ಜೀವಂತ ಕೋವಿಯಾನೇವೆನೊಡೆಯಾ !
ಕಾಣಿಸಾಣತಿಯನೊಡೆಯಾ !

ಕಾಣಿಸಾಣತಿಯನೊಡೆಯಾ !
ನಮ್ಮ ಬಾಯಿಯ ತುತ್ತ ಕಸಿವ ಹಸಿವೆಯ ಕುತ್ತ
ಮೆಂತಂತು ಸಂಗ್ರಾಮ ಸಂಭ್ರಮಾಹ್ವಾನಂ,
ಗೃಹಲಕ್ಷ್ಮಿ ಕೊರಳಾಂತು ಸುರಿದ ನೀರವಮೆಂತು
ಅಂತೀ ರಣಾಂಗಣ ಘನಾಘನ ಧ್ವಾನಂ—
ನಿನ್ನ ನಿಶ್ಶಂಕ ಸಂಕಲ್ಪವೊಡೆಯಾ !
ನೀಡ ರಣದೀಕ್ಷೆಯೊಡೆಯಾ !

ನೀಡ ರಣದೀಕ್ಷೆಯೊಡೆಯಾ !
ವಶಗೆಯ್ಯಲಿಳೆಯೆಲ್ಲ ಮುಸಗಿ ಕಾದುವೆನಲ್ಲ—
ಸ್ವಾರಾಜ್ಯವರ್ಜ್ಯಮನ್ಯರ ರಾಜ್ಯವೇಕೆ ?
ತಾಯ ಸೆರೆಯುಂ ಸವರಲೆಂದೆ ವೆರವಿಾ ಬವರ—
ದಬ್ಬಾಳಿಕೆಯ ಮೆಟ್ಟಡಿಯ ತಬ್ಬಬೇಕೆ ?
ವಿಸ್ಫಾರಿಸೆನ್ನೆದೆಯ ಧನುನಿಯೊಡೆಯಾ !
ತಾರ ಸಮರಾಜ್ಞೆಯೊಡೆಯಾ ! 28

ತಾರ ಸಮರಾಜ್ಞೆಯೊಡೆಯಾ !
ಅನ್ಯದೇಶಾಕ್ರಾಂತಿ ಸ್ವಪರನಾಶಭ್ರಾಂತಿ
ಯಿಂ ದ್ವಿಪಕ್ಷದ ರಕ್ಷೆಗೀಕ್ಷಿಸದೆ ಬಗೆಯಂ,
ರಣವೊಂದೆ ಶರಣೆಂದೆ ಬಂದೆ ಮುಂದೆದೆಯಿಂದೆ
ತೊಳೆದು ಕಂಬನಿಯೊಳೆದುರಾಳಿಗಳ ಪಗೆಯಂ—
ಸನ್ನದ್ಧನಾಂ ಧರ್ಮಯುದ್ಧಕೊಡೆಯಾ !
ಬೆಂಬಲಿಸು ನನ್ನನೊಡೆಯಾ ! 35

ಬೆಂಬಲಿಸು ನನ್ನನೊಡೆಯಾ !
ಎನ್ನೆವರೆಗೀ ಪ್ರಾಣಮೆನ್ನೆವರೆಗೆ ಕೃಪಾಣ
ಮನ್ನೆಗಂ ಕಾದೆಂದು ಬೀಳ್ಕೊಡಿಂದೆನ್ನ !
ನೀನೆ ವಿಜಯಧ್ವಜಂ ! ನೀನೆ ಹೃದಯಸ್ರಜಂ !
ನೀನೆ ವಿಷ್ವಕ್ಸೇನ ಸೇನಾನಿಯೆನ್ನ !
ಸೋಲಗೆಲವೆನ್ನದೇಂ ? ನಿನ್ನದೊಡೆಯಾ !
ಕಾದುವುದೆ ನನ್ನದೊಡೆಯಾ ! 42

ಕಾದುವುದೆ ನನ್ನದೊಡೆಯಾ !
ಸರ್ವಭಾರಮನಿಂದು ನಿನಗಿರಿಸಿ ತರಿಸಂದು
ನಿನ್ನ ಹೆಸರೆತ್ತುತೆತ್ತುವೆ ಕತ್ತಿಯನ್ನ !

ನಿನ್ನಿಚ್ಛೆ ಎಂತೆಂತು ನಡೆಸೆನ್ನನಂತಂತು—
ಜಯಕೆ ಮುನ್ನಡೆಯಿಸಥವಾ ಮರಣಕೆನ್ನ !
ಮರಣಮೆ ವರಂ ಪರಾಶ್ರಯದಿನೊಡೆಯಾ !
ಮುನ್ನಡೆಯಿಸೆನ್ನನೊಡೆಯಾ ! 49

ಮುನ್ನಡೆಯಿಸೆನ್ನನೊಡೆಯಾ !
ಇಂದು ಜೀವಮನೆನ್ನ ತೆತ್ತೆ ಕೆಯ್ಗಿದೊ ನಿನ್ನ—
ನೀನಿದಂ ನನಗಿತ್ತೆ, ನೀನೆ ಕೊಳಬಲ್ಲೆ !
ಹರಸೆನ್ನನುಳಿಯೆಂದೊ, ಹರಸೆನ್ನನಳಿಯೆಂದೊ—
ಅಳುವ ತಾಯಿಳೆಯೊಳೆನ್ನಳಿವುಳಿವನೊಲ್ಲೆ !
ಇದೆ ಜಲಾಂಜಲಿ ಜೀವಿತಾಶೆಗೊಡೆಯಾ !
ನಿನಗೆನ್ನನಿತ್ತೆನೊಡೆಯಾ ! 56

ನಿನಗೆನ್ನನಿತ್ತೆನೊಡೆಯಾ !
ಸಿಡಿಲ ಸನ್ನೆಯಿನೆನ್ನನಂತಕಂ ಕರೆವನ್ನ,
ಕೆಯ್ಮುಗಿಯುವಲಿ ನಿನಗೆ ಕಣ್ಮುಗಿಯುವೆನ್ನ
ಜೀವನಂ ಬಸಿವನ್ನ ಭಾವನಂ ಕುಸಿವನ್ನ,
ಮೂರ್ಛೆಯಿಂ ನಿನ್ನ ಹೆಸರುಚ್ಚರಿಸದನ್ನ,
ಸ್ವಾಗತಮೆ ತವ ಪದಾಗತನಿಗೊಡೆಯಾ ?
ಇದೆ ಕೊನೆಯ ಮನವಿಯೊಡೆಯಾ ! 63

ಇದೆ ಕೊನೆಯ ಮನವಿಯೊಡೆಯಾ !
ತಾಯ ಸಂಕಲೆ ಕಡಿಯೆ ಸಂಗಳಿಸದಾಂ ಮಡಿಯೆ,
ನೀನದಂ ತವಕದಿಂ ತರಿವೆಂದು ಬಲ್ಲೆ !
ಮಡಿಯೆ ಜನಿತ ವ್ಯಕ್ತಿ, ಮಡಿವುದೇನನುರಕ್ತಿ ?—
ತಾಯೊಸಗೆ ತರ್ವಿನಂ ಸ್ವರ್ಗಸುಖಮೊಲ್ಲೆ !
ಭವಭವಮನೆನಗಿಲ್ಲಿ ಸಲ್ಲಿಸೊಡೆಯಾ !
ಕರೆವೆ ನಾ ನಿನ್ನನೊಡೆಯಾ ! 70

# ಪಂಢರಪುರದಲ್ಲಿ

ರಾಗ ಯಮುನಾಕಲ್ಯಾಣಿ—ತಾಳ ಧುಮಾಳಿ

ಯಾವ ಭಾಗ್ಯದಿಂದಿಲ್ಲಿಗೆ ಬಂದೆ ?
ನಿನ್ನ ಕಂಡು ಧನ್ಯನಾದೆ ತಂದೆ !
ಇನ್ನಾದಡಮೆನಿಸೆನ್ನೆದೆಯಿಂದೆ—
ಜಯ ಜಯ ಪಂಢರಿನಾಥ ವಿಠೋಬಾ ! ॥ ೧ ॥

ತುಕಾರಾಮ ನಾಮದೇವರಿಲ್ಲಿ
ಕುಣಿದ ರಂಗಸಿಲೆಯಿಂ [1]ಸೆಲೆವಲ್ಲಿ
ನಿನ್ನ ನಾಮಮೆದೆಯೊತ್ತುವೆನಲ್ಲಿ—
ಜಯ ಜಯ ಪಂಢರಿನಾಥ ವಿಠೋಬಾ ! ॥ ೨ ॥

ನಡುವಲಿ ಕೆಯ್ಮಡಗುತ ನಿಡುನಿಂತೆ
ಕೃತಕೃತ್ಯನೊಲೆನ್ನ ಕಾವ ಮುಂತೆ
ಮುಗಿವುದೆಂತು ನಿನ್ನ ಕೆಲಸವಂತೆ ?
ಜಯ ಜಯ ಪಂಢರಿನಾಥ ವಿಠೋಬಾ ! ॥ ೩ ॥

[2]ಬಬ್ಬುಳಿಯ ಮುಳ್ಳ ಮೆಳೆಯುಲಿ ನಿಲ್ಲೆ,
ಏಕೆ ವಿಷಯವಿಷಮ ಮನಮನೊಲ್ಲೆ ?
ನೀತಿಯಿದೇಂ, ದೇವ, ನೀನೆ ಬಲ್ಲೆ !
ಜಯ ಜಯ ಪಂಢರಿನಾಥ ವಿಠೋಬಾ ! ॥ ೪ ॥

ಸಕೂಬಾಯಿಯೊಡಬೀಸಿದೆ ಕಲ್ಲಂ,
ಗೋಮಾಯಿಯ [3]ಕಡಸಲಾಂತೆ ಜಲ್ಲಂ—
ನನ್ನ ಕಡೆಗೆ ಕಣ್ಣೆತ್ತಿದುದಿಲ್ಲಂ !
ಜಯ ಜಯ ಪಂಢರಿನಾಥ ವಿಠೋಬಾ ! ॥ ೫ ॥

1. ಪುರುಧ್ವನಿಸು. 2 ಜಾಲೀಗಿಡ. 3. ಕಡವನ್ನು ದಾಟಿಸು

[4]ಹಳಸಿರದೆ [5]ಅಂದಿನಿಟ್ಟಿಗೆ ನಿನ್ನ?
ನೋಡ ಜೀಯ ತಂದಿಹೆ ಹೊಸತನ್ನ—
ಮೆಟ್ಟಿ ನಿಲ್ಲು ನಿಷ್ಠುರ ಮನವೆನ್ನ,
ಜಯ ಜಯ ಪಂಢರಿನಾಥ ವಿರೋಬಾ! ॥ ೬ ॥

ಪುಣ್ಯಸಲಿಲೆ ತಾಯೆ ಚಂದ್ರಭಾಗೆ,
ತೊಳಸೆನ್ನ ಮನದ ಶಂಕೆಯ ನೀಗೆ,
ಗುಳುಗುಳಿಸೊಡೆಯನ ನೆನವೆಡೆ ಬೀಗೆ—
ಜಯ ಜಯ ಪಂಢರಿನಾಥ ವಿರೋಬಾ! ॥ ೭ ॥

ಪೊರೆಯ! ತೊರೆಯ! ಇನ್ನೆರೆಯ ನೀನೆನ್ನ—
ಧನ್ಯನಾದೆ ಕಂಡೆನೆಂದೆ ನಿನ್ನ!
ನೀ ಮರೆವೊಡಮಿನ್ನಿದೆ ಮರೆಯೆನ್ನ—
ಜಯ ಜಯ ಪಂಢರಿನಾಥ ವಿಠೋಬಾ! ॥ ೮ ॥

ಗೆಯ್ದ ಪಾಪಮನಿತುಂ ನಿನಗರ್ಪಣ,
ಗೆಯ್ಯದ ಪುಣ್ಯಮದುಂ ನಿನಗರ್ಪಣ,
ಕಳೆದುಳಿದ ಜೀವಿತಂ ನಿನಗರ್ಪಣ,
ಜಯ ಜಯ ಪಂಢರಿನಾಥ ವಿರೋಬಾ! ॥ ೯ ॥

ನಿನ್ನನೊಡೆಯ ಮತ್ತೇನನು ಬೇಡೆ—
ಬೇಡಲೇಕೆ ನೀ ಬೇಡದೆ ನೀಡೆ?
ಸಾಕಂತ್ಯವರಂ ನಾಲಗೆಯಾಡೆ—
ಜಯ ಜಯ ಪಂಢರಿನಾಥ ವಿಠೋಬಾ! ॥ ೧೦ ॥

---

4 ಹಳತಾಗು 5 ದೇವರು ತನ್ನ ಭಕ್ತನಾದ ಪುಂಡರೀಕನ ಮನೆಗೆ ಬಂದಾಗ, ತಾಯಿತಂದೆಯವರ ಸೇವೆಯಲ್ಲಿ ನಿರತನಾಗಿದ್ದ ಆತನು ತಾನದನ್ನು ಮುಗಿಸಿ ಬರುವ ವರೆಗೆ ಇದರಲ್ಲಿರು ಎಂದು ಕೊಟ್ಟ ಇಟ್ಟಿಗೆ.

# ಪಾ ಲು ಮಾ ರಿ ಕೆ

ಯಾವಳೊಬ್ಬ ಹಾಲುಗಿತ್ತಿ
ಹಾಲ ಕೊಡವ ತಲೆಯೊಳೆತ್ತಿ
ಹೊಳೆಯಾಚೆಗೆ ಕಡೆಯಲೊತ್ತಿ
ಕಡಕೆ ಬಂದಳು

ತಡವಿನಿಸಿರೆ ಕಡವ ತೆರೆಯೆ,
ಕೊಡವನಿಳಿಸಿ ನೀರನೆರೆಯೆ,
ಹಾಲಿನರಕೆ ನೆರೆದು ನೊರೆಯೆ
ತುಂಬಿತಾ ಕೊಡಂ

ಅವಸರದಿಂ ದೋಣಿ ಹತ್ತಿ
ಕುಳಿತಳಾಕೆ [1]ಬಾಣಿಗೊತ್ತಿ;
ತಿರುಗಲಂಬಿ ಹಗಲು ಮುತ್ತಿ
ತಾಕೆಯ ಮೊಗದಿ.

ಮುಂಬಿಸಿಲಲಿ ಬೆಮರು ತುರುಗೆ,
ಸೂಸಿತು ಕಿರುನಗೆಯು ನಿರಿಗೆ—
ಜಾಲಾಕ್ಷದಿ ನುಸುಳಿ ಹೊರಗೆ
ಸುಳಿವ ಗಾಳಿಯೊ ?

ಅನಿಬರ ಗಂಡಸರ ಮುಂತು
ಮೊಗವ ತೊಳೆಯುದಿರುವಳೆಂತು ?
ಸೆರಗ ಸರಿಸಿ ನಿರಿಯೊಳಾಂತು
ತೊರೆಗೆ ಬಗ್ಗಲು,

ಸಡಲಿದ ತಿರುಗಣೆಯು ತಿಳಿಯ
ದವಳ ಬಲದ ಕಿವಿಯು ಗಿಳಿಯು
ವಾಲೆ ಜಗುಳುವೊಡನೆ ಹೊಳೆಯು
ಗುಳುಗುಳೊರೆದುದು.

1 ದೋಣಿಯ ಒಂದು ಭಾಗ

ಕಿವಿಯ ಮುಟ್ಟಲೋಲೆಯಿಲ್ಲ !
ಕಿವಿಯೆ ಕುಸಿದು ಕೆಡೆದುದಲ್ಲ !
ಕಣ್ಣಿಗುಕ್ಕುವೆದೆಯ ಗುಲ್ಲ
ನಿಂತು ಹುಯ್ದಳು —

'ಇದ್ದುದೆಲ್ಲ ಪೋದುದಲ್ಲ !
ಮನದ ನೆಲುಹು ಹರಿದುದಲ್ಲ !
ದೇವರೆ, ಕೈಯ್ಬಿಟ್ಟೆಯಲ್ಲ
ನಟ್ಟನೀರಲಿ !

'ಪೋದುದೆ ಕಟ ಕಣ್ಣಮುಂದೆ ?
ನೀರೆ ನನ್ನನದ್ದಿ ಕೊಂದೆ !
ಗಳಿಸಿದೆನೇನ್ನೀರಿಗೆಂದೆ
ವಾಲೆಯಿದನ್ನ ?

'ಅಮ್ಮನೆನಗೆ ಕೊಟ್ಟುದಲ್ಲ,
ಗಂಡನಿದಂ ಕೊಂಡುದಲ್ಲ,
ಅಕಟ ನಾನೆ ದುಡಿದೆನಲ್ಲ
ಮೆಯ್ಯ ಮುರಿತದಿಂ ?

'ಗೊಲ್ಲರೆಮ್ಮ ಪಾಳ್ಯದಲ್ಲಿ
ನನ್ನೊಬ್ಬಳ ಕಿವಿಗಳಲ್ಲಿ
ಅಲ್ಲದೆ ಮತ್ತಾರಿಗಲ್ಲಿ
ಇಂತಹ ವಾಲೆ ?

'ಇದರ ಚಿನ್ನದೇನು ಬಣ್ಣ ?
ಕೆತ್ತನೆಯಿದರಾರ ಕಣ್ಣ
ಕುಕ್ಕದು ? ಪಡೆದೆದೆಯ ಹುಣ್ಣ
ಬೆಲೆಯು ತೆತ್ತನೆ ?

‘ಯಾವ ಕೆಟ್ಟ ಶನಿಯೊ ಕಣ್ಣ
ಕಟ್ಟಿತ ತನಿಸುಖದ ಗಿಣ್ಣ
ಮುಕ್ಕುವೆನ್ನ ಬಾಯ್ಗೆ ಮಣ್ಣ
ನಕಟ ಹೆಟ್ಟಿತು ?

‘ನಾದಿನಿ ಇದನೆರೆಯಲೊಂದು
ದಿನಕಿತ್ತೆನೆ ಅವಳಿಗಿಂದು ?
[2]ನತ್ತೆ ಕರಿಯ ಕೊತ್ತಿಗೆಂದು
ಮನದಿ ನಕ್ಕೆನೆ ?

‘ಹರಿದೆನಾರ ವಾಲೆಯನ್ನ
ಮುನ್ನ ಹುಟ್ಟೊಳಲ್ಲಡೆನ್ನ
ಹಾಲೆ ಹರಿವ ಹರಕೆಯನ್ನ
ಹೊಳೆಗೆ ಹೊತ್ತೆನೆ ?

‘ಯಾರ ಸೊಟ್ಟ ಮೋರೆಯನ್ನ
ಕಂಡೆನೊ ಹೊತ್ತಾರೆಯನ್ನ ?
ಜೀವಕೆ ಗಂಟಿಕ್ಕಿದೆನ್ನ
ತೊಡವೆ ಪೋದುದೆ ?

‘ಕಳೆದು ಹೋದ ವಾಲೆಗಳಲೊ ?
ಅಣಕುವ ನೆರೆಯವಂಗಳಲೊ ?
ತವರಂ ತಿವಿವತ್ತೆಗಳಲೊ ?
ನನಗಾನಳಲೊ ?

‘ಇನ್ನೆನಗಿದು ಬರುವುದುಂಟೆ ?
ಬರಿದಿನ್ನೇಕಿದರ ತಂಟೆ ?
ತಿರುಪತಿಯಲಿ ಹಣದ ಗಂಟೆ
ಕಡಲಿಗೊಗೆಯರೆ ?’

೨. ನತ್ತು=ಮೂಗಿನದೊಂದು ಆಭರಣ.

ಮನಸಿನ [3]ತನಿ ಕರಗಲಿಂತೆ
ಯಾರ ಮನಂ ಕೊರಗದಂತೆ?—
ಹಾಲುನಗೆಗೆ ಹನಿಯು ಚಿಂತೆ
ಹೆಪ್ಪುಗೊಳಿಸದೆ?

ಮೊಳಕಾಲಲಿ ಮೊಗವನೂರಿ
ಕುಳಿತಳಾಕೆ ತರಿಯು ಗೀರಿ,
ದಿನಮುಖದೆಲೆವನಿಯೊ? ಸೋರಿ
ತಾರಕೆಯಂಬಕಂ.

ದೋಣಿಯೆಲ್ಲ ಮರುಗಿತಲ್ಲಿ—
ನುಡಿಗಳ ಬಾಯ್ಮರುಕವೆಲ್ಲಿ?
[4]ಜಲ್ಲೆ ತಗಲದಾಳವೆಲ್ಲಿ?
ಓಡವೋಡಿತು.

ತೊರೆಯನೊಬ್ಬ ರಸಿಕನಂತೆ,
ನಗುತ ನುಡಿದನವಳಿಗಿಂತೆ—
ಪೆರರ ಚಿಂತೆ ನಗೆಯ ಸಂತೆ
ಯಾರಿಗೊಲ್ಲದು?

'ಏತಕಮ್ಮ ಬರಿದೆ ಚಿಂತೆ?
ಹೂವೆಯನಿತೆ ನನೆಯನಿಂತೆ,
ದುಡಿದಂತೆಯೆ ದುಡಿವೆಯಂತೆ—
ಹದೆಯುವಿಲ್ಲವೆ?

'ಊರೊಳಿರಲು ನೀರಿನೊರತೆ
ಚಿನ್ನಕೆ ನಿನಗೇನು ಕೊರತೆ?
ಹಾಲಿಗೈಸೆ ನೀರ ಬೆರತೆ
ಎಣ್ಣೆ ತುಪ್ಪಕೇಂ?

3. ಅಳಕ ಗಟ್ಟು 4. ಜಲ್ಲು—ದೋಣಿಯನ್ನು ನಡಸುವ ಗಳ.

'ನೀರಿಗಾಯ್ತು ನೀರ ಪಾಲು,
ಉಳಿದುದಿನ್ನು ಹಾಲ ಪಾಲು;
ಗೆಯ್ದು ಗೆಯ್ಮೆ ತನ್ನ ಪಾಲು
ಕೊಳ್ಳದಿರುವುದೆ ?

---

## ಕನ್ನಡಿಗರ ತಾಯಿ

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ !
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ !
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ;
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು—
ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು.

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮಿೂವ ಪುಷ್ಪಮಿೂವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮ್ಯಗೋರಗಾಳಿಯೊ,
ನದಿನಗರನಗಾಳಿಯೊ !
ಇಲ್ಲಿಲ್ಲದುದುಳಿದುದೆ ?—
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ ?

ಬುಗರಿಯಿೂಯೆ ಶಬರಿ ಕಾಯೆ ರಾಮನಿಲ್ಲಿ ಬಂದನೆ ?
ಕನ್ನಡ ದಳ ಕೂಡಿಸಿ ಖಳ ದಶಾಸ್ಯನಂ ಕೊಂದನೆ ?
[1]ಪಾಂಡವರಜ್ಞಾತಮಿದ್ದ,
ವಲಲಂ ಕೀಚಕನ ಗೆದ್ದ,

1 ಧಾರವಾಡ ಜಿಲ್ಲೆಯ 'ಹಾನಗಲ್ಲು' ವಿರಾಟನ ರಾಜಧಾನಿ ಎಂದು ಪ್ರಖ್ಯಾತವಿದೆ.

[2]ಕುರುಕುಲ ಮುಂಗದನವೆದ್ದ
ನಾಡು ನೋಡಿದಲ್ಲವೇ ?
ನಂದನಂದನನಿಲ್ಲಿಂದ ಸಂದಿಗಯ್ದನಲ್ಲವೇ ?

ಶಕವಿಜೇತನವರ [3]ಶಾತವಾಹನಾಖ್ಯನೀ ಶಕಂ
ನಿನ್ನೊಳಂದು ತೊಡಗಿ ಸಂದುದರ್ಘ ಭರತದೇಶಕಂ !
ಚಳುಕ್ಯ ರಾಷ್ಟ್ರಕೂಟರೆಲ್ಲಿ,
ಗಂಗರಾ ಕದಂಬರೆಲ್ಲಿ,
ಹೊಯ್ಸಳ ಕಳಚುರ್ಯರೆಲ್ಲಿ,
ವಿಜಯನಗರ ಭೂಪರು
ಆಳ್ದರಿಲ್ಲಿಯಲ್ಲದೆಲ್ಲಿ ತಾಯೆ ಮೇಣಲೂಪರು ?

ಜೈನರಾದ ಪೂಜ್ಯಪಾದ ಕೊಂಡಕುಂದ ವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
[4]ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರ ವರೇಣ್ಯರ,
ತಾಯೆ, ನಿನ್ನ ಬಸಿರೆ ಹೊನ್ನ ಗನಿ ವಿದ್ಯಾರಣ್ಯರ !

ಹಳೆಯ ಬೀಡ [5]ಬೇಲನಾಡ ಮಾಡವೆನಿತೊ ಸುಂದರಂ !
[6]ಬಿಳಿಯ ಕೊಳದ ಕಾರಕಳದ [7]ನಿಡುಕರೆನಿತೊ ಬಂಧುರಂ !
ಇಲ್ಲಿಲ್ಲದ ಶಿಲ್ಪಮಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ !
ಹಿಂಗತೆಯಿನಿವಾಲ ಸೊಲ್ಲ
ನೆಮ್ಮ ತೃಷೆಗೆ ದಕ್ಕಿಸು—
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು !

2 ಗೋಗ್ರಹಣದ ಯುದ್ಧ 3 ಶಾಲಿವಾಹನ 4 ಶರ್ವನೆಂದು ನೃಪತುಂಗನ ಹೆಸರು.
5 ಬೇಲೂರು. 6 ಶ್ರವಣಬೆಳ್ಗೊಳ 7 ನಿಡುನಿಂದಿರುವ ಗೊಮ್ಮಟ ಮೂರ್ತಿಗಳು

ಆರ್ಯರಿಲ್ಲಿ ಬಾರದಲ್ಲಿ ಬಾಷೆ ಎಲ್ಲಿ ಸಕ್ಕದಂ ?
ನಿನ್ನ ನುಡಿಯಿನಚ್ಚುಪಡಿಯುಸಾಂತರೆನಿತೊ ತಳ್ಕದಂ !
ಎನಿತೊ ಹಳೆಯ ಕಾಲದಿಂದ
ಬರ್ದಿಲವೀ ಬಾಸೆಯಿಂದ
ಕಾಲನ ಮೂದಲಿಸಿ ನಿಂದ
ನಿನಗೆ ಮರವೆ ಹೊದೆವುದೆ ?
ನಿನ್ನ ನುಡಿಗೆ ನಿನ್ನ ನಡೆಗೆ ಮುದುಪ್ಪುಮೆಂದುಮೊದವುದೆ ? 49

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ !
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ
ಸುರಭಿ ಎಲ್ಲಿ ? ನೀನದನ್ನ
ನವಶಕ್ತಿಯಿನೆಬ್ಬಿಸು —
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು ! 56

ನಿನ್ನ ಪಡೆಯ ಕತೆಯ ಕಡೆಯ ನುಡಿಯೆ ತಾಳಿಕೋಟೆಯು ?
ಕಡಲಿನೊರತೆಗೊಳವೆ ಕೊರತೆ ? ಬತ್ತದು ನಿನ್ನೂಟೆಯು !
ಸೋಲ ಗೆಲ್ಲವಾರಿಗಿಲ್ಲ ?
ಸೋತು ನೀನೆ ಗೆದ್ದೆಯಲ್ಲ ?
ನಿನ್ನನಳಿವು ತಟ್ಟಲೊಲ್ಲ !—
ತಾಳಿಕೋಟೆ ಸಾಸಿರಂ
ಬಾಹುಬಲದಿ ಮನೋಬಲದಿ ತಾಯೆ ಗೆಲುವೆ ಭಾಸುರಂ ! 63

ಕುಗ್ಗದಂತೆ ಹಿಗ್ಗಿಪಂತೆ ನಿನ್ನ ಹೆಸರ ಟೆಕ್ಕೆಯುಂ,
ನೀಗದಂತೆ ಸಾಗಿಪಂತೆ ನಿನ್ನ ನುಡಿಯ ಢಕ್ಕೆಯುಂ,

ನಮ್ಮೆದೆಯುಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು !
ಇದನೊಂದನೆ ಕೋರುವೆ—
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ ?

---

## ಬೇಕು—ಬೇಡ

ಬೇಕೆಂಬುವ ಬಡತನವ
ನ್ನೇಕೆ ಕರೆದುಕೊಳುವೆ ?
ಬೇಡದೆ ಬಹ ಬಲುಧನವ
ನ್ನೇಕಕಟಾ ಕಳೆವೆ ?
ಹಗಲ ಕುಮುದದಿಂದುಭಿಕ್ಷೆ,
ಶಿಶಿರಾಂತದ ಸುಮೋಪೇಕ್ಷೆ
ನೆರೆಯುಲಿಂದುಮುಳವೆ ?

ಬೇಕೆನೆ ನೀನೊಮ್ಮೆ ಬಳಿಕ
ಬೇಕೆನುವೆಲ್ಲವಂ—
ಬೇಡುವುದಿನ್ನೇಕೆ ತುಳುಕ
ಲಂಬುಧಿ ಸಲಿಲವಂ ?
ಬೇಡುವಂತೆ ಬಡವನಾದೆ—
ಜಲಧಿಗೆ ಜಲವೊಳವೆ ನಾದೆ
ಬಾಡಬಾನಲವಂ ?

ಬೇಕೆನುವೊಡನಿತ್ತೆ ಮೂಢ
ಮನಸೆ ಸಂಚಕರಂ
ಸ್ವನಾಶಕಿದೊ ನೆಗಳ ಬೇಡ
ನಳಿನಕೊಡ್ಡಿ ಕರಂ !

ನಳಿನವ್ರೊ ಅಳಿಯಾಸೆಯುಲ್ಲಿ,
ಕರವ್ರೊ ನೆಗಳ ದಾಡೆಯುಲ್ಲಿ—
ತೆರಳಲುಂಟೆ ತೆರಂ ?

ಬೇಕೆಂಬುದಣಂ ಸಮನಿಸೆ,
ತಟ್ಟನೊಡಕು ಬಿಟ್ಟೆ;
ಬಯಕೆಯೊಡನೆ ಬಯಕೆ, ಮನಸೆ,
ಎದೆಗೆ ನುಗ್ಗಿ ಕೆಟ್ಟೆ—
ಎಡೆಯೆಡೆಯಿಂದೊಸರುವಂದು,
ಕೊರೆದು ಬರುವ ನೆರೆಯ ಮುಂದು
ನಿಲಲಾಪುದ ಕಟ್ಟೆ ?

ಬೇಕೆಂಬುದು ದಕ್ಕಲಂತು
[1]ಗೆಯ್ವನಾವನಲಂ ?
ಮನದ ತ್ರಷ್ಣೆಗಡಸನೆಂತು
ಭೂಯೋ ಮೃಗಜಲಂ ?
ಆಸೆಯು ನೆರಳಾ ನಿರಾಸೆ,
ಕುಡಿಯಲಾರದಾ ಪಿಪಾಸೆ—
ಪೆರತೇಂ ಪ್ರತಿಫಲಂ ?

ಬೇಕೆಂಬುದು ದಕ್ಕದೂಡನೆ
ಮುಸಗನಾವ ನರಂ ?
ಮರದ ಹಿಂದೆ ಮರವ ಸುಡನೆ
ಕೆರಳೆ ವನಜ್ವರಂ ?
ವನದಗ್ನಿಯಿನೆಂತು ವನಂ,
ಮನದಗ್ನಿಯಿನಂತು ಮನಂ
ಭಸ್ಮಮೆ ಸತ್ವರಂ.

1. ಅಲಂ ಗೆಯ್=ಸಾಕುಮಾಡು

ಬೇಕೆಂಬುವ ಬಲೆಯು ನೇದು
ಕಾದು ಬಯಕೆಯನ್ನ,
[2]ನೆರವ ಸುಳಿವ ಕಂಡು ಹಾದು
ಜೇಡನುರುಳುವನ್ನ,
ಬಯಕೆಯು ಮೇಣ್ನೆರವ ನಡುವೆ
ಜಗುಳುವೆ ನೀನೆನಿತೊ ತಡವೆ
ಕಾಂಬ ಗುರಿಯು ಮುನ್ನ ! 49

ಬೇಕೆನುವಂತಿಹುದೆ [3]ದಕ್ಕು ?
ನೀನೊಲ್ಲದನಾಂತೆ—
ಬೆಣ್ಣೆಗೆಂದು ನೆಗೆದ ಬೆಕ್ಕು
ಸುಣ್ಣ ಮುಕ್ಕಿದಂತೆ.
ಬಯಕೆಗೆ ಮುಂಗಂಡುದೊಂದು,
ಬೇಡುವ ಕೆಯ್ಗಡೆದುದೊಂದು—
ಬಯಕೆಯುದ್ದ ಚಿಂತೆ. 56

ಬೇಕೆಂಬುದೆ ಮನದ ದ್ಯೂತ—
ಸುಖವೆ ಈಡಿಗಲ್ಲ ?
ಗೆಲ್ಲಲೊಂದು ದಾಯ, ಸೋತ
ದಾಯದೆಣಿಕೆ ಇಲ್ಲ,
ಎರಗದು ಬಗೆದಂತೆ ದಾಯ,
ಇನ್ನು ಬಯಸಲಿನ್ನಪಾಯ—
ಸೋತು, ಸೋತೆ ಎಲ್ಲ ! 63

ಬೇಕೆಂಬವಗವನಪೇಕ್ಷೆ
ತುಷಾಗ್ನಿಯವ್ಯಯಂ;
ಬಯಕೆಯೆ ಗಡ ಮನದ ಶಿಕ್ಷೆ,
ತುಷ್ಟಿಯಾತ್ಮಜಯಂ.

2 ನೆರವು=ನೆರವೇರಿಕೆ 3. ದಕ್ಕುವಿಕೆ.

ಬಾಳೆಯು ಕೇಡದರ ಗೊನೆಯೆ,
[4]ಹೇಸರ ಕೇಡದರ [5]ತನೆಯೆ —
ಬಯಕೆ ಮನಃಕ್ಷಯಂ. 70

ಬೇಕೆಂದುರೆ ದುಡಿದುದೆಲ್ಲ
ಗೆದ್ದಲ ಸಂಚಿತಂ,
ಹುತ್ತ ಮರೆಯ ನಿಯುತಿಗಲ್ಲ
ಬಯಕೆಯುಪಾರ್ಜಿತಂ ?
ಬೇಕೆಂದವನುಂಡನಿಲ್ಲ,
ಬೇಡದವಂ ಹಸಿದನಿಲ್ಲ —
ಬಗೆಯ ಪ್ರತೀಕ್ಷಿತಂ 77

ಬೇಡವೆನಲು ಕೆಟ್ಟೆನೆಂಬು
ದೇತರ ವಿಭ್ರಮಂ ? —
ಬೆಳಕ ಬೇಡದಿರುಳ ತುಂಬು
ತಿದೆ ತಾರಾಕ್ರಮಂ
ಬೇಡದೆ ಬೇಕಾದುದಡೆಯೆ,
ಬೇಡದುದಂ ಬೇಡಿ ಪಡೆಯೆ
ಏಕೆ ವೃಥಾ ಶ್ರಮಂ ? 84

ಬೇಕು ಬೇಡವೆಂಬ ಭೇದ
ಸುಲಭಸಾಧ್ಯವಲ್ಲ —
[6]ಒಂದೆಳೆಯುಪನಾದ ನಾದ
ಮರಿತ ಕಿವಿಯೆ ಬಲ್ಲ,
ಬೇಗೆಯ ಬರಸಿಡಿಲ್ವೊಡೆಯೆ,
ತೃಷಿತಮನ್ಯ ಹಕ್ಕಿ ಸಿಡಿಯೆ,
ಮಳೆಯ ಹಕ್ಕಿಯೊಲ್ಲ. 91

4 ಹೇಸರಕತ್ತೆ 5 ಮೃಗಗಳ ಗಬ್ಬ 6 ಎಳೆ=ತಂತಿ

ಬೇಕು ಬೇಡವೆಂಬುದಿದುವೆ
   ಸುರಾಸುರಾಂತರಂ—
ಬೇಕೆಂಬುದು ಮನಸಿಗೊದವೆ
   ಸುರನಾದನಸುರಂ.
ಸುರರಿದರಿಂ ಕೆಡೆದರಂತೆ,
ನಿನ್ನನಾಸೆ ಕೆಡಿಸದಂತೆ
   ಕಾದಿರು ಜಾಗರಂ.

ನಿಶ್ವಸಿತೋಚ್ಛ್ವಸಿತದಂತೆ
   ದ್ವಯಮಿದು ಸಂತತಂ—
ಬೇಕೆಂಬುದನುಳಿದ ಮುಂತೆ
   ಬೇಡವಹುದೆ ಹಿತಂ ?
ಬೇಕೆಂಬುದನೆದೆಯಿನೂದಿ,
ಬೇಡೆನೆಂಬುದೆಡೆಗೆ ಸೇದಿ,
   ಬಾಳವಿಶಂಕಿತಂ

ಬೇಡಿದೆಯೇಂ ಕುಡಿವ ಜಲವ,
   ಜೀವನಾನಿಲವಂ ?
ತ್ರಿದಶಾಧಿಕ ಮನೋಬಲವ
   ನವನಿಯು ನಿಲಯುವಂ ?
ನವನವೀನ ಭಾವನವಂ ?
ನಿರವಶೇಷ ಜೀವನವಂ ?
   ತನುವನನೂನವಂ ?

ಬೇಡದೆ ಪಡೆದಿನಿತನೆಲ್ಲ,
   ನಿನಗಿನ್ನೇನರಕೆ[7] ?
ನಿರಂತರ ವಸಂತವಿಲ್ಲ
   ಜಗದೊಳೊಗೆದ ಮರಕೆ;

7 ಅರಕೆ=ಅಪೂರ್ಣತೆ

ಹೊತ್ತರಿತವನಿತ್ತ ಮುನ್ನ
ಬಗ್ಗಿಸುವುದೆ ಸುಗ್ಗಿಯನ್ನ
  ಮರದೆನಿತ್ತೊ [8]ಎರಕೆ ?

ಬೇಡದೆ ನಿನಗವಂ ನೀಡ
  ಲಿದೇಂ ಬಯಸಿ ಬಂತೆ ?
ಅಯ್ದನೆ ಗಾಲಿಯುಂ ಪೂಡ
  ಲಯ್ವಿತೆ ರಥ ಮುಂತೆ ?
ಸಾಕೆ ನಿನ್ನ ಕಿರಿಯ ಸೇರೆ
ಸದಾ ಸುರಿಯೆ ಸುಧಾಧಾರೆ,
  ಹಿಡಿವೆ ಎನಿತನಂತೆ ?

ಬೇಡದಯ್ದುದಳಿಯುವಂದು
  ಹಲುಬಲುಂಟೆ ಜನಂ ?
ಬಂದಂತೆಯೆ ಪೋದುದೆಂದು
  ತಿಳಿಯುದಾರ ಮನಂ ?
ಬೇಡದೆ ಬರುವಸ್ತೋದಯ,
ಏತವಿಳಿತ, ರಿತುಪರ್ಯಯ
  ಮರುಗಿಸಿತಾವನಂ ?

ಇತ್ತವನದನೆತ್ತಲವಂ
  ನಿನಗೇತರ ಭಯಂ ?
ಒತ್ತರಿಸಲು ಬತ್ತಿದವಂ
  ಮುಂಬೆಳೆ ನಿಶ್ಚಯಂ.
ಮಗುವ ಮುನ್ನ ಹಾಲನೀಯೆ,
ಬಲ್ಲನವನೆ ? ಹೆರುವ ತಾಯೆ ? —
  ನೀಗು ಯೋಚನೆಯಂ

8 ಎರಕೆ=ಯಾಚನೆ.

ನದಿಯುನಬ್ಧಿ ನೆರೆವುದೆಂತು
ನುಸುಳಿ ನದೀಮುಖಂ,
ಬಯಕೆಯು ಸಂಕಟದೊಳಂತು
ನಿನಗವನುನ್ಮುಖಂ;
ಬೇಕೆಂಬುವ ನಡುದಂಡೆಯು
ಹರಿವ ಮುನ್ನವನ ಕಂಡೆಯು ?—
ಬಯಕೆ ಪರಾಙ್ಮುಖಂ.

ತತ್ತ್ರಿಯು ಕತ್ತಲೆಗೆ ಸೊಕ್ಕಿ
ಹೊರಡದ ಮರಿಯುನ್ನ
ಕಿರಿಚುವೊಡಂ ತಾಯಿ ಕುಕ್ಕಿ
ಹೊಂದಿಪಂತೆ ತನ್ನ,
ಬೇಕೆಂದುದನಲ್ಲಗಳೆದು,
ನಿಷ್ಠುರ ಕೃಪೆಯಿಂದ ತಳೆದು
ಕೊಳುವನವಂ ನಿನ್ನ.

ಅವನನಲ್ಲದಾವುದೆಲ್ಲ
ಮನಸೆ ಬೇಡಲಿಲ್ಲ ?
ಕತ್ತ್ರಿಯು ಬಿಟ್ಟೊರೆಯಿನಲ್ಲ
ಕಾದಲೆಲ್ಲಿ ಗೆಲ್ಲ ?
ಬೇಡಿದೆ ನೀನವನನೆಂದು
ನೀಡೊಡೆಯಾ ನಿನ್ನನೆಂದು ?—
ತನ್ನನಿತ್ತನಲ್ಲ ?

ತನ್ನನೆ ತಾನೀಯೆ ನಿನಗೆ,
ಇನ್ನೇಂ ನಿನಗಿಲ್ಲ ?
ಮನಸೆ, ಬೇಡುವೊಡಿನ್ನೆನಗೆ
ಬೇಕೆನು ನೀನೆಲ್ಲ—
'ಎಲ್ಲವೆನಲು ನೀನೆ ಬೇಕು,
ಇಲ್ಲವೆನಲು ನೀನೆ ಸಾಕು'—
ಇದೆ ಸಿದ್ಧಿಯ ಪಲ್ಲ.

ನಿನ್ನನೊಲ್ಲದೆದೆಯೊಳಲ್ಲ
 ಬಯಕೆಯೊಡೆಯ ಬಂತು ?
ಶಮಿಯೊಳಲ್ಲದಗ್ನಿಯೆಲ್ಲ
 ಮರದೊಳಿರುವುದೆಂತು ?
ಯಾವ ಸವುದೆಯಾದಡೇನು ?
ಬೆಳಗುವುದೊಂದೇ ಕೃಶಾನು —
 ಬೆಳಗಿಸೆಹೆಯನಂತು !

ಬೇಕೆನುವ ಸದಾ ದರಿದ್ರ
 ನೆನ್ನ ಮನದ ಪುಟ್ಟಿ
ತುಂಬ ನೀಡ ಸದಾ ಭದ್ರ
 ನಿನ್ನ ನೆನವ ತುಟ್ಟಿ[9] —
ಪಡೆದೊಲು ನೀ ಕೊಳುವನೆನ್ನ,
ಪಡೆವೊಲು ನಾ ಕೊಡುವ ನಿನ್ನ,
 ಸೆಳೆಯಿೂ ಎದೆದಿಟ್ಟಿ

ಬೇಡದೆನಗೆ ದಕ್ಕಿದುದೆನೆ
 ನಿನ್ನ ದಯಾಧನಂ,
ಬೇಡದೆನಗೆ ಸಿಕ್ಕುವುದೆನೆ
 ನಿನ್ನಯ ದರ್ಶನಂ;
ದಕ್ಕಿದುದೆನಗಿಂಸುವಂತೆ,
ಸಿಕ್ಕುವುದನ್ನರಸುವಂತೆ
 ಸಾಗಿಸು ಜೀವನಂ.

ಬೇಡೊಡೆಯಾ ಬೇಕೆಂಬುವ
 ತುಂಬಿಯ [10]ಬೆಜ್ಜರಂ,
ನೀಡೊಡೆಯಾ ಸಾಕೆಂಬುವ
 ತಾವರೆಯೆಚ್ಚರಂ;

9. ತುಷ್ಟಿ. 10 ಭ್ರಮಣ.

ನಿನ್ನಡಿದಾವರೆಯೆದೆಯುಲಿ
ಮನ್ಮನೋಭ್ರಮರಕದೆಯುಲಿ
ತೃಷಾಂತಮಚ್ಚುರಂ[11] 196

---

## ಹೆಂಗಸು

'ನಾರಿ ನಾನೆಂದಕಟ ರೂಪಗೋಸಾಯಿ[1]
ನನಗೀಯುನೆನುವನೇಂ ದರ್ಶನದ ಭಾಗ್ಯಂ ?
ಹೆಮ್ಮೊಗವ ನೋಡದೇನವನ ವೈರಾಗ್ಯಂ ?
ಏತರೀ ವ್ರತವೊ!'—ಎಂದಳು ಮಿರಾಬಾಯಿ, 4

'ಇವನಾದೊಡಂ ಗಂಡೆ ? ಗೋಕುಲದೊಳೆಲ್ಲ
ಹೆಂಗಸಲ್ಲದೆ ಗಂಡಸಿಲ್ಲಿ ಬರಸಲ್ಲ!
ಅರಿಯುಲಿವನಿಲ್ಲಿಹುದನಟ್ಟದಿರಳಲ್ಲ
ಬೃಂದಾವನದ ದೇವಿ! ಇವನದೇಂ ಬಲ್ಲ ? 8

ಬಲ್ಲವರ ಬಲ್ಲನೀ ಸಾಧುವೆಂದರಿವಂ
ಜಗದೊಳೊಗೆದವರೆಲ್ಲ ಹೆಮ್ಮಕ್ಕಳೆಂದು ?
ನನ್ನ ಹೃದಯೇಶ ಜಗದೀಶನವನೊರುವಂ
ಶ್ರೀಕೃಷ್ಣನೈಸೆ ಭುವನಕೆ ಗಂಡಸೊಂದು ? 12

ರಾಧೆ ಯಾರೆಂಬುದಂ ಗೋಸಾಯಿ ಮರೆವಂ—
ರಾಧೆಯಹ ಮುನ್ನಮೇಂ ಗಿರಿಧಾರಿ ದೊರೆವಂ ?'

---

11 ಅಚ್ಚುರ (ಅಕ್ಷರ)=ನಾಶವಾಗದ

1 ಚೈತನ್ಯದೇವನ ಪ್ರಖ್ಯಾತನೊಬ್ಬ ಶಿಷ್ಯ.

# ಸಫಲ

‘ ನಮ್ಮ ಸೊಡರನುರಿಸುವಿರೇಂ
ಮಿಣುಕಲಿಂತು ಬರಿಯೆ ?
ಪರರ ಬೆಳಕನಳುಪುವಿರೇಂ ?
ಸುಡದೆ ನಿಮ್ಮ ಗರಿಯೆ ? ’—
ಜಂಕಿಸಿತಿಂತುಡು ಸಂಕುಳ
ಹೊಂಚುವ ಮಿಂಚುಹುಳಂಗಳ
ಬೇಸಗೆ ಕೊನೆವರಿಯೆ.

‘ ಕುರುಡಾದಿರೆ ಬೆಳಕಿನಿಂದ ?
ನಿಮ್ಮ ಬೆಳಕಿದಲ್ಲ;
ನಿಮಗೆತ್ತಣಿನತ್ತಣಿಂದ
ನಮಗಿದು ಬಂತಲ್ಲ ?
ಹಿರಿದು ಕಿರಿದು ಬೆಳಕಿಗಿಲ್ಲ,
ಪರರ ಬೆಳಕು ತನಗೆ ಸಲ್ಲ—
ಬೆಳಕು ಸಫಲವೆಲ್ಲ ’

‘ ಹಾಡುವಿರೇನೆಮ್ಮ ಹಾಡ
ಕಿರಿಚಲಿಂತು ಬರಿಯೆ ?
ಹಿರಿಯ ಮರುಳು ಕೊಳದೆ ಸೇಡ
ಕಿರಿಯ ಗರಿಯ ಬಿರಿಯೆ ? ’—
ಜರೆದುದಿಂತು ತೆರೆಯ ದಳಂ
ಪಲ್ಲವಿಸುವ ಝಿಲ್ಲಿಗಳಂ
ಮೊದಲ ಮುಗಿಲ್ಗರೆಯೆ.

‘ ಕಿವುಡಾದಿರೆ ಹಾಡಿನಿಂದ ?
ನಿಮ್ಮ ಹಾಡಿದಲ್ಲ;
ನಿಮಗೆತ್ತಣಿನತ್ತಣಿಂದ
ನಮಗಿದು ಬಂತಲ್ಲ ?

ಹಿರಿದು ಕಿರಿದು ಹಾಡಿಗಿಲ್ಲ,
ಪರರ ಹಾಡು ತನಗೆ ಸಲ್ಲ—
ಹಾಡು ಸಫಲವೆಲ್ಲ.

ಮಿಂಚಿನ ಮರಿ ಮುಂಚಿ ಮೆರಸೆ
ಹೃದಯ ಶಿಖಿಯ ಹೊನ್ನ,
ಗುಡುಗಿನ ಮಗು ಮುಡುಗಿ ಮೊರಸೆ
ಕಿನ್ನರಿಗರಿಯನ್ನ,
ಹತ್ತೆ ಹತ್ತೆಯುರುಳೆ ಮೊಳಗು,
ಸುತ್ತು ಸುತ್ತು ಕುರುಳೆ ತೊಳಗು,
ಬೆಳೆಯಿತು ಮಳೆ ಮುನ್ನ

[1]ಆಟಿಯ ನಟ್ಟಿರುಳೊಳಂದು
ಬೀಸುವ ಮಳೆಯಲ್ಲಿ,
ಬಾನವೆ ತಾನೊಂಟಿಯೆಂದು
ನಡಗುವಡಗುವಲ್ಲಿ;
ತೂಕಡಿಸುವ ಬೆಟ್ಟದಲ್ಲಿ,
ಆಕಳಿಸುವ ತೊಟ್ಟಿಯಲ್ಲಿ,
ಮೇಕೆದಾರಿಯಲ್ಲಿ,

ಪಥಿಕನೊಬ್ಬನೂರಿ ಮುಟ್ಟಿ
ಮುಟ್ಟಿ ಮೆಟ್ಟಿ ನಡೆಯೆ,
ಎದೆಯ ಬೆಪ್ಪು ಕಿವಿಯ ತಟ್ಟಿ,
ಜತೆಯ ನೆರಳೆ ಕೆಡೆಯೆ—
ಮಿತ್ರನೊಂದು ತಾರೆಯಿಲ್ಲ,
ಭೋರೆಂಬ ತರಂಗವಿಲ್ಲ—
ಉಸುರಿಗೆ ಸಿಡಿಮಿಡಿಯೆ;

1 ಆಷಾಢಮಾಸ

ಮಿಂಚುಹುಳವ ಕಂಡನೆಂತು,
ಝಿಲ್ಲಿಯು ಗಾನವಂ
ಕೇಳ್ದನೆಂತು, ಮೂಡಿತಂತು
ಕಂತಿದೆಳವೆ ನವಂ—
ಕಂಗೆ ಸುಳಿಯುಲಿಳೆಯ ಸೊಂಪು,
ಕಿವಿಗೆ ನುಸುಳೆ ಹಸುಳೆಯಿಂಪು,
ಪಥವ ಹಿಡಿದನವಂ 56

---

## ಮಹಾಕವಿ ಕುಮಾರವ್ಯಾಸನಿಗೆ

ಶ್ರೀಮದಮಲ ವಚಃಪರಿಧಿಯಾ
ದೀ ಮಹಾಕೃತಿಯಿಂದೊಲವು ಮಿಗೆ
ವ್ಯೋಮದಲಿ ವಿಧು ವೇಡಿಸಿದ ಪರಿವೇಷದಿಂದೆರೆವ ।
ಕೌಮುದಿಯೊಲೀ ಕನ್ನಡದೊಳಾ
ಸೀಮವೆನೆ ನೆಲಸಿಹುದಿದಂ ನೆಗ
ಳ್ದಾ ಮಹಾಕವಿ ನಿನಗೆ ಕವಿಗಳ ಕವಿಯೆ ವಂದಿಸುವೆ ॥ ೧ ॥

ಮೊದಲ ಮಗನಾ ಶುಕನು ಭಾಗವ
ತದ ಪುರಾಣದೊಳದ್ದಿ ಕುರುಕುಲ
ಕದನದೀ ಕಥೆಯೊರೆದನಿಲ್ಲಕಟೆಂದು ಮನಮರುಗಿ ।
ಪದೆಯುಲನ್ಯ ಕುಮಾರನನು ವೇ
ದದ ಮಹಾಮುನಿ ಕನ್ನಡದ ಶಾ
ರದೆಯೆ ಕನ್ನಡವಕ್ಕಿಯೊಲು ಬೆಸಲಾದಳಲೆ ನಿನ್ನ ? ॥ ೨ ॥

‘ ಅಂದು ಕಂಡುದ ಕಾಣಿಸಿದೆ, ಬಳಿ
ಸಂದ ಕಬ್ಬಿಗರವರ ದೇಸಿಯು
ಚಂದದಿಂ ಕೇಳಿಸಿದರಲ್ಲದೆ ಕಾಣಿಸಿದರುಂಟೆ ?’ ।
ಎಂದು ಲೋಕಕೆ ಭಾರತವ ಕಂ
ಡಂದದಿಂ ಕಾಣಿಸಲು ನಿನಗಣು
ಗಿಂದ ಸಂಜಯಗಿತ್ತ ದೃಷ್ಟಿಯು ನೀಡಿದನೆ ಮುನಿಪ ? ॥ ೩ ॥

ಈಕ್ಷಿಸದೆ ಭಕ್ತಿಪ್ರಭೆಯು ವಿರ
ಜಾಕ್ಷಿಯಿಂ [1]ಕ್ರತುಪುರದೊಡೆಯುನನ
ಧೋಕ್ಷಜನ ನೀ ವಿಶ್ವಕವಿಗವಗೆಂತು ಲಿಪಿಗಾರ ? ।
ಅಕ್ಷಯಂ ತವ ಕಂಠಮದು ! ವ್ಯಾ
ಚಕ್ಷಣಮಿದಾತನದೊ ? ನಿನ್ನದೊ ?
ಸಾಕ್ಷಿಯೆಮಗಿದು ವೀರನಾರಾಯಣನ ದರುಶನದ ! ॥ ೪ ॥

ನಿನ್ನ ಹಿಂಗಬ್ಬಿಗರಿಗೂಡಿದ
ಕನ್ನಡದ ನುಡಿವೆಣ್ಣ ಮೊಲೆ ನಿನ
ಗಿನ್ನು ಸಾಲದೆನುತ್ತ ವಿಧಿ ಮುಂಬಗೆದು ನಿನ್ನುದಯಂ ।
ಚನ್ನೆಯಿವಳಿಗೆ ಮೂರನೆಯ ಮೊಲೆ
ಯನ್ನವಾಯಿಸಲದರಿನೊದವಿದ
ಬಿನ್ನಣಮಿದೇಂ ನಿನ್ನ ನುಡಿಯು ನವೀನ ನಿವಡಿಕೆಗೆ ? ॥ ೫ ॥

ಕಾವ್ಯಮಿದೊ ಜೀವಂತರಾ ಕಾ
ರವ್ಯರನುಗಂತವ್ಯಮಿದೊ ? ಸು
ಶ್ರಾವ್ಯ ಪುಣ್ಯ ಚರಿತ್ರೆಯಿದೊ ಭಾರತದ ಯಾತ್ರೆಯಿದೊ ? ।
ಭವ್ಯರಿವರಾರಲ್ಲ ? ಬಹುವಂ
ತವ್ಯರಿವರೊಡನೆಮಗೆ ಕೆಳೆ ಕ
ರ್ತವ್ಯಮೆನಿಸುವುದವರವರ ಬಾಂಧವ್ಯಕೆದೆಸಿಲುಕಿ ॥ ೬ ॥

ರವಿಯು ಸಪ್ತಾಶ್ವಗಳ ಸಪ್ತ
ಚ್ಛವಿಯು ಸೇರುವೆ ಬಿಳಿಗಲೆತು ಲೋ
ಕವನು ಧವಳಿಸುವಂತೆ, ಕವನದಿ ನಿನ್ನ ಸವನಿಸಿದ ।
ನವರಸದ ಸಂಯುಕ್ತಿಯುದೊ ಮಾ
ಧವನ ನವವಿಧ ಭಕ್ತಿಯುದೊ ಮನ
ದೆವೆದೆರಸಿ ಪುಳುಕಿಸುತಿದೆ ಸುಧಾಂಬುಧಿಯ ಮಧುರಿಮೆಗೆ! ॥ ೭ ॥

೧ ಕ್ರತುಪುರ ಎಂದರೆ ಧಾರವಾಡ ಜಿಲ್ಲೆಯಲ್ಲಿರುವ ಗದಗು.

ಪ್ರಕಟಿಸಿದೆ ನೀನೈಹಿಕಾಮು
ಷ್ಮಿಕದ ನಡು ಪರುರವಿಸಿದೊಖ್ಖಾ
ಣಿಕೆಯು ಸೇತುವೊಲಿದರ ನುಡಿಗಟ್ಟಿನ ಸಗಾಧಿಕೆಯು ।
ಅಕುಟಿಲದ ಸೊಬಗೆಮುಗೆ ಬಗೆಗಾ
ಣಿಕೆಯು ಪಯಣದಿ ಸಂದಿಸುವ ನ
ನ್ನಿಕೆಯಿವರುಹವೆ ಸತ್ಯಸೌಂದರ್ಯಗಳನನ್ಯತೆಯು ? ॥ ೮ ॥

ನಿಡುಗತೆಯೊ ಬಾನೆಡೆಯೊ ? ಬೆಡಗಿನ
ನುಡಿಯು ರೀವಿಯೊ ಗುಡುಗೊ ? ಬಣ್ಣದ
ಮಿಡುಕೊ ಮಿಸುಕುವ ಮಿಂಚೊ ? ಕವಿತಾರಸವೊ ತನಿಮಳೆಯೊ? ।
ತಡಿಯು ಹರಿವರ್ಥ ಪ್ರವಾಹವೊ ?
ಮಡಲ್ವ ನಿರತೆಯೊ ಹಸುರ ನೆರತೆಯೊ ?
ನಡೆನಲಿವ ಮನ್ಮನವೊ ಸೋಗೆಯೊ ನಿನ್ನ ಕಾವ್ಯದಲಿ ? ॥ ೯ ॥

ಹೊತ್ತಿಸುತ ಸುರಿಮುಗಿಲ ಹಗಲಲಿ
ಬತ್ತಿಯೆಯ್ದುರ ಸೊಡರ, ಸಯ್ಪಿದೆ
ಯೊತ್ತ ಕೇಳುತ ಲೇಸ ಸಂಚಿಸೆ ನೆರೆದರಿಗೆ ನಿನ್ನ ।
ಹೊತ್ತಗೆಯು ಹಾಡುವಿನಮರ್ಥವ
ಬಿತ್ತರಿಸುವಿನಮಳ್ತಿಯಲಿ ಕಿವಿ
ಯಿತ್ತು ಕೇಳ್ದುದನೆನಗೆ ಕೇಳಿಪುದಿನ್ನೆಳೆಯ ನೆನವು ! ॥ ೧೦ ॥

ಪಂಪನಲಿ ಬನವಾಸಿದೇಶದ
ಸೊಂಪ, ರನ್ನನೊಳಾ ಚಳುಕ್ಯರ
ಲಂಪ, ಲಕ್ಷ್ಮೀಶನಲಿ ಪಂಪೆಯನಾಳ್ದವರ ಪೆಂಪ ।
ಆಂಪಡೇನಿನ್ನಖಿಲ ಕನ್ನಡ
ದಿಂಪು ನಿನ್ನಯ ಭಾರತದಿ, ವೈ
ಯ್ಯಂ ಪಡೆವೊಲೇಂ ನೆಳಲನಿಕ್ಕಿತೆ ಬೇರೆ ಭಾರತವಿ ? ॥ ೧೧ ॥

ಸಕ್ಕದದ ಭಾರತದಿ ಕೊಳುಗುಳ
ದೆಕ್ಕತುಳದೊಳೆ ಭೇರಿ ಮೊಳಗುವೊ
ಡಕ್ಕಗವಿದೇಂ ನಿನ್ನ ಕಟ್ಟದಿ ತುದಿಮೊದಲ್ವರೆಗೆ ।

ಧಕ್ಕಡದ ಕನ್ನಡದ ರವಣೆಯೊ ?
ಸೊಕ್ಕು ಭಟರುರವಣೆಯು ಧವಣೆಯೊ ?
ಮಿಕ್ಕ ಕವಿಗಳ ಕುಣಿಸಿ ನಗುವೀ ಹೊಸ ಬಜಾವಣೆಯೊ? ॥ ೧೨ ॥

ಕನ್ನಡದ ನುಡಿದೇಗುಲದಿ ಸಂ
ಪನ್ನಮಿಹ ಶ್ರೀಕೃಷ್ಣಮೂರುತಿ
ಯನ್ನಿರೀಕ್ಷಿಸುವೊಡನೆ ಲಕ್ಷ್ಮೀಶನದು ನಿನ್ನದಿವು ।
ನನ್ನ ಕಣ್ಮನದಿಂದ ಭಕ್ತಿಯು
ಜಾನ್ಹವಿಯು ಸರಿವರಿಸಲಿವರೊಳ
ಗಿನ್ನರಿಯೆ ಮಿಗಿಲಾತನೆರಕವೊ ನಿನ್ನ ಕೆತ್ತಿಗೆಯೊ ? ॥ ೧೩ ॥

ಕುರುಪತಿಯು ಮರಣಾಂತ ಛಲದಲಿ
ಮೆರುಳನಹ ಕವಿ ರನ್ನನವನಲಿ
ಮರಸಿದೊಲು ತನ್ನಯ ಕಥಾನಾಯಕನನನಿಲಜನ ।
ಇರದೆ ಕರ್ಣನ ಜೋಳವಾಳಿಯೊ
ನಿರತಿಶಯ ಚಾಗವೊ ಮನಂಬುಗೆ,
ಮರೆತಡೇಂ ನೀ ನರನನಂದಂದಿನನ ತನಯನಲಿ ? ॥ ೧೪ ॥

ಕಾಳುಗೆಡೆವರೆ ನಿನ್ನ ಕೃಷ್ಣೆಯು
ನೇಳಿಸದೆ ಗಂಡುಡುಗಿದಾ ಗಂ
ಡಾಳುಗಳ ತೆರವುಂಟೆ ಧರುಮದ ಬಾಳ್ಗೆ ? ಕುರುಕುಲದ ।
ಕಾಳರಾತ್ರಿಯೆ ? ಇರುಳಿನಲ್ಲದೆ
ನಾಳೆ ಮೂಡಿತೆ ? ಶಿಖಿಜೆ ಗಡ ಪಾಂ
ಚಾಳಿ ಗಿರಿಜೆಯೊಲರ್ಧನಾರಿ ರಣಾಗ್ರ ಸಹಕಾರಿ ! ॥ ೧೫ ॥

ಸಹಜವೇನ್ನುಡಿದಡೆ ತುರಾರಿಸಿ
ಯುಹಿತರಾ ಕೌರವರು ನಿನಗೆಂ
ದಹಹ ಧರ್ಮದ ಪಕ್ಷಪಾತವನಾವ ಗುಣೆಯೊಲ್ಲ ? ।
ಕುಹಕಿಗಳ ಕೌಳಿಕವ ಹಳಿದೊಡೆ,
ಸಹಸದಲಿ ಪಗೆಯುಂಟೆ ? ಬೇವಿನ
ಕಹಿಂಗು ಕಯ್ಪೆನೆ ಗುಣಕೆ ಕಯ್ಪೆಯೆ ? ಗುಣಕೆ
ಮತ್ಸರವೆ ? ॥ ೧೬ ॥

ಅರಿಯೆವಣಮಿನ್ನಕಟ ನಿನ್ನನು
ಕುರಿತ ಹದನವನೇಂ ವಶಿಷ್ಠನ
ಮರೆಯರುಂಧತಿಯಂತೆ ಕಾವ್ಯವೆ ನಿನ್ನ ಮರಸಿದುದೆ ? ।
ಕಿರಿದೆನಡೆ ಕಂಡಗೆ ಚಿರಾಯುವ
ನೊರೆವರಂತೆಮಗವಟಯಿಸಿ ತವ
ಚರಿತವಂ ಪೊರೆಯಳೆ ಚರಿತ್ರವಿಧಾತ್ರಿ ಕನ್ನಡವ ? ॥ ೧೭ ॥

ಯಾವ ರಾಯನ ನಾಡೊಳಿರ್ದೆಯೊ,
ಯಾವ ಕಾಲದಿ ಬಾಳಿದೆಯೊ, ಮ
ತ್ತಾವ ಕಾವ್ಯವ ರಚಿಸಿದೆಯೊ ನೀನೊಬ್ಬನದನರಿವೆ, ।
ಏವರಂ ಭಾರತದ ಕೇಳಿಕೆ
ಯೇವರಂ ಕನ್ನಡದ ಬಾಳಿಕೆ
ಯಾವರಂ ನೀ ಬಾಳ್ದೆಯೆಂದಿದನೊಬ್ಬ ನೀನರಿಯೆ ॥ ೧೮ ॥

ಅರಸರೊಲಿದೇಂ ನಿನಗೆ ಕಾರ್ತ
ಸ್ವರದ ಕಂಕಣ ತೊಡಸಿದರೆ ನಾ
ನರಿಯೆ, ನಿನಗಿಂದೊಂದೆ ಸತ್ತಿಗೆಯಾಗಿ ಕನ್ನಡದ ।
ಸರಸರಿದೊ ನಿನ್ನನು ಯಶೋವಿ
ಷ್ಟರದಿ ಕುಳ್ಳಿರಿಪಂದು ನಿನ್ನಡಿ
ಗೆರಗುತೀ ಹುಲು ಪದ್ಯದಂದುಗೆ ಚಾಚುತಿಂತೆರೆವೆ— ॥ ೧೯ ॥

ಬಚ್ಚಿದಳೆ ಕನ್ನಡದ ಭಾರತಿ ?
ಮುಚ್ಚುವಳೆ ಮಧುಮಧುರ ಕಂಠವ
ನೆಚ್ಚರಿಸಳೇನಚ್ಚರಿಯ ಕನ್ನಡದ ಕಚ್ಛಪಿಯ ? ।
ಬೆಚ್ಚಿದಿಂತೆಮಗಳಿಯದೆಮ ನ
ಮ್ಮಚ್ಚಕನ್ನಡವೆಂದು ನಚ್ಚಿಸ
ಲುಚ್ಚ ಕವಿಗಳ ತವರೊಳವತರಿಸಾತ್ಮದೀಧಿತಿಯ ! ॥ ೨೦ ॥

ಮಂಗಳಂ ನಿನ್ನೊರೆದ ಕಬ್ಬಕೆ,
ಮಂಗಳಂ ಕಿವಿಮನದ ಹಬ್ಬಕೆ,
ಮಂಗಳಂ ಕನ್ನಡದ ಭಾಮಿನಿ ಮನದಿನಿಯ ನಿನಗೆ ।
ಮಂಗಳಂ ನಿನ್ನಮರ ಮೂರ್ತಿಗೆ,
ಮಂಗಳಂ ನಿನ್ನಜರ ಕೀರ್ತಿಗೆ,
ಮಂಗಳಂ ನಿನಗೊಲಿದ ಗದುಗಿನ ವೀರ ನರಯಣಗೆ || ೨೧ ||

---

## 'ಸುಮ್ಮನೇಕೆನ್ನನೆಲೆ ವಿಧಿಯೆ ಕಾಡಿಸುವೆ?'

ಸುಮ್ಮನೇಕೆನ್ನನೆಲೆ ವಿಧಿಯೆ ಕಾಡಿಸುವೆ? —
ಬೇಡಿದುದ ಕೊಡೆ, ಬೇಡದುದನಾಯ್ದು ಕೊಡುವೆ!
ಆರದುದನಾಪೆನೆಂದೇಕೆ ತಡಬಡುವೆ?
ಕೇಳುವೊಡನೀವೆನೆಂದೇಕೆ ಬೇಡಿಸುವೆ?

ಆದೊಡಂ ಕೇಳೆನಗೆ ನಿನ್ನಿಂದು ಬೇಡ—
ಅವಳನೆನ್ನಿಂದೊಯಿದ ಇಂದೆನಗೆ ಬೇಕೆ?
ಇನ್ನವಳ ಕಾಣಿಸದ ನಾಳೆಯುಕಟೇಕೆ?
ಅವಳಿದ್ದ ನಿನ್ನೆ ಸಾಕೆನಗದಂ ನೀಡ!

[1]ಇಂದಿನಳುವೆಯು ನುಗ್ಗುತಿದೆ ನಾಳೆಯುತ್ತಂ
ಸುಖದಿ ಹೊರವೊಗಗೊಂಡು ಹರಿಯಲದು ನೇರೆ,
ಅಳಲೊಳಿಳಿಮೊಗಮಾಗಲಾಸೆ ಮರಳುತ್ತಂ
ಹಾಯ್ವುದಿಂದನು ನಿನ್ನೆಗಳ ಕಡಲ ಸೇರೆ.

ಆದುದರಿನಾಪಡಿದೊ ಹಿಂದಿರುಗಿಸೆನ್ನ,
ನಿನ್ನೆಗಯ್ದಿಸು — ಬೇರೆ ನಾನೆರೆಯೆ ನಿನ್ನ

---

1 ಅಳುವೆ=ಹೊಳೆ ಕಡಲನ್ನು ಸೇರುವ ಬಾಯಿ (bar)

## ‘ಬಲ್ಲುದೆ ಲತೆ ಫಲಂ ತನ್ನ’

ಬಲ್ಲುದೆ ಲತೆ ಫಲಂ ತನ್ನ
ಸಿಹಿಯೊ ಕಹಿಯೊ ಎಂಬುದನ್ನ ?
ಒಗೆದಂತೊದಗಿಸಲು ಬನ್ನ
ಮೇನೊ ? ಬಳ್ಳಿಯಾ
ಹಲವೊ ಕೆಲವೊ ಸವಿದು ಹಣ್ಣ,
ಸಿಹಿಯಾದಡೆ ಕೊಳುವುದುಣ್ಣ
ಕಹಿಯಾದಡೆ ಕಳೆವುದಣ್ಣ
ಲತೆಯ ತಳ್ಳಿಯಾ

ಪ್ರಕೃತಿವಶಮೆ ಫಲಿಸ ಬಲ್ಲ
ಲತೆಗೆ ರುಚಿಯ ಗೊಡವೆ ಸಲ್ಲ—
ರುಚಿಯರಿಯದೆ ಸಸ್ಯಮೆಲ್ಲ
ಫಲಿಸಲಾರವೆ ?
ರುಚಿಯೊ ? ರಸಿಕರೊಡವೆ ! ಮುನ್ನ
ಸವಿದೆ ಪೊಗಳಿ ತೆಗಳಿದನ್ನ,
ಸವಿದೊಲ್ಲಡೆ ಲತೆಗೆ ತನ್ನ
ಫಲಂ ಭಾರವೆ ?

ತಾನೆ ತನ್ನ ಫಲಮನುಂಬ
ಬಳ್ಳಿ ಫಲಿಸಲುಂಟೆ ? ಕೊಂಬ
ರಿಲ್ಲದಂತೆನಿತೊ ಫಲಂ ಬ
ಳುಂಕಲಡಿಯಲಿ,
ಬಗೆಯ ಬಳ್ಳಿಗದುವೆ ಗೊಬ್ಬ
ರಾಗದೆ ? ಮರುವೆಳಸು ಕೊಬ್ಬ
ದಿಹುದೆ ? ಹೊಸತೆ ಬಳ್ಳಿ ಹಬ್ಬ
ವೆನಿತೊ ಮುಡಿಯಲಿ ?

ಇಂದಿಗರಿದನೊಲ್ಲಡೆಂದೊ
ಬರುವರಾರೊ ಸವಿವರೆಂದೊ
ಕಾವ ಲತೆಯೊಳಾವ ಕುಂದೊ ?
ನಾಳೆಯು ನಂಬೆ,
ಇಂದಿನೇಕೆ ವ್ಯಥಾ ತಂಟೆ ?
ನಂಬಿಕೆ ಬರಡಾಗಲುಂಟೆ ?
ಬರಿಯ ನಿರಾಶೆಗೆ ಮುರುಂಟೆ
ಫಲಿಸುವ ಹಂಬೆ ?

ಮುಂಬಿಗರಿದನಂತೆ ನೂಕೆ,
ಬಳ್ಳಿ ಬರಿದೆ ಕೊರಗಲೇಕೆ ?
ಹೆತ್ತಳೈಸೆ ಫಲಮನಾಕೆ
ಕಡು ಸಾಜತೆಗೆ ?
ಯಾರೊಲ್ಲಡೆ ಗಾಳಿ ಬೀಸೆ
ತನ್ನುದುರಿದ ಫಲದ ಸೇಸೆ
ಭೂಮಾತೆಯ ಮುಡಿಗೆ ಸೂಸೆ
ಸಾಲದೆ ಲತೆಗೆ ?

ಅಥವಾ ಪೊಗಳಿಕೆಗೆ ಹಿಗ್ಗ
ಲೊಲ್ಲಡೆ, ತೆಗಳಿಕೆಗೆ ಕುಗ್ಗ
ಲಾರಡೆ, ಲತೆ ಫಲಕೆ ಸಿಗ್ಗ
ಲೇಕೆ ? ಕಾಲದೆ
ಫಲಿಸುವಂತೆ ಫಲಿಸಿ ಹೆಚ್ಚಿ —
ಕೊಳುವುದುಳಿವುದನ್ಯರಿಚ್ಛೆ —
ತನ್ನ ಗೆಯ್ಮೆ ಗೆಯ್ದು ನಚ್ಚಿ
ಲತೆಗೆ ಸಾಲದೆ ?

ಮೆಚ್ಚಿಸದೊಡಿದಾರನೆಂದಿ
ಗೀ ಲತೆಗೀ ಫಲಮನೊಂದಿ

ಸಿದ ಸೃಷ್ಟಿಯು ಕರ್ಮಬಂಧಿ
ಗಿದೇನೊಪ್ಪದೆ ?
ಲತೆಯಿದನನ್ಯಥಾ ಫಲಿಸೆ,
ಫಲಮಿದನನ್ಯಥಾ ಮೊಲಿಸೆ—
ಪ್ರಕೃತಿಯುನನ್ಯಥಾ ಸಲಿಸೆ
ಅವನಿಗಪ್ಪುದೆ ?

---

## ‘ಜೀವನದೀ ಮಧುಮಾಸಂ’

ಜೀವನದೀ ಮಧುಮಾಸಂ
ಬತ್ತುತ ಬಂತು,
ಮನಸಿನ ಮಧುರವಿಕಾಸಂ
ನನೆಯೊಳೆ ಸಂತು;
ಮುಸುರಿದ ಮಕರಂದಪಾನ
ಮೊದವದೆದೆಯು ಭ್ರಮರಗಾನ
ಮೆಚ್ಚರಲೆಂತು ?

ಮನೆಗೆಯ್ದುಕ್ಕರೆಯು ಪಿಕಂ
ಪಾರಿದುದೆಲ್ಲಿ ?
ಗೂಡುಗೊಂಡ ಹಿಂಡು ಶುಕಂ
ಕಾಣಿಸವಿಲ್ಲಿ !
ಅಳಲ ಕಣಜವಿನ್ನು ಸಾಗೆ,
ಹಗಲುದ್ದಕೆ ಮರುಗೆ ಗೂಗೆ,
ಚೀರ್ವುದು ಹಲ್ಲಿ

ನಡುಚೈತ್ರದಿ ಮಸಗೆ ಗ್ರೀಷ್ಮ,
ಬೇಯದೆ ಮನಸು ?

ಮುಗಚದೆ ಮೃಗಜಲದೊಳೂಷ್ಮ
   ಕಡಸಿದ ಕನಸು ?
[1]ಪಾತೆಯೆಲರ [2]ಪಾತಿಯಿಲ್ಲ,
ತರಗೆಲೆಗಳ [3]ಬಟ್ಟೆಯೊಲ್ಲ
   ಡೇವುದೊ ನೆನಸು ?

ತೆರೆಯಿಲ್ಲದ ಕಡಲೊಳಿಲ್ಲಿ
   ದಾವ ದಾವರಂ ?
ಮುರಳಿಲ್ಲದ ಮುರುವೊಳಲ್ಲಿ[4]
   ಕಾವ ಕಾವರಂ !
ಮುಗಿಲಲಿ ರವಿಶಶಿಯು ಕೀಸೆ
ಪಿಡಿವ ಕಿಡಿಯೊ ಕೆಲವೊ ಸೂಸೆ
   ಪೀವ ಪೀವರಂ ?

ಬೇಗೆ ಮುಸುಕಲಿಂತು ಶಾನೆ
   ದೂರವೆ ವೃಷ್ಟಿ ?
ತಂಬನಿಗಿಂಬಾಗೆ ತಾನೆ
   ವೊಳೆಯುದೆ ಸೃಷ್ಟಿ ?
ಹಸುರು ಹಗಲು ಹೊರಳೆ, ಹೊಂಚು
ಹಾಕದೆ ನೂರಾರು ಮಿಂಚು
   ಹುಳಗಳ ದೃಷ್ಟಿ ?

ಒಮ್ಮೆ ಮುಗಿಯಲದೆ ವಸಂತ
   ವಿನ್ನಹುದಳವ ?
ಒಮ್ಮೆ ಮುಗಿದ ತನುವನಂತ
   ರಂ ನಮಗೊಳವೆ ?
ಸುಗ್ಗಿ ಮುಗಿದೆ ಮುಳೆಯುಲ್ಲವೆ ?
ತನು ಮುಗಿದಡೆ ಕೆಳೆಯಿಲ್ಲವೆ ? —
   ಕೆಳೆಗೇನಳಿವೆ ?

---

1 ಪಾತರಗಿತ್ತಿ   2 ಪಾತಿ=ದೋಣಿ   3 ದಾರಿ   4 ಅಲ್ಲಿ=ಆಕಾಶವಲ್ಲಿ

# ಬರ್ದಿಲ

ಅಂದಿನ ಹೂಗಳಿಲ್ಲ, ನಲಿವಕ್ಕಿಗಳಿಲ್ಲ, ಕೊಳಂಗಳಿಲ್ಲ, ತಂ
[1]ಗಾನಗಳಿಲ್ಲ—ಧಾರಿಣಿ ತನತ್ತುರೆ ಗೆತ್ತಣಮಿಲ್ಲವಿಂದಿಗೆ!
ಕಬ್ಬದೊಳಾದೊಡಂದಿಗೊಗೆತಂದೊಲೆ ನಿಂದಿಹವಿಂದಿಗೆಂದಿಗುಂ—
ಬರ್ದಿನ ವಾರ್ಧಿಯಿಂದೊಸರ್ದವುರ್ದೆನೆ ಕಬ್ಬಮುದೊಂದೆ ಬರ್ದಿಲಂ.

ಯಾವೆನಿತೆಲ್ಲ ರಾಜ್ಯವಳಿವೋದುದೊ? ಮಂದಿಯೆ ಕುಂದಿ ಮಾದುದೊ?
ವೀರರ ಕೀರ್ತಿ ನೆತ್ತರೊಳಗಾಳ್ದುದೊ? ಮೂವಿಡಿ ಬೂದಿ ತೂಳ್ದುದೊ?
ತಾನಿದು ತನ್ನದೆಂದವರು ಸಂದರೆ? ಎಂಬವರಿನ್ನು ಕಾಂಬರೆ?—
ಬಂದೊಲೆ ಪೋಪರೆಲ್ಲ; ಬಲುಗಬ್ಬಿಗನೊಬ್ಬನೆ ಬಾಳ್ವ ಬರ್ದಿಲಂ.

ಉಷೆಗೆರವಿತ್ತ ಮುಂಬೆಳಕು ಸಂಜೆಗೆ ನೇಸರನಯ್ದುವಂತೆ ಶ್ರೀ
ರಘುವರನಯ್ದೆ, ಕೊಂಚೆಯೆಣೆಯಾಣ್ಗೆ ಹಲುಂಬಿದನುಷ್ಟುಭಶ್ರುವಿಂ
ದಿಳೆಗಿಳಿತಂದ ಪಾಲ್ಗಡಲೊಳಾತನ ಬರ್ದಿಲ ಕಾದ ಬರ್ದಿಲಂ
ಕವಿಯೆನಲಾರ್ತರುಂಟೆ ಕವಿಯಲ್ಲದೆ ಕೊಳ್ಕೊಡಲಿಂತು ಬರ್ದಿಲಂ?

ಕಬ್ಬದೊಳಿಂತು ಕಬ್ಬಿಗನ ಬರ್ದಿಲನೀಕ್ಷಿಸಿ, ವಿಶ್ವಕಾವ್ಯಮಂ
ದಂದಿಗೆ ಸೋಸುವೀ ನೆವದೊಳಾದನೆ ಕಾಲನನಿತ್ತೆ ಬರ್ದಿಲಂ?

---

## ಜಯ ಜಯಾ!

ರಾಗ ನವರಸಕನ್ನಡ ರೂಪಕತಾಳ
('ನಿನುವಿನಾ ನಾಮದೇಂದು' ಎಂಬ ತ್ಯಾಗರಾಜ ಕೃತಿಯಾತೆ)

ಜಯಜಯಾ ನಮ್ಮೊಡೆಯಾ!
ಜಗದೊಡೆಯಾ ಜಯಜಯಾ! ॥ ಪಲ್ಲ ॥
ಜಯಜಯ ಭಾರತದೊಡೆಯಾ!
ಬಡವರೊಡೆಯ ಜಯಜಯಾ! ॥ ಅನು ॥

1 ಕಾನ= ಕಾಡು

ಏನು ಚೆಲುವೊ ದೇವ ನಿನ್ನೀ
   ಭಾರತಮೂರ್ತಿ !
ತೆರೆಯು ಗೆಜ್ಜೆ, ಹಸುರ ಸೀರೆ,
ನದಿ ಸರ, ಹಿಮ ಮುಡಿಯ ಸ್ಫೂರ್ತಿ ! ॥ ೧ ॥

ತನುಮನದೀ ಸರ್ವಂಸಹೆ
   ಯುಶಾಂತಿ ನೋಡ !
ಪರತಂತ್ರರ ಗೋಳ ಕೇಳ—
ಸರ್ವತ್ರ ಸಿಡಿಲ್ವ ಮೋಡ ! ॥ ೨ ॥

ಮೂಡುವನೆಂದೀ ಭಾರತ
   ಭಾಗ್ಯ ಭಾಸ್ಕರಂ ?
ಮರಳುವುದೆಂದೆಮಗಗಲಿದ
ಸ್ವತಂತ್ರಮತಿಯುಶಸ್ಕರಂ ? ॥ ೩ ॥

ಪೂರ್ವಾಪರ ಪುಣ್ಯಸಂಗ
   ಮವಿಾ ಭಾರತಂ
ಕೂಗುವುದಿದೊ ನಿನ್ನನು ನೀ
ನಿನ್ನೆಂದಿಗೆ ಜಾಗರಿತಂ ? ॥ ೪ ॥

ನಮಗೀ ಪರತಂತ್ರತೆ ಹೊಲೆ
   ಗಲಸಿರಲಿಂತು,
ನಿನ್ನಯ ಸಂತಾನರೆಂತು ?
ಕಾದಪೆ ಮನುಜತೆಯನೆಂತು ? ॥ ೫ ॥

ನಿನ್ನ ಭಾರತಕೆ ಸ್ವರಾಜ್ಯ
   ತಾರದ ಮುನ್ನ,
ನಂಬಲೆಂತು ದೀನಜನಾ
ನನ್ಯಶರಣನೆಂದು ನಿನ್ನ ? ॥ ೬ ॥

ಎಂತೀ ಭಾರತಮನಂತೆ
ನಮ್ಮನುರಕ್ತಿ
ಜಗವೆಲ್ಲವನಕ್ಕರಿಪಂ
ತೀಯೆಮಗಸ್ವಾರ್ಥಶಕ್ತಿ ! ॥ ೭ ॥

ಧರೆಯೊಳೆಲ್ಲರವರವರ ಸ್ವ
ರಾಜ್ಯವ ನೀಡ—
ಸಮ ಸೌದರ್ಯದೊಳೆ ನೆಲಸಿ
ಮುಗಿಸಾಳೊಡೆಯೆಂಬ ಸೇಡ ! ॥ ೮ ॥

ಭಾರತದಲಿ ಸರ್ವಧರ್ಮ
ವೊಂದಲಿ ಸದನಂ,
ಮಾಣಿಸಲೀಕೆಯ ಸ್ವಸ್ತಿ
ಧ್ವಜಮಧರ್ಮದೊಳಕದಸಂ ! ॥ ೯ ॥

ನಿನ್ನೊಳಲ್ಲದೆರೆಯಲಿ ನ
ಮ್ಮಯ ಬಿಡುಗಡೆಯಾ ?
ನೀನದನೆಮ್ಮಿಂದ ದುಡಿಸ
ದರ್ಹರೆ ನಾವದಕೊಡೆಯಾ ? ॥ ೧೦ ॥

---

## ಕವಿ ಮತ್ತು ವಿಮರ್ಶಕ

ಬಿತ್ತರಿಸದೆ ತಾಂ ಕಾವ್ಯವ
ಗೊತ್ತರಿಯಲಳವ ಕವಿಯೆದೆಯುಂ? ಕವಿಯೆದೆಯುಂ !
ಗೆತ್ತಿರದ ವಿಮರ್ಶಕನೇಂ ?
ಹೆತ್ತರಿಯದ ಬಂಜೆ ಸೂಲಗಿತ್ತಿಯೆ ಜಗದಿ ? ॥ ೧ ॥

ಬೆಳಗುವೊಲರ್ಥದಿಂದ ನುಡಿ, ಕಾಣಿಕೆಯಿಂ ಬೆಳೆವಂತೆ ಲೋಚನಂ,
ತಳುವುವೊಲಿಂಚರಂ ಸ್ಫುರಣದಿಂ, ನದಿ ತಕ್ಕನಿಹಂತೆ ದಂಡೆಯಿಂ;
ಬೆಳಗಿ ಮನಕ್ಕೆ, ಕಂಗೆ ಬೆಳೆವುತ್ತ, ನೆನೆಂಬೊಲದಲ್ಲಿ ತಳ್ವಿ, ತ
ಕ್ಕಳಿಯದೆ ನಿಲ್ಗು ಕಬ್ಬಿಗನ ಮಾತು ವಿಮರ್ಶಕನಿತ್ತ ದೇಸಿಯಿಂ || ೨ ||

## ಉಂಟು

'ಎಲ್ಲಿಹವೊ, ಕಾಲ, ನೀನೆಲ್ಲಿಗವನವಿತೆ?
ಇಂತಿಳೆಯ ಬದುಕಿನೇತರ ಸರ್ವಗವತೆ?
ನಿನಗೆಟಕದೆಮಗುಳಿವುದೇನಾನುಮುಂಟೆ?'—
'ಉಂಟು, ಕವಿಗೊಳಕವಿಯಿನೊಗೆತಂದ ಕವಿತೆ' 4

## ಎಲ್ಲಿ?

ತನ್ನೊಲಶೇಷ ಜೀವಿಗಳನೋವುತ ನೋಯಿಸದಿರ್ಪರಾವಗಂ,
ಧರ್ಮಸಮಸ್ತದೊಳ್ ಸದೃಶನೀಶ್ವರನೆಂದರಿದಿರ್ಪರಾವಗಂ,
ತಾಯಿಳೆಗಾಗಿ ಬಾಳ್ತಳೆದು ಬಾಳ್ಗಳೆದುಂ ಬದುಕಿರ್ಪರಾವಗಂ—
ಬೆಳ್ಳಿಯ ಬೆಟ್ಟಮಿಂಗಡಲವೆಲ್ಲಿವರೆಲ್ಲಿಹರಲ್ಲಿಯಲ್ಲಡೆ? 4

# "ಉಮರ್ ಖಯ್ಯಾಮ್"

*This lyre of an elder language hath me stirred*
*To tempt thy thrill, O equivocal bird!*
*Whatever note in this is true, 'tis thine,*
*And, Omar, mine wherever I have slurred*

# "ಉಮರ್ ಖಯ್ಯಾಮ್"

ಕ್ರಿ. ಶ ೧೨ನೆಯ ಶತಕದಲ್ಲಿದ್ದ 'ಉಮರ್ ಖಯ್ಯಾಮ್' (Omar Khayyam)ಎಂಬೊಬ್ಬ ಪಾರಸೀಕ ಕವಿಯ 'ರುಬಾಯಿಯಾತ್' (Rubaiyat) ಎಂಬ ಲೋಕ ಪ್ರಿಯವಾದೊಂದು ಕವಿತೆ ಇದೆ. 'ರುಬಾಯಿಯಾತ್' ಎಂಬುದು 'ರುಬಾಯಿ' (Rubai) ಎಂಬ ಅರಬೀ ಶಬ್ದದ ಬಹುವಚನವು, 'ರುಬಾಯಿ' ಎಂದರೆ "ಕ—ಕ—ಖ—ಕ" ಎಂಬಂತೆ ಅಂತ್ಯಾಕ್ಷರ ಪ್ರಾಸವುಳ್ಳ ಒಂದು ಬಗೆಯ ಚೌಪದಿಯ ಹೆಸರಷ್ಟೆ; ಈ ಕವಿತೆ ಆ ಚೌಪದಿಯಲ್ಲಿ ರಚಿಸಲ್ಪಟ್ಟಿದೆ ಅದನ್ನು Fitzgerald ಎಂಬೊಬ್ಬ ಆಂಗ್ಲ ಕವಿ ನಾಲ್ಕು ಸಲವೇನೋ ಇಂಗ್ಲಿಷು ಭಾಷೆಯಲ್ಲಿ ಪರಿವರ್ತಿಸಿದನು. ಈ ಕನ್ನಡ ಅನುವಾದದಲ್ಲಿ ಆತನ ಆಂಗ್ಲ ಭಾಷಾಂತರದ ಪ್ರಥಮಾವೃತ್ತಿಯನ್ನು (ಕ್ರಿ ಶ. 1859) ಅನುವರ್ತಿಸಿ, ಅದರಲ್ಲಿಯ ೭೫ ಪದ್ಯಗಳ ಮೊತ್ತದಿಂದ ೫೦ನ್ನಷ್ಟೆ ಆಯ್ದು ಕನ್ನಡಿಸಿದೆ.

ಈ ಮನೋಹರವಾದ ಕವಿತೆಯಲ್ಲಿಯ ಹಲ ಮಾತುಗಳು ಅಸಭ್ಯವೆಂದು ತೋರಬಹುದು; ಆದರೆ ಹಾಗಲ್ಲ, ಅವು ಲಾಕ್ಷಣಿಕ ಪದಗಳಷ್ಟೆ. ಅವು ಕವಿಸಮಯಾನುಸಾರವಾಗಿ ವ್ಯಂಗ್ಯಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ; ಅವುಗಳ ಅರ್ಥವು ಹೀಗಿದೆ—

(೧) ಕಳ್ಳು, ಮದಿರೆ, ಮಧು, ದ್ರಾಕ್ಷೆ, ಇತ್ಯಾದಿ=ಪರಮಾತ್ಮನಲ್ಲಿ ಅನನ್ಯ ಭಕ್ತಿ, ಅಥವಾ ದಿವ್ಯಜ್ಞಾನ; (೨) ತಿಳಿ, ಬಿಂದಿಗೆ, ಕುಡಿಕೆ, ಕೊಡ, ಇತ್ಯಾದಿ=ಮನುಷ್ಯನ ಹೃದಯ; (೩) ಕಳ್ಳಂಗಡಿ=ದೇವರನ್ನು ಸಾಧಿಸಲಿಕ್ಕೆ ಬೇಕಾದ ಏಕಾಂತತೆ, ಅಥವಾ ದೇವರನ್ನು ಅನನ್ಯಭಾವದಿಂದ ಸಾಧಿಸುವವರ ಒಡನಾಟ; (೪) ಕೋಳಿ=ಮನಸ್ಸಾಕ್ಷಿ, ಅಥವಾ ಹೃದಯದ ಜಾಗೃತಿ; (೫) ಇನಿಯೆ, ಅರಸಿ, ಸಲ್ಲೆ, ಇತ್ಯಾದಿ=ಮಾರ್ಗದರ್ಶಕ, ಗುರು ಅಥವಾ ಸಹಕಾರಿ; (೬) ಮಧುಮಾಸ, ಸುಗ್ಗಿ=ಜೀವನ ಸಾರ್ಥಕ್ಯವನ್ನು ಮಾಡಿಕೊಳ್ಳತಕ್ಕ ಕಾಲ; (೭) ಕುಂಬಾರನ ಅಂಗಡಿ= ಈ ಜಗತ್ತು; (೮) ಮಣ್ಗೊಡಲು (ಮಣ್ಣಿನ ಪಾತ್ರ)=ಮನುಷ್ಯನೇ ಮೊದಲಾದ ಜೀವಿಗಳು; (೯) ಮತಿ (ಬುದ್ಧಿ) ಲೌಕಿಕ ಜ್ಞಾನವನ್ನು

ಕೊಡುತ್ತದೆ, ಕಳ್ಳು (ಎಂದರೆ ಭಕ್ತಿ) ದಿವ್ಯ ಜ್ಞಾನವನ್ನು ಕೊಡುತ್ತದೆ; (೧೦) ಕಳ್ಳಂಗಡಿಗೆ ಬಂದ ಯಕ್ಷನೆಂದರೆ ದೇವರನ್ನು ಸಾಧಿಸಿದ ಯಾವನೊಬ್ಬ ಜ್ಞಾನಿ; (೧೧) ದೇಗುಲ (ದೇವಾಲಯ)ವು ಮೂಢ ಮತ್ತು ಡಾಂಭಿಕ ಆಚಾರಗಳ ಆಶ್ರಯವೆಂಬುದರಿಂದ, ದೇವರು ಅಲ್ಲಿ ದೊರೆಯನು; ಆತನನ್ನು ತನ್ನ ಹೃದಯದ ಏಕಾಂತದ (ಕಳ್ಳಂಗಡಿಯ)ಲ್ಲಿ ತಾನೆ ಕಂಡುಕೊಳ್ಳಬೇಕು — ಇತ್ಯಾದಿ.

1. ಏಳು ! ಮುಂಬೆಳಗಿರುಳ ಬಟ್ಟಲಲಿ ಕಲ್ಲಂ
ಬಿಸುಡೆ ಪರಿದೋಡಿದುವು ತಾರಗೆಗಳೆಲ್ಲಂ;
ಅರಸನುಪ್ಪರಿಗೆಯಂ ಕೆಂಬಿಸಿಲಿನುರುಳ
ನ್ನೊಡ್ಡಿ ಸೆರೆವಿಡಿದನಿದೊ ಮೂಡೆಂಬ ಭಿಲ್ಲಂ ! ॥ ೧ ॥

2. ಬಾನೊಳೆಡಗೆಯ್ಯುಷೆಯ ! ಕಳ್ಳಿನಂಗಡಿಯಿಂ
[1]ಕೆರಳ್ವ ದನಿಯೆನ್ನ [2]ಕನವರಿಸಿತೀ ನುಡಿಯಿಂ—
'ಏಳಿ ಮಕ್ಕಳೆ ತುಂಬಿಸೀ [3]ತಿಳಿಗೆ ತೀವೆ
ಮದಿರೆ ಬತ್ತದ ಮುನ್ನ [4]ಬಾಳ ತಿಳಿಯೆಡೆಯಿಂ' ॥ ೨ ॥

3. ಕೋಳಿ ಕೆಲೆವುದೆ, ಕಳ್ಳಿನಂಗಡಿಯ ಮುಂದು
ನಿಂದರೊದರಿದರಾಗ ತೆರೆ ಕದವನೆಂದು !
ಬಲ್ಲೆ ನೀನೆನಿತಣಂ ತಳುವೆವಾವಿಲ್ಲಿ,
ತೆರಳಲೊಮ್ಮೆಗೆ ಮರಳಿ ಬರಲಾರೆವೆಂದುಂ ! ॥ ೩ ॥

5. ಚಿರಜೈತ್ರವಿಂದೆಲ್ಲಿ [5]ಅಸುಗೆಯಾ ಕಾನಂ ?
ಎಲ್ಲಿ ಬಲ್ಲರೆ [6]ಕೃಷ್ಣೆಯಕ್ಷಯಾಧಾನಂ ?
ದ್ರಾಕ್ಷೆಯಾದೊಡೆ ಸುರಿಗು ಮುನ್ನಿನಿನಿಗೆಂಪಂ,
ನೀರ ಕರೆಯಿಂದಿನ್ನುಮಲರ್ಗುಮುದ್ಯಾನಂ ॥ ೪ ॥

1 ಅರಚುವ 2 ಕನಸಿಂದ ಎಚ್ಚರಿಸು 3 ತಿಳಿ=ಪಾನಪಾತ್ರ 4 ಬಾಳ=ಜೀವನದ.
5. ಅಶೋಕವನ. 6 ದ್ರೌಪದಿಯ ಅಕ್ಷಯ ಪಾತ್ರ

6. ಸಿರಿಗನ್ನಡದಿ [7]ನಿಷಾದಸ್ವರಕೆ ಸಂದು
ಕಳ್ಳು ಕೆಂಗಳ್ಳು ಕಳ್ಳೆಂದು ಕುಕಿಲೊಂದು
ನೀಡುತಿದೆ ಮನವಿಯಂ ಮಾಂದಳಿರ್ಗೆ ಕೂಗಿ
ತನ್ನ ಕರಿ ಕೆನ್ನೆಯಂ ಕೆಂಪೇರಿಸೆಂದು. ॥ ೫ ॥

7. ತಿಳಿಯ ತುಂಬಿಸು! ಸುಗ್ಗಿಯಲರ ಬೆಂಕಿಯಲಿ
ಹಂಬಲದ ಕಂಬಳಿಯ ನೀಂಟಶಂಕೆಯಲಿ;
ಕಾಲವಕ್ಕಿಗೆ ತುಸವೆ ಹಾರಲಿದೆ ದಾರಿ—
ಮೇಣದಕೊ ಮಿಳ್ಳಿಸಿತು ಬಿಚ್ಚೆರಂಕೆಯಲಿ! ॥ ೬ ॥

8. ನೋಡ, ಹಗಲೊಡನೆ ಸಾಸಿರ ಹೂಗಳೆದ್ದು,
ಸಾಸಿರಂ ಚೆದರಿ ಮಣ್ಣಾದುವಿಳಿಬಿದ್ದು;
ಮಾಧವಿಯ ಮಲರ್ಛವೀ ಮೊದಲ ಮಧುಮಾಸಂ
ಕೊಂಡೊಯ್ವುದೆನಿತೊ ಸಿರಿಯಣುಗರಂ ಕದ್ದು! ॥ ೭ ॥

11. ಇಲ್ಲಿ ರೆಂಬೆಯ ನೆಳಲಲಿನಿರೊಟ್ಟಿಯೊಂದು,
ಕಳ್ಳ ಬಿಂದಿಗೆಯೊಂದು, ಸವಿಗಬ್ಬವೊಂದು;
ನೀನೆನ್ನ ಬಳಿಯೆ ಕಾಡಲಿ ಹಾಡುವಂದು—
ಕಾಡೆ ಗಡ ಸಗ್ಗದಿಂದೆನಗೆ ಲೇಸಂದು! ॥ ೮ ॥

12. ಬಗೆವರಿಳೆಯುಳಿಯಾಳ್ತನದಿ ಕೆಲಬರಿನಿದಂ,
ಕೆಲಬರಿನ್ನಯ್ತರುವ ಸಗ್ಗದಲಿ ಬಿನದಂ;
ಕಡವನೀಡಾಡು, ದಕ್ಕಿಸು ಕೆಯ್ಯ ರೊಕ್ಕಂ—
ಏಕೆ ಕಿವಿಗೆಟಕದಿಹ ಜಯಭೇರಿ ನಿನದಂ? ॥ ೯ ॥

13. ನೋಡ ನೀನತ್ತಿತ್ತಲಲರ್ವ ತಾವರೆಯಂ—
'ಜಗದಿ ನಗುತಾಂ ಬರುವೆನರಿಯನೇ ಪರಿಯಿಂ;
ಒಡನೆನ್ನ ಹಿಮ್ಮಣಿಯ ಹಗ್ಗಮಂ ಹರಿದು
ಕಡವರವನೆರಚಿ ತುಂಬಿಸುವೆನೀ ಕೆರೆಯಂ' ॥ ೧೦ ॥

7. ಸಪ್ತ ಸ್ವರಗಳಲ್ಲಿ ತೀವ್ರತಮವಾದ 'ನಿ' ಎಂಬ ಕೊನೆಯ ಸ್ವರ

16 ಹಗಲಿರುಳ ಪಱಿವಿಡಿಯೆ ತೆರಬಾಗಿಲಂತೆ,
ಬಗೆಯೀ ಜಗಂ ಗಡಾ ಮುರುಕು [8]ತಳಿಯಂತೆ;
ತನ್ನ ಗಳಿಗೆಯ ಪೆಂಪನರಸನಾ ಹಿಂದೆ
ಮೆರಸುತರಸಂ ಪೋದನಿಲ್ಲಿ ಬಂದಂತೆ ॥ ೧೧ ।

17. ಗದರುತಿದೆ ಪುಲಿಯಂತೆ, ಲೊಚಕುತಿದೆ ಹಲ್ಲಿ
ಮುನ್ನರಸರೊಲಿದು ನಲಿದರಮನೆಗಳಲ್ಲಿ;
ಉರುಬೇಂಟೆಗನ ಮಣ್ಣಿಮೊಲ್ಲಿಯುಂ ಕತ್ತೆ
ಕೆರೆಯೆ, ಕನಸಿಲ್ಲದೊರಗಿಹನರಸನಲ್ಲಿ ॥ ೧೨ ।

18. ಎದೆನೀರ್ ಬಸಿದ ವೀರರೊರಗಿದೆಡೆಯಿಂದ
ಹೂತ ಕಣಿಗಿಲ ಕಿಸುವ ಕಣಿಗಿಲೆಲ್ಲಿಂದ?
ತಿಳಿಯೆ ತೋಂಟವ ನಗಿಸುವೀ ಮೊಲ್ಲೆಯಿಲ್ಲಿ
ಉದಿರ್ದುವಂದೊಮ್ಮೆ ಚೆಲುವೆತ್ತ ತುರುಬಿಂದ ॥ ೧೩ ।

19. ತನ್ನ ತನಿ ಹಸುರಿನೀ ತೊರೆಯುಲಿಗೆ ಗಱಿಯುಂ
ಬಱಿಸುವಾವ್ನೆಮ್ಮಿರುವ ಹಂಬಿನೀ ನಿಱಿಯೇಂ!
ಮೆಲ್ಲನಿತೆ ಮಾಲು! ಮೇಣಾರರಿವರಮುಮಾ
ಯಾವೊಮ್ಮೆಯಿಂದುಟಿಯಿನಿದು ಚಿಗಿತ ಪಱಿಯುಂ? ॥ ೧೪

20. ಹಿಂದಣನುತಾಪ ಮುಂದಣ ಭಯವ ಮರಸಿ
ಇಂದನೊಸೆಯಿಪ ತಿಳಿಗೆ ತುಂಬು ನನ್ನರಸಿ—
ನಾಳೆ ಎಂಬೆಯ? ಬಲ್ಲೆನೇನಾನೆ ನಾಳೆ
ನಿನ್ನೆಗಾಗೆನೆ ಸಂದ ಸಾಸಿರಂ ಬೆರಸಿ? ॥ ೧೫

24. ಇಂದಿಗೆಂದಣಿಗೆಯ್ವ ತವಕಿಗಱಿಗೆಲ್ಲ
ಮೇಣ್ ನಾಳೆಯುಂ ನಿಲುಕಿ ನಿಟ್ಟಿಪಱಿಗೆಲ್ಲ
ಕೂಗುತಿದೆ ಕತ್ತಲೆಯ ಕಾವಲಿನ ಕೋಳಿ—
'ಮರುಳೆ ಉಡುಗೆರೆಯೆ? ಇಲ್ಲಿಲ್ಲವಲ್ಲಿಲ್ಲ!' ॥ ೧೬

8 ತಳಿ_ಸತ್ರ, ಧರ್ಮಶಾಲೆ

26 ಅರಿದರಾಡಲಿ; ಸೇರ ಗೆಳೆಯ ನೀ ಬಂದು
ಮುದಿಯ ಖಯ್ಯಮನೆಡೆಯ ನಿಸದವಿನಿತೊಂದು—
ಎಗರುತಿದೆ ಬಾಳ್ವೆ, ಸವಿ ಸುಳ್ಳು ಮಿಕ್ಕೆಲ್ಲಂ;
ಒಮ್ಮೆ ತಾನರಳ್ದ ಹೂವಿನ್ನರಳದೆಂದುಂ ! || ೧೭ ||

27. ಹರೆಯದಲಿ ಲವಲವಿಸಿ ನಾ ಕಲಿಯಲೆಂದೆ
ಬಲ್ಲವರ ಸಂತರೆಲ್ಲರ ಬಳಿಗೆ ಸಂದೆ;
ಸುಳಿನುಡಿಗೆ ಕಿವಿತೊಳಲಿ ಕಡೆಗೆಂದುಮಂತೆ
ಒಳಹೊಕ್ಕ ಬಾಗಿಲಿಂದಲೆ ಹೊರಗೆ ಬಂದೆ ! || ೧೮ ||

28. ಬಲ್ಲರಿಂ ಕಲ್ತರಿವೆಯುಂ ಬಿತ್ತುತಂತೆ,
ಕೆಯ್ಯಾರೆ ಗೇದೆ ನಾನದ ಬೆಳಸುವಂತೆ;
ಕೊನೆಗೆ ನಾನಳೆದ ದವಸಂ ಕಣಾ ಇನಿತೆ—
'ನೀರಂತೆ ಬಂದೆ, ಪೋದಪೆ ಗಾಳಿಯಂತೆ' || ೧೯ ||

29. ಅರಿಯೆನೇಕೆಂದರಿಯೆನೆಲ್ಲಿಂದವೆಂದು
ಜಗದಿ ಹರಿತಂದೆ ನೀರಂತೆ ನಾ ಬಂದು;
ಇಲ್ಲಿಂದ ಬಟ್ಟಬಯಲಿನ ಗಾಳಿಯಂತೆ
ಎಲ್ಲಿಗೆಂದರಿಯದಾಂ ಬೀಸುವೆನು ಮುಂದು || ೨೦ ||

30. ಕೇಳ್ದರಾರೆನ್ನನಿಲ್ಲಿಗೆ ನೂಕುವಂದು ?
ಕೇಳ್ವರಾರಿನ್ನುಮಿಲ್ಲಿಂ ದೂಡುವಂದು ?
ಈ ದಿಟ್ಟತೆಯ ನೆನವ ಮುಳುಗಿಸಲು ತಾರ
ತುಂಬುತಿಳಿಯೊಂದು, ಮೇಣ್ಪಾತ್ರ ಇನ್ನೊಂದು ! || ೨೧ ||

31. ನಡುಬುವಿಯಿನೆದ್ದು ಗೋಪುರವನೇಳನೆಯಾ
ದಾಂಟಿ ನಾ ಮಂಡಿಸಿದೆ ಗದ್ದುಗೆಯ ಶನಿಯಾ;
ಬಿಗುಗಂಟನೆನಿತೊ ಬಿಚ್ಚಿದೆನು ಹಾದಿಯಲಿ,
ನರರ ನಿಯತಿಯ ಗಂಟನೊಂದುಳಿದು ಕೊನೆಯಾ || ೨೨ ||

32. ಮುಚ್ಚುಕದವಿದೆ, ಬೀಗ ತೆಗೆಯೆ ಗೊತ್ತಿಲ್ಲ;
ಬಿಚ್ಚು ತೆರೆಯಾಚೆ ನನ್ನಿಣಿಕಲಳವಲ್ಲ;
ನನ್ನ ನಿನ್ನೆಂಬ ಕಿರುಕುಳದಿ ಲವಕಾಲಂ,
ಬಳಿಕ ನೀನಾನೆಂಬ ಸುದ್ದಿಯುಮಿಲ್ಲ || ೩೨ ||

33. ಆಗಳಾನುರುಳ್ವ ಬಾಂಗಿಟ್ಟೆನೀ ಮೊರೆಯಂ—
'ಏ ಸೊಡರನೆತ್ತಿ ವಿಧಿ ಬಳಿವಿಡಿಸಿತರಿಯೆಂ
ಕತ್ತಲೆಯೊಳೆಡಹುತಿಹ ತನ್ನ ಹಸುಳೆಗಳಂ ?'—
'ಅಂಧಮತಿ' ಎಂದು ಕೇಳಿಸಿತು ಪಡಿಯೊರೆಯಿಂ || ೩೩ ||

34. ಬಳಿಕ ಬಾಳ್ವೆಯು ಬುಗ್ಗೆಯೊಳಗುಟ್ಟ ಹೀರೆ,
ಈ ಮಣ್ಣ ದೊನ್ನೆಗೆನ್ನಯು ತುಟಿಯುನೂರೆ,
ತುಟಿಗೆ ತುಟಿಯೊತ್ತಿ ಮಿನುಕಿತು—'ಬದುಕಿಹನ್ನಂ
ಕುಡಿ! ಮಡಿಯಲೊಮ್ಮೆಗೆಂದುಂ ಮರಳಲಾರೆ!' || ೩೪ ||

35. ತೋಚುತಿದೆ ನನಗಿಂತು [9]ಕದಿದು ತೊದಲುತ್ತಂ
ಮರುನುಡಿದ ದೊನ್ನೆ ಮುನ್ನೊಮ್ಮೆ ಸುಖಿಸುತ್ತಂ
ಬಾಳ್ದುದೆಂದಾನೊತ್ತಿದದರ ತಣ್ದುಟಿಯಿಂ
ದೆನಿತೊ ಕೊಡಲೆನಿತೊ ಕೊಳಲಾರ್ತುದದು ಮುತ್ತಂ' || ೩೫ ||

36. ಒಂದಿನಂ ಮುಚ್ಚಂಜೆ ಹಸಿಮಣ್ಣನುಂಡೆ
ಯಂ ಗುದ್ದುವೊಡ್ಡನಂ ಸಂತೆಯಲಿ ಕಂಡೆ,
ನಾಲಗೆಯು ಸೋಲದುಲಿಯಿಂ ಗೊಜಗಿತಿಂತು—
'ಮೆಲ್ಲನೆಲೆ ತಟ್ಟಣ್ಣ! ನನ್ನೊಳೀ ದಿಂಡೇ?' || ೩೬ |

37. ತಿಳಿಯು ತುಂಬಿಸು! ಎಂತು ನಮ್ಮಡಿಯ ಹಿಂದು
ಹೊತ್ತು ನುಣ್ಚುತಿದೆಂದು ಮರುಗಲೇಕಿಂದು?
ಇನ್ನುವಾಗದ ನಾಳೆ, ಅಳಿವೋದ ನಿನ್ನೆ
ಯನ್ನೇಕೆ ಹಲುಬುವೈ, ಸವಿದೋರಲಿಂದು ? || ೩೭

೯. ಕದಿದು = ಮರೆಯಾಗಿ.

38. ಒಗ್ಗಳಿಗೆಯುನಿತೆ ಪ್ರಳಯದ ಪಾಳಿನಲ್ಲಿ,
ಒಗ್ಗಳಿಗೆ ಬಾಳ್ವೆಯೊರತೆಯಿನೀಂಟುವಲ್ಲಿ;
ಕಂತುತಿವೆ ತಾರೆ, ಹೊರವಟ್ಟುದಿದೊ ಪಂಸೆ
ನಾಸ್ತಿಯರುಣೋದಯಕೆ; ತಳುವೆ ಏಕಿಲ್ಲಿ? ॥ ೩೯ ॥

40. ಬಲ್ಲಿರೈ, ಗೆಳೆಯರಿರ, ನಾನೆನಿತೊ ಹಿಂದೆ
ಮನೆಯೊಳವುತಣವಿತ್ತು ಹೊಸಬಳಂ ತಂದೆ!
ಮುದಿಯು ಗೊಡ್ಡಿಯು ಮತಿಯ ಬಾಗಿಲಿಂದಟ್ಟಿ,
ದ್ರಾಕ್ಷೆಯಣುಗಿಗೆ ಮೆಚ್ಚಿ [10]ಮರುವಾಳ ನಿಂದೆ ॥ ೪೦ ॥

42. ಕಳ್ಳಂಗಡಿಯು ಕಿಸಕದದಿ ಕೊಂಚ ಮುನ್ನಂ
ಮಬ್ಬಿನಲಿ ಮರಸಿ ಯಕ್ಷನೊಲೊಬ್ಬ ಚೆನ್ನಂ
ಹೆಗಲ ಮೇಲ್ ಕೊಡವೆತ್ತಿ ಬಂದನಾ ಕೊಡದಿಂ
ಸವಿಯಲೆನಗಿತ್ತನೇಂ ದ್ರಾಕ್ಷೆಯಿನಿಗೆನ್ನಂ[11]! ॥ ೪೧ ॥

46 ಕೆಳಗೆ ಮೇಲೊಳಗೆ ಹೊರಗಂ ಸುತ್ತು ಮುತ್ತು
ಮೋಡಿಯಾ ನೆಳಲ ನಾಟಕಮಿದಂ ಗೆತ್ತು;
ಮಂಕು ಗೊಂಬೆಗಳಂತೆ ಬಳಸಿ ತಿರುಗುವೆವು
ಗೂಡ ನಡುಬತ್ತಿಯಾ ನೇಸರಿನ ಸುತ್ತು ॥ ೪೨ ॥

47. ನೀಂ ಕುಡಿವ ಮದಿರೆ ನೀನೊತ್ತುತಿರುವಧರಂ
ಮುಗಿವೊಲೆಲ್ಲಂ ಮುಗಿಯೆ ನಾಸ್ತಿಯಲಿ, ಬೆದರಂ
ಮಾಣ್ದಿದಂ ನಂಬು—ನೀನಿರುವನ್ನಮೆಂದುಂ
ನಾಸ್ತಿ ನೀಂ ಗಡ, ಕಡಿಮೆಯಾಗೆ ನೀನದರಿಂ ॥ ೪೩ ॥

48. ತೆರೆದ ತಾವರೆ ತೀವೆ ತೊರೆತೊರೆಯ ತಡಿಯಾ,
ಮುದಿಯ ಖಯ್ಯಮನೊಡನೆ ಮಿರುಮಧುವ ಕುಡಿಯಾ!
ಕಾಲಕೂಟವ ನಿನ್ನ ತುಟಿಗೊತ್ತೆ ಕಾಲಂ,
[12]ಜುಣುಗದಲೆ ಹೀರದಂ, ಕೇಳೆನ್ನ ನುಡಿಯಾ ॥ ೪೪ ॥

10 ಎಳಹನೆಯ ಮದುವೆ 11 ಇನಿಗೆನ್ನಂ=ಸವಿಯಾದ ಕೆಂಬುಣ್ಣ. 12 ಹಿಂಜರಿಯದೆ

49. ಹಗಲಿರುಳ ಹಾಸಂಗಿಯೊಡ್ಡಿ ಮಾನವರಂ
ಕಾಯನಾಗಿಸಿ ವಿಧಿಯುದಾಡಿಸುವುದವರಂ,
ಸುತ್ತಿಸುತಲತ್ತಿತ್ತ ಹೊಯ್ದು ತಡೆಗಟ್ಟಿ,
ಒಂದೊಂದನೊಂದಿಸುಗು [13]ಕಂಟಲಿಯು ತವರಂ ॥ ೩೫ ॥

50 ಕೇಳ್ವುದೇನಹುದಲ್ಲವೆಂದು ಪುಟಚೆಂಡು ? —
ನೆಗೆವುದೆಡಬಲಕೆಸುಗನೆಸೆಯು ಕೆಯ್ಕೊಂಡು !
ಮೇಗಣಿಂ ನಿನ್ನ ಕೆಳರಂಗಕೆಸೆದವನೇ
ಬಲ್ಲನವ, ಬಲ್ಲನದನೆಲ್ಲ ಮುಂಗಂಡು ! ॥ ೩೬ ॥

51 ಸರಿಸರಿದು ಬರೆಯುತಿದೆ ಬೆರಳು, ಬರೆಬರೆದು
ಸರಿಯುತಿದೆ ! ನಿನ್ನ ಸಯ್ಪುಕಟ ನಿನ್ನರಿದು
ಹಿಂಗಿಸದದನ್ನೊರಸಲರೆ ಬಂತಿಯನಿತಂ !
ತೊಳಸೆಯೊಂದಕ್ಷರವ [14]ಕಣ್ಣಾರೆ ಕರೆದು ! ॥ ೩೭ ॥

52 ಕವಿಚಿದೀ ದೊನ್ನೆಯುಂ ಬಾನೆಂಬರರಿಯೆ,
ಅಳಿದುಳಿದು [15]ಹುಳಿದಾಡುತಿಹೆವಿದರ ಮರೆಯೆ,
ಬರಿದೇತಕಿದಕೆ ಕಯ್ಮುಗಿವೆ ಕಾಯೆಂದು ? —
ನಮ್ಮೊಲಿದುಮಕ್ಷಮುಂ ತಿರಿವುದೀ ಪರಿಯೇ ! ॥ ೩೮ ॥

56. ಸತ್ಯದೀಧಿತಿ ಎನ್ನನಕ್ಕರೆಯು ಜ್ಯೋತಿ
ಗೆಯ್ಯಲಲ್ಲವೆ ಕಿನಿಸಿನೆನ್ನನು ವಿಭೂತಿ;
ಕಳ್ಳಂಗಡಿಯೊಳದರ ಕಂಡ ಸುಳಿವೆ ವರಂ,
ಕಳಕೊಳ್ವುದರಿನದಂ ದೇಗುಲದಿ ಪೂರ್ತಿ ॥ ೩೯ ॥

59. ಮುಂದೆ ಕೇಳ್, [16]ಕಾತಿಕೆಯು ಮಳೆ ಮುಗಿದು ಬಂದು
[17]ಸಿಂಗಶ್ವೆರೆ ಇನ್ನುವೊಗೆಯುದ ಸಂಜೆಯೊಂದು
ಆ [18]ಕೆಳವ [19]ಕೋವನಂಗಡಿಯುಲ್ಲಿ ನಿಂದೆ,
ಮಣ್ಣ ಮಂದಿಗಳೋರಣಂ ಹಿಂದು ಮುಂದು ॥ ೪೦ ॥

13 ಚೀಲ 14 ಕಣ್ಣು ಬತ್ತುವ ವರೆಗೆ 15 ಹುಳುವಿನಂತೆ ತಿವಳು 16 ಆಷಾಢ ಮಾಸ 17 ಸಿಂಹಮಾಸದ ಚಂದ್ರ 18 ಮುದುಕ 19 ಕುಂಬಾರ

60. ಚೋದ್ಯಮೇನೆಂಬೆನಾ ಮಣ್ಣೊಡಲರಲ್ಲಿ
ತೊದಲಲಮ್ಮನಿಬರನಿಬರು ಮೂಗರಲ್ಲಿ;
ಅನ್ಯರಿಂ ಸಡಿಲುಲಿಯು ತಟ್ಟನಿಂತೊಂದು—
'ಕುಂಬವಾರ್? ಕುಂಬಾರನಾರ್? ಭೇದವೆಲ್ಲಿ?' || ೬೧ ||

61. ಬರಿದಲ್ತು ನನ್ನೊಡಲನೆಂದುದಿನ್ನೊಂದು
ಮಹಿಯ ಮಣ್ಣಿಂ ಮೆತ್ತಿದುದು, ನನ್ನನಿಂದು ।
ಸೂಕ್ಷ್ಮದಿಂದೀ ರೂಪನೊಡರ್ಚಿದವನಿಳೆಯಾ
ಮಣ್ಣೊಳಗೆ ಮಗುಳೆ ಕಲಸುವನೇಕೆ ಮುಂದು? || ೬೨ ||

62 'ಹಟಮಾರಿಯುಕ್ಕೆ ತಾನಾದೊಡಂ ಬಾಲಂ
ಪಾಲ್ಕುಡಿದ [20]ಕುಡಿಕೆಯನ್ನೆಸಗನಿಪ್ಪಾಲಂ,'
ಎಂದುದಿನ್ನೊಂದು, 'ತಾನಕ್ಕರೆಯಿನೊಪ್ಪಿ
ಬಾಂದೊಡವೆಯೊಡೆವನೇ ಹಿಂಗಿನಿಸ ಕಾಲಂ?' || ೬೩ ||

63. ಮರುನುಡಿದರಿಲ್ಲ, ಮೋನಂ, ಬಳಿಕದೊಂದು
ಸೊಟ್ಟ ಮಣ್ಣೊಡಲು ಮೆಲ್ಲುಲಿಯಿನಿಂತೆಂದು—
'ಕೊರಳ ಕೊಂಕಿಗೆ ನನ್ನನೆಲ್ಲರಣಕಿಪರು—
ಕೆಯ್ನಡುಗಿದನೆ ಕೋವನೆನ್ನ ಬಾಂಬಂದು?' || ೬೪ ||

65. ಬಳಿಕೊಂದು ನಿಡುಸುಯ್ದುದಿಂತೆನ್ನ ಮಣ್ಣಿಂ
[21]ನಿಡುಮರವೆಯೊಣಗಿಸೆನಗಾದುದೀ ಬಣ್ಣಂ,
ಹಳೆಯ ಬಳಕೆಯ ಕಳ್ಳಿನಿಂದೆನ್ನ ತೀವೆ,
ನನಗಂತರಿಂ[22] ಮರಳಿ ಸೇರ್ಗುವಾ ತಿಣ್ಣಂ || ೬೫ ||

66. ಒಂದೊಂದರಂತೆಯಾ [23]ಭಾಜನಗಳುಲಿಯೆ,
ಕಂಡುದೊಂದೆಲ್ಲರರಸುವ ಹೆರೆಯ ಕಳೆಯು;
ಒಡನೆ ಒಬ್ಬರನೊಬ್ಬರಡಚಿ ಕರೆದಣ್ಣಾ,
ಕಿರಿಚುತಿದೆ ಕಳ್ಳ ಕಾವಡಿ, ಕೇಳ, ಬಳಿಯೆ! || ೬೬ ||

20 ಪಾನ ಪಾತ್ರ 21 ದೀರ್ಘ ವಿಸ್ಮೃತಿ 22 ಅಂತರಿಂ=ಕ್ರಮೇಣ
23 ಭಾಜನ=ಪಾತ್ರ

67. ದ್ರಾಕ್ಷೆಯಿಂ ಹುಯ್ಯೆನ್ನ ಕಂದು ಜೀವನಕೆ,
ಮೀಸೆನ್ನ ಕಳ್ಳೆರೆದು [24]ತಣ್ತು ಭಾಜನಕೆ,
ದ್ರಾಕ್ಷೆಯೆಲೆಯಿಂ ಹೆಣೆದ ಹೆಣದುಡೆಯ ಹೊದಿಸಿ,
ಮಡಗೆನ್ನನೊಯ್ದು ಮೇಣ್ ಮಧುರ ಮಧುವನಕೆ ॥ ೪೭ ॥

72. ಅಕಟ ಮಾಧವಿಯೊಡನೆ ಮಧುಮಾಸ ಸಂತು !
ಹರೆಯದೀ ಸರುವಾಲೆಯೋದದೇ ಮುಂತು ?
ಯಾರರಿವರೀ ಮರದಿ ಬಗ್ಗಿಸಿದ ಕುಕಿಲು
ಎಲ್ಲಿಂದ ಬಂತು ? ಪಾರಿದುದೆಲ್ಲಿಗಂತು ? ॥ ೪೮ ॥

74. ಬಡವಾಗದೆನ್ನ ಮುದ್ದಿನ ತುಂಬುವೆರೆಯೇ,
ಮರಳಿ ಬಾಂಬೆರೆ, ನೋಡ, ಮೂಡುತಿದೆ ನೆರೆಯೆ !
ಎನಿತೊ ಸೂಳಿನ್ನುಮೀ ಶಶಿ ನಿಲುಕುತಕಟಾ,
ಹೊಂಚುವುದು ನನ್ನನೀ ತೋಂಟದಲಿ—ಬರಿಯೆ ! ॥ ೪೯ ॥

75. ಮಿರುವಜ್ಜೆಯಿಂದ ನೀ ಹಸಲೆಯಲಿ ಕೆಳೆಯಿಂ
ತಾರೆಯೊಲು ಚದರಿರುವ ಬಿದ್ದಿನರ ಬಳಿಯಿಂ
ಸುರಿದು ಸರಿವಂದೆನ್ನ ಕುಳಿತಿದ್ದ ಕಡೆಗೆ
ಮುಟ್ಟುವುದೆ, ಮಗಚಿನಿಯೆ ಬರಿದೊಂದು ತಿಳಿಯಂ! ॥ ೫೦ ॥

---

24 ಸತ್ತು ತಣ್ಣಗಾದ ದೇಹ

## ಕೃಷ್ಣಾರ್ಪಣ

ನಿನ್ನೊಳೆನ್ನಯ ಭಕ್ತಿ, ಅವಳೊಳನುರಕ್ತಿ—
ತೋರದನುರಕ್ತಿ, ಭಕ್ತಿಯನೆಂತು ಕಾಂಬೆ ?
ನನ್ನ ಕೃಷ್ಣೆಗೊ, ನನ್ನ ಕೃಷ್ಣನಿಗೊ, ವ್ಯಕ್ತಿ
ದ್ವಯಗಳದ್ವಯಕೊ, ಕೃಷ್ಣಾರ್ಪಣವಿದೆಂಬೆ.

# ತಿದ್ದುಪಡಿ

| ಪುಟ | ಬಂತಿ | ತಪ್ಪು | ಒಪ್ಪು |
|---|---|---|---|
| 1 | 10 | ಮುಗಿದುದೆಯಾಟ | ಮುಗಿದುದೆಡೆಯಾಟ |
| 2 | 1 | ಆಣು | ಅಣು |
| 16 | 5 | ನಟಸುವಿತಲಿಯು | ನಟಿಸುವಿತಲಿಯು |
| 21 | 7 | ಪ್ರಕಟಪುದಲೆಯ | ಪ್ರಕಟಿಪುದಲೆಯ |
| 22 | 12 | ಹೆರರ್ಗೀರ್ಥಯದರ್ಥ | ಹೆರರ್ಗೀಯುದರ್ಥ |
| 26 | ಅಡಿಬರಹ 3 | ಎಚರವಾಗು | ಎಚ್ಚರವಾಗು |
| 45 | 15 | ಮನಗೆ | ಮನೆಗೆ |
| 56 | 78 | ವುಗಿದುವು | ಮುಗಿದುವು |
| 74 | 84 | ಶ್ಜಮಂ | ಶ್ರಮಂ. |